02 December 2025 Tuesday | SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

info.varthaman@gmail.com

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 45 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

**ಭಾವನಾಂತರಂಗ**

ಯಾವಾಗಲೂ ಅನಾದರ ತೋರಿದವರು,
ಯಾವುದೋ ಕಾರಣಕ್ಕೆ ಆದರಿಸಲು
ತೊಡಗಿದರೆ ಮನಸ್ಸು ಕಾರಣ
ಹುಡುಕುತ್ತದೆ!
ಸ್ನೇಹಾ ಆನಂದ್

**ಒಂದೊಳ್ಳೆ ಮಾತು**

ಕೋಪ ಅನ್ನೋದು
ವೇಗವಾಗಿ ಬಂದು
ಒಳ್ಳೆತನವನ್ನು ಕ್ಷಣದಲ್ಲಿ ನಾಶ
ಮಾಡಿ ಬಿಡುತ್ತದೆ........
ಆದರೆ ತಾಳ್ಮೆ ಅನ್ನೋದು
ತಡವಾಗಿ ಬಂದು ಒಳ್ಳೆತನವನ್ನು
ಶಾಶ್ವತವಾಗಿ ಉಳಿಯುವಂತೆ
ಮಾಡುತ್ತದೆ...!!!
ಮೈಲಾರ ಸಾವಿತ್ರಿಬಾಯಿ

## ರಾಜ್ಯ ರಾಜಕಾರಣ ನಾಯಕತ್ವ ಬಿಕ್ಕಟ್ಟು ಪರಿಹಾರಕ್ಕೆ ಯತ್ನ

# ಇಂದು ಮತ್ತೆ ಜಂಟಿ ಬ್ರೇಕ್‌ಫಾಸ್ಟ್

**ಬೆಂಗಳೂರು:** ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಸೇರಿ ಮಂಗಳವಾರ ಮತ್ತೊಂದು ಉಪಾಹಾರ ಕೂಟ ನಡೆಸಲಿದ್ದಾರೆ. ಈ ಬಾರಿ ಡಿಸಿಎಂ ಡಿ.ಕೆ.ಶಿವಕುಮಾರ್ ನಿವಾಸಕ್ಕೆ ಸಿಎಂ ಸಿದ್ದರಾಮಯ್ಯ ಭೇಟಿ ನೀಡಿ ಉಪಾಹಾರ ಸೇವಿಸಲಿದ್ದಾರೆ. ಸಿಎಂಗಾಗಿ ಡಿಕೆಶಿ ನಾಟಿಕೋಳಿ ಸ್ಟೈಲ್ ಉಪಾಹಾರ ಮಾಡಿಸುತ್ತಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ನಾಳೆ ಡಿ.2ರಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಿವಾಸಕ್ಕೆ ಭೇಟಿ ನೀಡಲಿದ್ದಾರೆ. ರಾಜ್ಯದಲ್ಲಿ ಆಡಳಿತಾರೂಢ ಕಾಂಗ್ರೆಸ್‌ನಲ್ಲಿ ಹಲವು ತಿಂಗಳಿಂದ ನಡೆಯುತ್ತಿರುವ ಅಧಿಕಾರ ಹಗ್ಗಜಗ್ಗಾಟದ ನಂತರ ಒಗ್ಗಟ್ಟು ಪ್ರದರ್ಶಿಸಲು ಮತ್ತು ಬಿಕ್ಕಟ್ಟಿಗೆ ವಿರಾಮ ಘೋಷಿಸಲು ಈ ಪ್ರಯತ್ನ ನಡೆಸಲಿದ್ದಾರೆ ಎನ್ನಲಾಗಿದೆ.

ಡಿ.ಕೆ ಶಿವಕುಮಾರ್ ಅವರು ಶನಿವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧಿಕೃತ ನಿವಾಸ 'ಕಾವೇರಿ'ಯಲ್ಲಿ ಉಪಹಾರ ಕೂಟದಲ್ಲಿ ಪಾಲ್ಗೊಂಡು ಒಗ್ಗಟ್ಟಿನ ಮಂತ್ರ ಜಪಿಸಿದ್ದರು. ಕಾಂಗ್ರೆಸ್ ಹೈಕಮಾಂಡ್ ನಿರ್ದೇಶನದ ಮೇರೆಗೆ ನಡೆದ ಬ್ರೇಕ್‌ಫಾಸ್ಟ್ ಸಭೆಯ ನಂತರ, ಇಬ್ಬರೂ ನಾಯಕರು ನಮ್ಮ ನಡುವೆ 'ಯಾವುದೇ ಗೊಂದಲ ಇಲ್ಲ' ಎಂದು ಘೋಷಿಸಿದ್ದರು. ರಾಜ್ಯದಲ್ಲಿನ ನಾಯಕತ್ವ ಬದಲಾವಣೆ ವಿಚಾರದಲ್ಲಿ ಹೈಕಮಾಂಡ್ ನಿರ್ಧಾರವನ್ನು ಪಾಲಿಸುವುದಾಗಿ ಇಬ್ಬರೂ ಹೇಳಿದ್ದರು.

ಇಬ್ಬರ ನಡುವಿನ ನಾಯಕತ್ವದ ಜಗಳಕ್ಕೆ ತಡೆಯೊಡ್ಡಲು ಹೈಕಮಾಂಡ್ ತೆಗೆದುಕೊಂಡ ಕ್ರಮವೆಂದು ಪರಿಗಣಿಸಲಾಗಿದೆ. ಡಿಸೆಂಬರ್ 8ರಿಂದ ಬೆಳಗಾವಿಯಲ್ಲಿ ನಡೆಯಲಿರುವ ವಿಧಾನಮಂಡಲ ಅಧಿವೇಶನಕ್ಕೂ ಮುನ್ನ, ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ಮುಂದುವರಿಯುವ ಸೂಚನೆ ಸಿಕ್ಕಂತಾಗಿದೆ.

ಕಾಂಗ್ರೆಸ್ ಸರ್ಕಾರ ನವೆಂಬರ್ 20ರಂದು ಐದು



### ನಾವಿಬ್ರೂ ಬ್ರದರ್ಸ್ ಇದ್ದ ಹಾಗೆ!

**ಬೆಂಗಳೂರು:** ನಾನು ಮತ್ತು ಸಿಎಂ ಸಿದ್ದರಾಮಯ್ಯ ಬ್ರದರ್ಸ್ ತರಹ ಕೆಲಸ ಮಾಡ್ತೀವಿ. ನಮ್ಮ ನಡುವೆ ಯಾವುದೇ ಗುಂಪು ಇಲ್ಲ ಎಂದು ಡಿಸಿಎಂ ಡಿಕೆ ಶಿವಕುಮಾರ್ ಮತ್ತೆ ಒಗ್ಗಟ್ಟಿನ ಮಂತ್ರ ಜಪಿಸಿದ್ದಾರೆ.

ವಿಧಾನಸೌಧದಲ್ಲಿ ಸೋಮವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಬ್ರೇಕ್‌ಫಾಸ್ಟ್ ಮೀಟಿಂಗ್ ವಿಚಾರ ನನಗೂ ಸಿಎಂಗೆ ಸಂಬಂಧಿಸಿದ ವಿಚಾರ. ನಾವಿಬ್ರೂ ಬ್ರದರ್ಸ್ ಥರ ಇದ್ದೀವಿ. ನಮ್ಮಲ್ಲಿ ಯಾವುದೇ ಗುಂಪುಗಾರಿಕೆ ಇಲ್ಲ ಎಂದು ನುಡಿದರು.

ನಮ್ಮಲ್ಲಿ ಯಾವುದೇ ಗುಂಪಿಲ್ಲ. ನಾವು ಹುಟ್ಟುವಾಗ ಒಬ್ಬರೇ, ಸಾಯುವಾಗಲೂ ಒಬ್ಬರೇ. ಹಾಗಾಗಿ ಗುಂಪು ಯಾಕೆ ಬೇಕು? ನೀವೆಲ್ಲ ಏನೇನೋ ತೋರಿಸ್ತಿದ್ದೀರ, ಸಿದ್ದರಾಮಯ್ಯದೊಂದು ಗುಂಪು, ಡಿಕೆಶಿ ಗುಂಪು ಅಂತ ನಮ್ಮಲ್ಲಿ ಗುಂಪು ಇಲ್ಲ ಎಂದು ಸ್ಪಷ್ಟಪಡಿಸಿದರು. ಹನುನಂತಯ್ಯ ವಿಧಾನಸೌಧ ಕಟ್ಟಿಸಿದ್ದರು.

ಪುಟ 2ಕ್ಕೆ

### ಸಿಎಂ ಕುರ್ಚಿಯಲ್ಲಿ ಸಿದ್ದು ಗಟ್ಟಿಯಾಗಿದ್ದಾರೆ: ಎಚ್‌ಸಿಎಂ

**ದಾವಣಗೆರೆ:** ಮುಖ್ಯಮಂತ್ರಿ ಸ್ಥಾನದಲ್ಲಿ ಸಿದ್ದರಾಮಯ್ಯ ಗಟ್ಟಿಯಾಗಿ ಕುಳಿತಿದ್ದಾರೆ. ಅವರೇ ಮುಂದುವರೆಯುತ್ತಾರೆ ಎಂದು ಸಚಿವ ಮಹದೇವಪ್ಪ ಹೇಳಿದರು.



ನಗರದಲ್ಲಿ ಸೋಮವಾರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಬದಲಾವಣೆ ವಿಷಯ ಪಕ್ಷದ ಮುಂದೆಯೇ ಇಲ್ಲ. ಅಂತೆ ಕಂತೆ ಮಾತುಗಳು ಈಗ ಯಾಕೆ? ಯಾವುದೇ ಗೊಂದಲ ಇರಬಾರದು ಎಂದು ಸಿಎಂ ಡಿಸಿಎಂ ಬ್ರೇಕ್ ಫಾಸ್ಟ್ ಮೀಟಿಂಗ್ ಮಾಡಿದ್ದಾರೆ ಎಂದರು.

ಹೈಕಮಾಂಡ್ ಹೇಗೆ ಹೇಳುತ್ತೋ ಹಾಗೇ ಐದು ವರ್ಷ ಸರ್ಕಾರ ನಡೆಸುತ್ತೇವೆ. ಮತ್ತೆ 2028ಕ್ಕೆ ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತದೆ. ಕ್ರಿಕೆಟ್ ಆಡುವ

ಪುಟ 2ಕ್ಕೆ

### ಭಿನ್ನಮತೀಯ ಚಟುವಟಿಕೆ ಇಲ್ಲ: ದಿನೇಶ್ ಗುಂಡೂರಾವ್



**ಮೈಸೂರು:** ಕಾಂಗ್ರೆಸ್‌ನಲ್ಲಿ ಯಾವುದೇ ಗುಂಪುಗಾರಿಕೆ, ಭಿನ್ನಮತೀಯ ಚಟುವಟಿಕೆ ಇಲ್ಲ. ಎಲ್ಲರೂ ಒಗ್ಗಟ್ಟಾಗಿದ್ದೇವೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಪುಟ 2ಕ್ಕೆ

## 11ಬಿ ಖಾತೆ ವಿತರಣೆಗೆ ಅಸ್ತು

**ಇ-ಸ್ವತ್ತು 2.0 ತಂತ್ರಾಂಶಕ್ಕೆ ಸಿಎಂ ಸಿದ್ದರಾಮಯ್ಯ ಚಾಲನೆ**

**ಬೆಂಗಳೂರು:** ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಸ್ಥಗಿತವಾಗಿದ್ದ 11ಬಿ ಖಾತೆ ವಿತರಣೆ ಹಾಗೂ ನಿವೇಶನ ನೋಂದಣಿ ಪುನಾರಂಭವಾಗಿದೆ. ಇದಕ್ಕಾಗಿ ಇ-ಸ್ವತ್ತು 2.0 ತಂತ್ರಾಂಶಕ್ಕೆ ವಿಧಾನಸೌಧದಲ್ಲಿ ಸೋಮವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ್ ಚಾಲನೆ ನೀಡಿದರು.



ಇ-ಸ್ವತ್ತು 2.0 ತಂತ್ರಾಂಶದಲ್ಲಿ 11ಬಿ ಖಾತೆ ಪಡೆಯಲು ಏಪ್ರಿಲ್ 7, 2025ರ ಹಿಂದೆ ನಿವೇಶನ ನೋಂದಣಿಯಾಗಿದ್ದರೆ ಅಥವಾ ಮನೆ ನಿರ್ಮಿಸಿದ್ದರೆ ಅರ್ಜಿ ಸಲ್ಲಿಸಬಹುದು. ಇ-ಸ್ವತ್ತು ತಂತ್ರಾಂಶದ ಮೂಲಕ 11ಬಿ ಖಾತೆ ಪಡೆಯಲು ಅರ್ಜಿ ಸಲ್ಲಿಕೆಗೆ ಮೂರು ತಿಂಗಳ ಕಾಲವಕಾಶ ಕಲ್ಪಿಸಲಾಗಿದೆ.

ಅರ್ಜಿ ಸಲ್ಲಿಕೆ ಪುನರಾರಂಭವಾಗಲಿದ್ದು, ಇನ್ಮುಂದೆ ಪಂಚಾಯಿತಿಗಳಲ್ಲಿ ಆನ್‌ಲೈನ್ ಹಾಗೂ ಆಫ್‌ಲೈನ್‌ನಲ್ಲಿ 11ಬಿ ಖಾತೆ ಪಡೆಯಬಹುದಾಗಿದೆ. ಅಕ್ರಮ ಕಾರಣಕ್ಕಾಗಿ ವರ್ಷದ ಹಿಂದೆ ಪಂಚಾಯಿತಿಗಳಲ್ಲಿ 11ಬಿ ಖಾತೆ ನೀಡಲು ಹಾಗೂ ನಿವೇಶನ ನೋಂದಣಿಯನ್ನು ರದ್ದುಗೊಳಿಸಲಾಗಿತ್ತು.

ಗ್ರಾಮ ಪಂಚಾಯಿತಿ ವ್ಯಾಪ್ತಿಗಳಲ್ಲಿ ಸ್ಥಳೀಯ ಯೋಜನಾ ಅಭಿವೃದ್ಧಿ ಪ್ರಾಧಿಕಾರದಿಂದ ಅನುಮತಿ ಪಡೆಯದೇ ನಿರ್ಮಾಣವಾಗಿದ್ದ ಬಡಾವಣೆಗಳ ನಿವೇಶನಗಳಿಗೆ 11ಬಿ ಖಾತೆ ಪಡೆಯಲು ಜಾತಕ ಪಕ್ಷಿಗಳಂತೆ ಕಾದುಕುಳಿತಿದ್ದ ನಿವೇಶನದಾರರಿಗೆ ಕೊನೆಗೂ ಮುಕ್ತಿ ದೊರೆತಿದೆ.

### ಡಿಜಿಟಲ್ ಸ್ಟ್ಯಾಂಪಿಂಗ್ ಜಾರಿ: ಕಂದಾಯ ಸಚಿವ

**ಬೆಂಗಳೂರು:** ಇ-ಸ್ಟ್ಯಾಂಪಿಂಗ್ ವ್ಯವಸ್ಥೆಗೆ ಸರ್ಕಾರ ಗುಡ್ ಬೈ ಹೇಳಿದೆ. ಹಂತಹಂತವಾಗಿ ಇ-ಸ್ಟ್ಯಾಂಪ್ ನಿಲ್ಲಿಸಲಾಗುವುದು ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ತಿಳಿಸಿದರು.



ವಿಕಾಸಸೌಧದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇನ್ನು ಮುಂದೆ ಡಿಜಿಟಲ್ ಛಾಪಾ ಕಾಗದಗಳ ಬಳಕೆಗೇ ಒತ್ತು ಕೊಡಲಾಗುತ್ತದೆ. ಡಿಜಿಟಲ್ ಇ ಛಾಪಾಕ್ಕೆ ಮತ್ತಷ್ಟು ಬಲ ತುಂಬಲು ಡಿಜಿಟಲ್ ಸಹಿಗೆ ಕಾನೂನಿನ ಮಾನ್ಯತೆ ನೀಡಲಾಗಿದೆ. ಇದಕ್ಕಾಗಿ, ಕರ್ನಾಟಕ ಸ್ಟಾಂಪು ತಿದ್ದುಪಡಿ ವಿಧೇಯಕ-2025 ಜಾರಿಯಾಗಿದೆ ಎಂದು ಹೇಳಿದರು.

ಇ-ಸ್ಟ್ಯಾಂಪ್ ಬದಲಿಗೆ ಡಿಜಿಟಲ್ ಇ-ಸ್ಟ್ಯಾಂಪ್ ವಿತರಿಸಲಾಗುತ್ತದೆ. ಸ್ಟಾಂಪಿಂಗ್ ದುರ್ಬಳಕೆ ತಡೆಗೆ ಈ ಕ್ರಮ ಕೈಗೊಳ್ಳಲಾಗಿದೆ. ನಕಲಿ ಚಲನ್ ಕೊಟ್ಟು ಉಪ ನೋಂದಣಾಧಿಕಾರಿಗಳಿಂದ ಛಾಪಾ ಕಾಗದ ಪಡೆಯುವುದಕ್ಕೆ ಕಡಿವಾಣ ಹಾಕಲು ಆನ್‌ಲೈನ್ ಮೂಲಕ ಶುಲ್ಕ ಪಾವತಿಸಲು ಆಧಾರ್ ದೃಢೀಕರಣ ಕಡ್ಡಾಯಗೊಳಿಸಲಾಗಿದೆ ಎಂದು ತಿಳಿಸಿದರು.

ನೋಂದಣ ಆಗದ ಅಗ್ರಿಮೆಂಟ್‌ಗಳಿಗೂ ಡಿಜಿಟಲ್ ಇ ಸ್ಟ್ಯಾಂಪ್ ಅನ್ವಯಿಸಲಿದೆ. ಛಾಪಾ ಕಾಗದ ತೆಗೆದುಕೊಳ್ಳಲು ಅವುಗಳನ್ನು ಮಾರಾಟ ಮಾಡುವ ಸ್ಥಳಗಳಿಗೆ ಜನ ಹೋಗಬೇಕಾಗಿತ್ತು. ಈಗ ಮನೆಯಲ್ಲಿ ಕೂತು ಛಾಪಾ ಕಾಗದ ಖರೀದಿ ಮಾಡಬಹುದು.

ಪುಟ 2ಕ್ಕೆ

### ಬೈಕ್‌ಗೆ ಜೀಪ್ ಡಿಕ್ಕಿ: ಎಲ್‌ಎಲ್‌ಬಿ ವಿದ್ಯಾರ್ಥಿ ಸಾವು

**ಹಾಸನ:** ಜೀಪ್ ಹಾಗೂ ಬೈಕ್ ನಡುವಿನ ಅಪಘಾತದಲ್ಲಿ ಎಲ್‌ಎಲ್‌ಬಿ ವಿದ್ಯಾರ್ಥಿ ಸಾವನ್ನಪ್ಪಿದ ಘಟನೆ ಬೇಲೂರು ತಾಲೂಕಿನ ಹಿರಿಅಸಡೆ ಗ್ರಾಮದ ಬಳಿ ನಡೆದಿದೆ. ಗ್ರಾಮದ ಚಂದನ್ (22) ಮೃತ ಯುವಕ. ಹಿಂಬದಿ ಸವಾರ ಭರತ್ ಗಂಭೀರವಾಗಿ ಗಾಯಗೊಂಡಿದ್ದಾರೆ.

ಬೈಕ್‌ನಲ್ಲಿ ಕಾಲೇಜಿಗೆ ತೆರಳುತ್ತಿದ್ದ ವೇಳೆ ಕಾರ್ಮಿಕರನ್ನು ಕರೆದುಕೊಂಡು ಬರುತ್ತಿದ್ದ ಜೀಪ್ ಡಿಕ್ಕಿಯಾಗಿದೆ. ಡಿಕ್ಕಿಯಾದ ರಭಸಕ್ಕೆ ಚಂದನ್ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ಅರೇಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈ ಅಪಘಾತ ನಡೆದಿದೆ.

## ಎಚ್‌ಡಿಕೆ ಚಿಲ್ಲರೆ ಹೇಳಿಕೆ ಬಿಡಲಿ

**ಸಿಎಂ ಆದಾಗ ಸ್ವಾಮೀಜಿ ಆಶೀರ್ವಾದ ಇರಲಿಲ್ಲವೇ: ಬಾಲಕೃಷ್ಣ ಪ್ರಶ್ನೆ**

**ರಾಮನಗರ:** ಎಚ್.ಡಿ.ಕುಮಾರಸ್ವಾಮಿ ಸ್ವಾಮೀಜಿಗಳ ಬಗ್ಗೆ ಚಿಲ್ಲರೆ ಹೇಳಿಕೆ ನೀಡುವುದನ್ನು ಬಿಡಬೇಕು. ಹಾಗಿದ್ದರೆ ಕುಮಾರಸ್ವಾಮಿಗೆ ಶ್ರೀಗಳ ಆಶೀರ್ವಾದ ಬೇಡವೇ ಎಂದು ಮಾಗಡಿ ಶಾಸಕ ಎಚ್.ಸಿ. ಬಾಲಕೃಷ್ಣ ಪ್ರಶ್ನಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಚ್‌ಡಿಕೆ ಸಿಎಂ ಆದಾಗಾ ಶ್ರೀಗಳ ಆಶೀರ್ವಾದ ಇರಲಿಲ್ವಾ? ಕುಮಾರಸ್ವಾಮಿ ಏನು ಸ್ವಯಂ ಘೋಷಿತ ದೇವಮಾನವರೇ ಎಂದು ತಿರುಗೇಟು ನೀಡಿದರು. ನಾಯಕತ್ವ ಬದಲಾವಣೆ ವಿಚಾರವಾಗಿ ಸ್ವಾಮೀಜಿಗಳು ಧರ್ಮ ರಕ್ಷಣೆ ಮಾಡಬೇಕು. ರಾಜಕೀಯಕ್ಕೆ ಎಂಟ್ರಿ ಆಗಬಾರದು ಎಂಬ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿಕೆ ವಿರುದ್ಧ ವಾಗ್ದಾಳಿ ನಡೆಸಿದರು.

ನಾನು ರಾಜಕೀಯಕ್ಕೆ ಹೊಸದಾಗಿ ಬಂದ ವೇಳೆ ಆದಿ ಚುಂಚನಗಿರಿ ಶ್ರೀಗಳ ನೇತೃತ್ವದಲ್ಲಿ ಚೆನ್ನಾರೆಡ್ಡಿ ಆಯೋಗದ ವಿರುದ್ಧ ಹೋರಾಟ ಆಯ್ತು. ಆ ಹೋರಾಟ ಮಾಡಿದ್ದೇ ದೇವೇಗೌಡರನ್ನು ಸಿಎಂ ಮಾಡಲು. ಆಗ ದೇವೇಗೌಡರು ಮುಖ್ಯಮಂತ್ರಿಯಾದರು. ಈಗ ಅದೇ ಶ್ರೀಗಳ ಬಗ್ಗೆ ಎಚ್‌ಡಿಕೆ ಚಿಲ್ಲರೆ ಹೇಳಿಕೆ ನೀಡುತ್ತಿದ್ದಾರೆ ಎಂದು ಕಿಡಿಕಾರಿದರು.



ನವೆಂಬರ್ ಕ್ರಾಂತಿ ಎಂಬ ವಿಚಾರಕ್ಕೆ ಪ್ರತಿಕ್ರಿಯಿಸಿ, ಸದ್ಯ ಯಾವುದೇ ಕ್ರಾಂತಿ ಇಲ್ಲ. ನಾವೆಲ್ಲ 2028ರ ಹೋರಾಟಕ್ಕೆ ಸಿದ್ಧವಾಗುತ್ತಿದ್ದೇವೆ. ಸಿಎಂ- ಡಿಸಿಎಂ ನಡುವೆ ಏನು ಒಪ್ಪಂದ ಅನ್ನೋದರ ಬಗ್ಗೆ ನಾವ್ಯಾಕೆ ಬಹಿರಂಗವಾಗಿ ಹೇಳಬೇಕು. ಸಮಯ ಬಂದಾಗ ಎಲ್ಲಾ ಕುತೂಹಲವನ್ನು ತಣಿಸುತ್ತೇವೆ ಎಂದು ಹೇಳಿದರು.

## ಹೆಣ್ಣು ಭ್ರೂಣ ಹತ್ಯೆ ತಡೆಗೆ ಕ್ರಮ

**ಅಧಿಕಾರಿಗಳಿಗೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸೂಚನೆ**

**ಮೈಸೂರು:** ಹೆಣ್ಣು ಭ್ರೂಣ ಹತ್ಯೆ ತಡೆಗೆ ಕಠಿಣ ಕ್ರಮ ಅಗತ್ಯ. ಅಲ್ಲದೆ, ಸಮಾಜದ ಮೇಲೆ ಉಂಟಾಗುವ ದುಷ್ಪರಿಣಾಮ ಕುರಿತು ಜಾಗೃತಿ ಮೂಡಿಸಬೇಕು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸೂಚಿಸಿದರು.

ಪ್ರಾದೇಶಿಕ ಆಯುಕ್ತರ ಕಚೇರಿ ಸಭಾಂಗಣದಲ್ಲಿ ಮೈಸೂರು ವಿಭಾಗದ ಜಿಲ್ಲೆಗಳ ಆರೋಗ್ಯ ಇಲಾಖೆ ಪ್ರಗತಿ ಪರಿಶೀಲನಾ ಸಭೆ ನಡೆಸಿ ಮಾತನಾಡಿದರು. ಲಿಂಗಾನುಪಾತದ ಆಧಾರದ ಮೇಲೆ ಲೆಕ್ಕ ಹಾಕುವ ಬದಲು ಏಪ್ರಿಲ್ ನಿಂದ ಅಕ್ಟೋಬರ್ ವರೆಗೆ ಜನನವಾದ ಮಕ್ಕಳಲ್ಲಿ ಗಂಡು ಮತ್ತು ಹೆಣ್ಣು ಮಕ್ಕಳ ಲೆಕ್ಕ ತೆಗೆದುಕೊಂಡು ಹೆಣ್ಣು ಮಗುವಿನ ಸಂಖ್ಯೆ ಕಡಿಮೆ ಇರುವ ಜಿಲ್ಲೆಯನ್ನು ಗುರಿ ಇಟ್ಟಿಕೊಂಡು ಐ.ಇ.ಸಿ ಕಾರ್ಯಕ್ರಮ ಆಯೋಜಿಸುವಂತೆ ತಿಳಿಸಿದರು.

ಪ್ರತಿ ಜೀವವೂ ಅಮೂಲ್ಯ ಆದರಿಂದ ಹೆರಿಗೆ ಸಂದರ್ಭದಲ್ಲಿ ತಾಯಂದಿರ ಮರಣ ಸಂಖ್ಯೆ ಶೂನ್ಯವಾಗಬೇಕು. ಗರ್ಭಿಣಿಯರು ತಪಾಸಣೆಗೆ ಒಳಗಾದಾಗ ಹೈ ರಿಸ್ಕ್ ಇರುವ ಪ್ರಕರಣಗಳ ಬಗ್ಗೆ ಹೆಚ್ಚು ನಿಗಾ

ಪುಟ 2ಕ್ಕೆ



### 4089 ಮಂದಿಗೆ ಹಾವು ಕಡಿತ

**ಮೈಸೂರು ವಿಭಾಗದ 8 ಜಿಲ್ಲೆಗಳಲ್ಲಿ 4089 ಹಾವು ಕಡಿತ ಪ್ರಕರಣಗಳು ವರದಿಯಾಗಿವೆ. 4084 ಪ್ರಕರಣಗಳಿಗೆ ಚಿಕಿತ್ಸೆ ನೀಡಲಾಗಿದೆ. ಇದರಲ್ಲಿ 23 ಜನ ಮರಣ ಹೊಂದಿದ್ದಾರೆ. ಬಹಳಷ್ಟು ಜನರು ಹಾವು ಕಡಿತದ ಸಂದರ್ಭದಲ್ಲಿ ಚಿಕಿತ್ಸೆ ನೀಡಲು ವಿಧಾನವಿರುತ್ತದೆ. ಸ್ಥಳೀಯವಾಗಿ ಚಿಕಿತ್ಸೆ ಪಡೆದು ಉಲ್ಬಾಣವಾದಗ ಆಸ್ಪತ್ರೆಗೆ ಬರುವ ಬದಲು**

ಪುಟ 2ಕ್ಕೆ

### 10 ದಿನದಲ್ಲಿ 8 ಕೋಟಿ ದಂಡ ಪಾವತಿ

**ಬೆಂಗಳೂರು:** ಟ್ರಾಫಿಕ್ ಫೈನ್ ಪಾವತಿಗೆ ಶೇ.50ರಷ್ಟು ರಿಯಾಯಿತಿ ಘೋಷಿಸಿರುವ ಹಿನ್ನೆಲೆಯಲ್ಲಿ ದಂಡ ಪಾವತಿಗೆ ರಾಜ್ಯಾದ್ಯಂತ ಭರ್ಜರಿ ರೆಸ್ಪಾನ್ಸ್ ಸಿಕ್ಕಿದೆ. 10 ದಿನಗಳಲ್ಲಿ 8 ಕೋಟಿಗೂ ಅಧಿಕ ದಂಡ ಸಂಗ್ರಹವಾಗಿದೆ. ಈಗಾಗಲೇ 8,01,12,350 ರೂ. ದಂಡ ಪಾವತಿಯಾಗಿದೆ. 2,82,793 ಸಂಚಾರ ನಿಯಮ ಉಲ್ಲಂಘನೆ ಪ್ರಕರಣ ಇತ್ಯರ್ಥಗೊಂಡಿವೆ. ರಾಜ್ಯ ಸರ್ಕಾರ ಡಿಸೆಂಬರ್ 12ರವರೆಗೆ ದಂಡ ಪಾವತಿಗೆ 50 ಪರ್ಸೆಂಟ್ ರಿಯಾಯಿತಿ ನೀಡಿದೆ.

### ಚರ್ಚೆಗೆ ನಿರಾಕರಣೆಯೇ ನಾಟಕ

**ನವದೆಹಲಿ:** ಬಲವಾದ ಸಮಸ್ಯೆ ಬಗ್ಗೆ ಪ್ರಶ್ನೆ ಎತ್ತುವುದು ನಾಟಕವಲ್ಲ. ಸಾರ್ವಜನಿಕರಿಗೆ ಅಗತ್ಯವಿರುವ ವಿಷಯಗಳ ಬಗ್ಗೆ ಪ್ರಜಾಸತ್ತಾತ್ಮಕ ಚರ್ಚೆಗಳಿಗೆ ಅವಕಾಶ ನೀಡದಿರುವುದು ನಾಟಕ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿಕೆಗೆ ಸಂಸದೆ ಪ್ರಿಯಾಂಕಾ ಗಾಂಧಿ ತಿರುಗೇಟು ನೀಡಿದ್ದಾರೆ.

ಅಧಿವೇಶನಕ್ಕೆ ತೆರಳುವ ಮುನ್ನ ಸಂಸತ್ ಭವನ ಆವರಣದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಎಸ್‌ಐಆರ್, ವಾಯು ಮಾಲಿನ್ಯ ದೊಡ್ಡ ಸಮಸ್ಯೆಗಳು.

ಪುಟ 2ಕ್ಕೆ

### ಸಂಸತ್ ಅಧಿವೇಶನದಲ್ಲಿ ಎಸ್‌ಐಆರ್ ವಿರೋಧಿಸಿ ಗದ್ದಲ

**ನವದೆಹಲಿ:** ಸಂಸತ್ತಿನ ಚಳಿಗಾಲದ ಅಧಿವೇಶನದ ಮೊದಲ ದಿನವಾದ ಸೋಮವಾರ ಮತದಾರರ ಪಟ್ಟಿಯ ವಿವಾದಾತ್ಮಕ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕುರಿತು ಚರ್ಚೆಗೆ ಒತ್ತಾಯಿಸಿ ವಿರೋಧ ಪಕ್ಷಗಳು ನಿರಂತರವಾಗಿ ಪ್ರತಿಭಟನೆ ನಡೆಸಿದ ಕಾರಣ ಲೋಕಸಭಾ ಕಲಾಪವನ್ನು ಮಂಗಳವಾರಕ್ಕೆ ಮುಂದೂಡಲಾಯಿತು.

ವಿರೋಧ ಪಕ್ಷದ ಸದಸ್ಯರು ಎಸ್‌ಐಆರ್ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಸದನದ ಬಾವಿಗೆ ಇಳಿದು ಪ್ರತಿಭಟನೆ ನಡೆಸಿದರು. ಕಲಾಪ ಮುಂದೂಡಲ್ಪಡುವ ಮೊದಲು, ಬೆಳಗ್ಗೆ ಮತ್ತು ಮಧ್ಯಾಹ್ನದ ನಂತರ ಪ್ರಶ್ನೋತ್ತರ ಅವಧಿಯಲ್ಲಿ ಎರಡು ಬಾರಿ ಸದನವನ್ನು ಮುಂದೂಡಲಾಯಿತು.

ಆದರೆ, ಗದ್ದಲದ ನಡುವೆಯೇ, ಮಣಿಪುರದಲ್ಲಿ ಜಿಎಸ್‌ಟಿ ಕಾನೂನಿಗೆ ತಿದ್ದುಪಡಿ ಜಾರಿಗೆ ತರುವ ಮಸೂದೆಯನ್ನು ಸಂಕ್ಷಿಪ್ತ ಚರ್ಚೆಯ ನಂತರ ಅಂಗೀಕರಿಸಲಾಯಿತು.

### 'ಮುಟ್ಟಿನ ರಜೆ' ಪ್ರಶ್ನಿಸಿ ಹೈಕೋರ್ಟ್ ಮೆಟ್ಟಲೇರಿದ ಹೋಟೆಲ್‌ಗಳ ಸಂಘ

**ಬೆಂಗಳೂರು:** ಉದ್ಯೋಗಸ್ಥ ಮಹಿಳೆಯರಿಗೆ ತಿಂಗಳಿಗೆ ಒಂದರಂತೆ ವರ್ಷಕ್ಕೆ 12 ಮುಟ್ಟಿನ ರಜೆ ಕಡ್ಡಾಯಗೊಳಿಸುವ ರಾಜ್ಯ ಸರ್ಕಾರದ ಆದೇಶವನ್ನು ಪ್ರಶ್ನಿಸಿ ಬೆಂಗಳೂರು ಹೋಟೆಲ್‌ಗಳ ಸಂಘ (ಬಿಎಚ್‌ಎ) ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದೆ.

ಸರ್ಕಾರಿ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರಿಗೆ ಮುಟ್ಟಿನ ರಜೆ ನೀಡುತ್ತಿಲ್ಲ. ಆದರೆ ಖಾಸಗಿ ನೌಕರರಿಗೆ ರಜೆ ನೀಡಲಾಗಿದೆ ಎಂದು ರಾಜ್ಯ ಸರ್ಕಾರದ ಆದೇಶವನ್ನು ಪ್ರಶ್ನಿಸಿದೆ.

ನೋಂದಣಿ ಆಗಿರುವ ಕೈಗಾರಿಕೆಗಳು ಮತ್ತು ಸಂಸ್ಥೆಗಳೂ ಸೇರಿದಂತೆ ಎಲ್ಲ ವಲಯಗಳಲ್ಲಿ ಕೆಲಸ ಮಾಡುತ್ತಿರುವ 18 ರಿಂದ 52 ವರ್ಷದ ಎಲ್ಲ ಕಾಯಂ, ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರಿಗೆ ತಿಂಗಳಿಗೆ ಒಂದು ದಿನದಂತೆ ವರ್ಷಕ್ಕೆ 12 ಮುಟ್ಟಿನ ರಜೆಯನ್ನು ನೀಡುವಂತೆ ಎಲ್ಲ ಉದ್ಯೋಗದಾತರಿಗೂ 2025ರ ನವೆಂಬರ್ 12ರಂದು ಸೂಚಿಸಲಾಗಿದೆ. ಮುಟ್ಟಿನ ರಜೆಯನ್ನು ಕಡ್ಡಾಯಗೊಳಿಸಲು ಸರ್ಕಾರಕ್ಕೆ ಅಧಿಕಾರ ನೀಡುವುದಿಲ್ಲ ಮತ್ತು ರಜೆ ನೀತಿಗಳು ವೈಯಕ್ತಿಕ ಸಂಸ್ಥೆಗಳ ಆಂತರಿಕ ಆಡಳಿತಾತ್ಮಕ ಕ್ಷೇತ್ರದೊಳಗೆ



ಪುಟ 2ಕ್ಕೆ



### ಪರಮೇಶ್ವರ್-ಕೋಡಿಶ್ರೀ ಭೇಟಿ: ಒಂದು ಗಂಟೆ ಕಾಲ ಗೌಪ್ಯ ಚರ್ಚೆ

**ಹಾಸನ:** ಗೃಹಸಚಿವ ಜಿ.ಪರಮೇಶ್ವರ್ ಅವರು ಸೋಮವಾರ ಕೋಡಿ ಮಠಕ್ಕೆ ದಿಢೀರ್ ಭೇಟಿ ನೀಡಿ ಕೋಡಿಮಠದ ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿಗಳ ಆಶೀರ್ವಾದ ಪಡೆದಿದ್ದಾರೆ. ಅಲ್ಲದೆ, ಒಂದು ಗಂಟೆಗೂ ಹೆಚ್ಚು ಕಾಲ ಶ್ರೀಗಳೊಂದಿಗೆ ಗೌಪ್ಯ ಚರ್ಚೆ ನಡೆಸಿರುವುದು ರಾಜಕೀಯ ವಲಯದಲ್ಲಿ ಕುತೂಹಲಕ್ಕೆ ಕಾರಣವಾಗಿದೆ.

ಪುಟ 2ಕ್ಕೆ

## ಸಿಬಿಐ ವ್ಯಾಪ್ತಿಗೆ ಡಿಜಿಟಲ್ ಅರೆಸ್ಟ್

**ದೇಶದ ಎಲ್ಲಾ ಪ್ರಕರಣಗಳ ವರ್ಗಾವಣೆಗೆ ಸುಪ್ರೀಂ ಕೋರ್ಟ್ ಆದೇಶ**

**ನವದೆಹಲಿ:** ದೇಶಾದ್ಯಂತ ಎಲ್ಲಾ ಡಿಜಿಟಲ್ ಅರೆಸ್ಟ್ ಪ್ರಕರಣಗಳ ತನಿಖೆಯನ್ನು ಕೇಂದ್ರೀಯ ತನಿಖಾ ದಳಕ್ಕೆ (ಸಿಬಿಐ) ವಹಿಸಿ ಸುಪ್ರೀಂ ಕೋರ್ಟ್ ಆದೇಶಿಸಿದೆ. ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ನೋಟಿಸ್ ಜಾರಿ ಮಾಡಿರುವ ಸುಪ್ರೀಂ ಕೋರ್ಟ್ ಪ್ರಕರಣಕ್ಕೆ ಸಂಬಂಧಿಸಿದಂತೆ ದಾಖಲಾಗಿರುವ ಎಲ್ಲಾ ಎಫ್‌ಐಆರ್‌ಗಳನ್ನು ಸಿಬಿಐಗೆ ವರ್ಗಾಯಿಸುವಂತೆ ಸೂಚಿಸಿದೆ.

ಸ್ವಯಂಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಪ್ರಕರಣದ ವಿಚಾರಣೆ ನಡೆಸಿದ ಮುಖ್ಯ ನ್ಯಾ.ಸೂರ್ಯಕಾಂತ್ ಮತ್ತು ನ್ಯಾ.ಜೋಯ್ಮಲ್ಯ ಬಾಗ್ಚಿ ನೇತೃತ್ವದ ಪೀಠವು ಇದು ಪ್ಯಾನ್ ಇಂಡಿಯಾ ಮತ್ತು ಗಡಿಯಾಚೆಗಿನ ವಂಚನೆ ಎಸಗಿದ ಪ್ರಕರಣವಾಗಿರುವ ಕಾರಣ ಏಕರೂಪದ ಕೇಂದ್ರೀಕೃತ ತನಿಖೆಯ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟು ಸಿಬಿಐ ತನಿಖೆಗೆ ಆದೇಶಿಸಿದೆ.

ವಿದೇಶದಲ್ಲೂ ಇದರ ಕೊಂಡಿ ಇರುವುದರಿಂದ ಈ ಪ್ರಕರಣದ ತನಿಖೆಗೆ ಜಾಗತಿಕ ಸಹಕಾರದ ಅಗತ್ಯವಿದೆ. ಹೀಗಾಗಿ ವಿಶ್ವಸಂಸ್ಥೆಯ ಸಮಾವೇಶದಲ್ಲಿ ಸೈಬರ್ ಅಪರಾಧದ ವಿರುದ್ಧ ನಿರ್ಣಯ ಅಂಗೀಕರಿಸುವಂತೆ ಕೇಂದ್ರ ಸರ್ಕಾರಕ್ಕೆ ಕೋರ್ಟ್ ಸೂಚಿಸಿದೆ. ನ್ಯಾಯಾಧೀಶರು ಮತ್ತು ಪೊಲೀಸ್ ಅಧಿಕಾರಿಗಳ ಸೋಗಿನಲ್ಲಿ ನಕಲಿ ದಾಖಲೆಗಳನ್ನ ಬಳಸಿ ವಂಚಕರು ನಡೆಸುತ್ತಿರುವ ಈ ಕೃತ್ಯಗಳ ಬಗ್ಗೆ ಸಮಗ್ರ ತನಿಖೆಯ ಅಗತ್ಯವಿದೆ ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ.



ಕಳೆದ ವಿಚಾರಣೆ ವೇಳೆ ದೇಶಾದ್ಯಂತ ದಾಖಲಾಗಿರುವ ಎಲ್ಲಾ ಪ್ರಕರಣಗಳನ್ನ ನಿರ್ವಹಿಸಲು ಸಿಬಿಐಗೆ ಸಂಪನ್ಮೂಲಗಳಿವೆಯೇ ಎಂದು

### ಎಟಿಎಂ ದರೋಡೆ: ಸಿಎಂಎಸ್ ವಿರುದ್ಧ ಕ್ರಮಕ್ಕೆ ಆರ್‌ಬಿಐಗೆ ಪತ್ರ

**ಬೆಂಗಳೂರು:** ನಗರದಲ್ಲಿ ನಡೆದಿದ್ದ 7.11 ಕೋಟಿ ರೂ. ದರೋಡೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಎಂಎಸ್ ಸಂಸ್ಥೆ ವಿರುದ್ಧ ಕ್ರಮಕೈಗೊಳ್ಳಲು ಪೊಲೀಸ್ ಇಲಾಖೆ ಆರ್‌ಬಿಐಗೆ ಪತ್ರ ಬರೆದಿದೆ.

ಹಾಡಹಗಲೇ ನಡೆದಿದ್ದ ಹಣ ದರೋಡೆ ಪ್ರಕರಣದ ಬೆನ್ನಲ್ಲೇ ಎಚ್ಚೆತ್ತ ಪೊಲೀಸ್ ಇಲಾಖೆ ಮಾರ್ಗಸೂಚಿಗೆ ಸಿದ್ಧತೆ ಮಾಡಿಕೊಂಡಿದೆ. ಈ ಸಂಬಂಧ ಆರ್‌ಬಿಐಗೆ ಪತ್ರ ಬರೆದಿದ್ದು, ದರೋಡೆ ಪ್ರಕರಣದಲ್ಲಿ ಸಿಎಂಎಸ್ ಭದ್ರತಾ ಲೋಪ ಕಂಡುಬಂದಿದೆ. ಸಂಸ್ಥೆಯ ವಿರುದ್ಧ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿಕೊಂಡಿದೆ.

ಅಲ್ಲದೆ, ಎಟಿಎಂಗೆ ಹಣ ತುಂಬುವ ಎಲ್ಲಾ ಸಂಸ್ಥೆಗಳ ಜೊತೆಗೆ ಪೊಲೀಸ್ ಇಲಾಖೆ ಸಭೆ ನಡೆಸಲು ತಯಾರಿ ನಡೆಸಲಾಗಿದೆ. ಕಮಿಷನರೇಟ್ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕೋಆಪರೇಟಿವ್ ಬ್ಯಾಂಕ್ ಸೇರಿದಂತೆ ಎಲ್ಲಾ ಬ್ಯಾಂಕ್‌ಗಳ ಲಿಸ್ಟ್ ತಯಾರಿ ಮಾಡಲಾಗಿದೆ. ರಿಜಿಸ್ಟರ್ ಆಫ್ ಸೊಸೈಟಿಗೆ ಈಗಾಗಲೇ ಕಮಿಷನರೇಟ್ ವ್ಯಾಪ್ತಿಯ ಸಂಸ್ಥೆಗಳ ಲಿಸ್ಟ್ ಕೊಡಲು ಸೂಚನೆ ನೀಡಲಾಗಿದೆ.

ಪುಟ 2ಕ್ಕೆ

## ರಾಜಕೀಯ ದ್ವೇಷದಿಂದ ಕಿರುಕುಳ

**ಕೇಂದ್ರ ಸರ್ಕಾರದ ವಿರುದ್ಧ ಡಿ.ಕೆ.ಶಿವಕುಮಾರ್ ವಾಗ್ದಾಳಿ**

**ಬೆಂಗಳೂರು:** ರಾಜಕೀಯ ದ್ವೇಷಕ್ಕಾಗಿ ಕೇಂದ್ರ ಸರ್ಕಾರ ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಂಡು ರಾಹುಲ್ ಗಾಂಧಿ ಅವರಿಗೆ ಕಿರುಕುಳ ನೀಡುತ್ತಿದೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಆರೋಪಿಸಿದರು.

ವಿಧಾನಸೌಧದಲ್ಲಿ ಸೋಮವಾರ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಅವರು, ರಾಹುಲ್ ಗಾಂಧಿ ವಿರುದ್ಧ ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಎಫ್‌ಐಆರ್ ದಾಖಲಿಸಿರುವುದು ಅನ್ಯಾಯ. ರಾಜಕೀಯವಾಗಿ ಕಿರುಕುಳ ನೀಡಲು ಈ ರೀತಿ ಮಾಡಲಾಗುತ್ತಿದೆ ರಾಹುಲ್ ಗಾಂಧಿ ಅವರನ್ನು ಜೈಲಿಗೆ ಹಾಕಿದರೂ ಅವರು ತಲೆಕೆಡಿಸಿಕೊಳ್ಳುವುದಿಲ್ಲ. ಕೇಂದ್ರ ಸರ್ಕಾರದ ಈ ದ್ವೇಷ ರಾಜಕಾರಣ ಸರಿ ಯಲ್ಲ. ಇದರಿಂದ ಅವರಿಗೆ ಯಾವುದೇ ಪ್ರಯೋಜನ ಆಗುವುದಿಲ್ಲ ಎಂದು ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.



ಇದು ಕೇಂದ್ರ ಸರ್ಕಾರದ ನೈತಿಕತೆಯನ್ನಷ್ಟೇ ಕುಗ್ಗಿಸಲಿದೆ. ರಾಜಕೀಯವನ್ನು ನೇರಾನೇರವಾಗಿ ಜನರ ಮಧ್ಯೆ ಮಾಡೋಣ. ಚುನಾವಣೆಯಲ್ಲಿ ಹೋರಾಡೋಣ. ಆದರೆ ತನಿಖಾ ಸಂಸ್ಥೆಗಳ ದುರ್ಬಳಕೆ ಮಾಡಿಕೊಂಡು ಈ ರೀತಿ ಕಿರುಕುಳ ನೀಡುವುದು ಸರಿಯಲ್ಲ ಎಂದು ಟೀಕಿಸಿದರು.

ಯಾರಿಗೆ ಆಗಲಿ ಕಿರುಕುಳ ನೀಡುವುದಕ್ಕೆ ಒಂದು ಮಿತಿ ಇದೆ. ನ್ಯಾಷನಲ್ ಹೆರಾಲ್ಡ್ ಸೋನಿಯಾ ಗಾಂಧಿ ಅಥವಾ ರಾಹುಲ್ ಗಾಂಧಿ ಆಸ್ತಿಯಲ್ಲ. ಪಕ್ಷದ ಅಧ್ಯಕ್ಷ ಸ್ಥಾನದಲ್ಲಿದ್ದ ಕಾರಣಕ್ಕೆ ಅವರು ಸಂಸ್ಥೆಯ ಷೇರುಗಳ ಪಾಲಕರಾಗಿದ್ದರು. ನಾನು ಹಾಗೂ

ಪುಟ 2ಕ್ಕೆ

ಮೊದಲ ಪುಟದಿಂದ

## ನಾವಿಬ್ರೂ ಬದರ್ಸ್ ಇದ್ದ ಹಾಗೆ!

ಎಸ್.ಎಂ ಕೃಷ್ಣ ವಿಕಾಸಸೌಧ ಕಟ್ಟಿದರು. ಬೆಂಗಳೂರನ್ನು ಕೆಂಪೇಗೌಡ ಕಟ್ಟಿದ್ದಾರೆ. ಅಧಿಕಾರ ಸಿಕ್ಕಿದಾಗ ಇವರೆಲ್ಲ ಸಾಕ್ಷಿಗುಡ್ಡೆ ಬಿಟ್ಟು ಹೋಗಿದ್ದಾರೆ. ಯಾರೇ ಆಗಲೀ ಅಧಿಕಾರ ಸಿಕ್ಕಿದಾಗ ಇಂಥ ಸಾಕ್ಷಿ ಗುಡ್ಡೆ ಬಿಟ್ಟು ಹೋಗಬೇಕು. ನಾವೂ ಕೂಡಾ ಆ ದಿಕ್ಕಿನಲ್ಲಿ ಕೆಲಸ ಮಾಡಬೇಕು. ನಿಮ್ಮ ಒತ್ತಡಕ್ಕೆ ಬ್ರೇಕ್‌ಫಾಸ್ಟ್ ಸಭೆ ಮಾಡುತ್ತಿಲ್ಲ. 140 ಶಾಸಕರನ್ನು ಒಟ್ಟಿಗೆ ಕರೆದೊಯ್ಯುವ ಕೆಲಸ ಮಾಡ್ತಿದೀವಿ ಎಂದು ಡಿಕೆಶಿ ಹೇಳಿದರು. ಇದೇ ವಿಚಾರಕ್ಕೆ ಸಿಎಂ ಸಿದ್ದರಾಮಯ್ಯ ಪ್ರತಿಕ್ರಿಯಿಸಿ, ಡಿಕೆಶಿ ಬ್ರೇಕ್ ಫಾಸ್ಟ್ ಇನ್ನೂ ಕರೆದಿಲ್ಲ. ಡಿಕೆಶಿ ಕರೆದೇ ಕರೆಯುತ್ತಾರೆ. ನಾನು ಹೋಗ್ತೀನಿ ಎಂದು ಹೇಳಿದರು.

## ಸಿದ್ದು ಗಟ್ಟಿಯಾಗಿದ್ದಾರೆ: ಎಚ್‌ಸಿಎಂ

11 ಜನ ಮಾತ್ರ ಬ್ಯಾಟ್ ಬೀಸಬೇಕು. ಉಳಿದವರು ಬ್ಯಾಟ್ ಬೀಸಿದರೆ ಏನು ಪ್ರಯೋಜನವಿಲ್ಲ. ಸ್ವಾಮೀಜಿಗಳು ಸೇರಿದಂತೆ ಯಾರೇ ಬ್ಯಾಟ್ ಬೀಸಿದರೂ ಹೈಕಮಾಂಡ್ ನಿರ್ಧಾರವೇ ಅಂತಿಮ ಎಂದು ಹೇಳಿದರು. ನಮ್ಮ ಸರ್ಕಾರ ಸ್ಥಿರವಾಗಿದೆ. ಸಿದ್ದರಾಮಯ್ಯನವರೇ ಸಿಎಂ ಆಗಿ ಮುಂದುವರಿಯುತ್ತಾರೆ. ಬಿಜೆಪಿಯವರು ವಿಧಾನಸೌಧದಲ್ಲಿ ಕಾಂಗ್ರೆಸ್‌ನವರು ಶಾಸಕರ ಖರೀದಿ ಕೇಂದ್ರ ಮಾಡಿದ್ದಾರೆ ಎಂದು ಆರೋಪ ಮಾಡುತ್ತಾರೆ. ಅವರು ಹೇಗೆ ಅಧಿಕಾರಕ್ಕೆ ಬಂದರು ಎಂಬುದನ್ನು ಹೇಳಲಿ. ಅವರೇನು ಸ್ವಂತ ಬಲದಿಂದ ಅಧಿಕಾರಕ್ಕೆ ಬಂದಿದ್ದರೇ? ಎಂದು ಪ್ರಶ್ನಿಸಿದರು. ಕನ್ನೇರಿ ಶ್ರೀಗಳು ಏನ್ ಹೇಳಿಕೆ ನೀಡುತ್ತಾರೆ ಎನ್ನುವುದು ಗೊತ್ತಿಲ್ಲ. ನನಗೆ ಬಾಬಾ ಸಾಹೇಬರ ಸಂವಿಧಾನದ ಬಗ್ಗೆ ಮಾತ್ರ ತಿಳಿದಿದೆ ಎಂದರು.

## ರಾಜಕೀಯ ದ್ವೇಷದಿಂದ ಕಿರುಕುಳ

ಸಿಎಂ ಅವರೂ ಕೂಡ ವಿವಿಧ ನಿಗಮ, ಮಂಡಳಿಗಳ ಅಧ್ಯಕ್ಷರಾಗಿದ್ದೇವೆ. ಅಧ್ಯಕ್ಷರಾದ ಹಿನ್ನೆಲೆಯಲ್ಲಿ ಅವರ ಹೆಸರಿನಲ್ಲಿ ಕನಿಷ್ಠ 1–2 ಷೇರುಗಳು ಇರುತ್ತವೆ. ನಮ್ಮ ಅಧಿಕಾರ ಮುಗಿದ ನಂತರ ಈ ಷೇರುಗಳು ವರ್ಗಾವಣೆಯಾಗುತ್ತದೆ ಎಂದು ಹೇಳಿದರು..

## 4089 ಮಂದಿಗೆ ಹಾವು ಕಡಿತ

**ಮೊದಲೇ ಎಚ್ಚರಿಕೆ ವಹಿಸಿ. ಆರೋಗ್ಯ ಇಲಾಖೆಯಲ್ಲಿ ಆಂಟಿರೇಬಿಸ್ ಹಾಗೂ ಸ್ನೇಕ್ ವ್ಯಾಕ್ಸಿನ್ ಅಗತ್ಯ ದಾಸ್ತಾನು ಇರುತ್ತದೆ ಎಂದು ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.**

## ಹೆಣ್ಣು ಭ್ರೂಣ ಹತ್ಯೆ ತಡೆಗೆ ಕ್ರಮ

ವಹಿಸಬೇಕು ಹಾಗೂ ತಯಾಂದಿರ ಮರಣ ಪ್ರಕರಣಗಳನ್ನು ಶೂನ್ಯವಾಗಬೇಕು ಎಂದರು. ಮಕ್ಕಳ ಮರಣ ಪ್ರಕರಣಕ್ಕೆ ಸಂಬಂಧಿ ಸಿದಂತೆ ಏಪ್ರಿಲ್ ನಿಂದ ಅಕ್ಟೋಬರ್ ವರೆಗೆ ಮೈಸೂರು ವಿಭಾಗದ 8 ಜಿಲ್ಲೆಗಳಲ್ಲಿ 914 ಇದೆ. ಕೊಡಗು ಜಿಲ್ಲೆಯಲ್ಲಿ ಐ.ಎಂ.ಆರ್ ರೇಟ್ ಹೆಚ್ಚಿದೆ. ಮಕ್ಕಳ ವೆಂಟಿಲೇಟರ್ ಹಾಗೂ ಐಸಿಯು ಇದ್ದು, ಇದನ್ನು ಶೀಘ್ರವಾಗಿ ಪರಿಹರಿಸುವುದಾಗಿ ತಿಳಿಸಿದರು. ಸಭೆಯಲ್ಲಿ ವಿಧಾನ ಪರಿಷತ್ ಸದಸ್ಯ ಮಂಜೇಗೌಡ, ಇಲಾಖೆ ಆಯುಕ್ತ ಶಿವಕುಮಾರ್, ರಾಷ್ಟ್ರೀಯ ಆರೋಗ್ಯ ಮಿಷನ್ ನಿರ್ದೇಶಕ ವಸಂತ್ ಕುಮಾರ್, ವ್ಯವಸ್ಥಾಪಕ ನಿರ್ದೇಶಕ ಅವಿನಾಶ್ ಮೆನಾನ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಯುಕೇಶ್ ಕುಮಾರ್ ಉಪಸ್ಥಿತರಿದ್ದರು.

## ಚರ್ಚೆಗೆ ನಿರಾಕರಣೆಯೇ ನಾಟಕ

ಇವುಗಳ ಬಗ್ಗೆ ನಾವು ಚರ್ಚಿಸಬೇಕು ಎಂದರು. ಸಂಸತ್ತು ಯಾವುದಕ್ಕಾಗಿ ಇದೆ? ಇದು ನಾಟಕ ಅಲ್ಲ, ವಿಷಯಗಳ ಬಗ್ಗೆ ಮಾತನಾಡೋದು, ಸಮಸ್ಯೆಗಳನ್ನ ಎತ್ತುವುದು ನಾಟಕವಲ್ಲ. ಸಾರ್ವಜನಿಕರಿಗೆ ಅಗತ್ಯವಿರುವ ವಿಷಯಗಳ ಬಗ್ಗೆ ಪ್ರಜಾಸತ್ತಾತ್ಮಕ ಚರ್ಚೆಗಳಿಗೆ ಅವಕಾಶ ನೀಡದಿರುವುದು ನಾಟಕ ಎಂದು ಕುಟುಕಿದರು.

## ಒಂದು ಗಂಟೆ ಕಾಲ ಗೌಪ್ಯ ಚರ್ಚೆ

ಶಾಸಕ ಕೆ.ಎಂ.ಶಿವಲಿಂಗೇಗೌಡ, ಸ್ಥಳೀಯ ಕಾಂಗ್ರೆಸ್ ಮುಖಂಡರು ಸೇರಿ ಯಾರಿಗೂ ಮಾಹಿತಿ ನೀಡದೇ ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕಿನ ಹಾರನಹಳ್ಳಿ ಗ್ರಾಮದಲ್ಲಿರುವ ಕೋಡಿಮಠಕ್ಕೆ ಪರಮೇಶ್ವರ್ ದಿಢೀರ್ ಭೇಟಿ ನೀಡಿದ್ದಾರೆ. ಮುಖ್ಯಮಂತ್ರಿ ಕುರ್ಚಿ ಕದನದ ವೇಳೆ ಕೋಡಿಮಠಕ್ಕೆ ಪರಮೇಶ್ವರ್ ಭೇಟಿ ನೀಡಿರುವುದು ತೀವ್ರ ಕುತೂಹಲಕ್ಕೆ ಕಾರಣವಾಗಿದೆ. ಕೋಡಿಮಠದ ರಾಜೇಂದ್ರ ಸ್ವಾಮೀಜಿಗಳ ಜೊತೆ ಗೌಪ್ಯವಾಗಿ ಚರ್ಚೆ ನಡೆಸಿದ್ದಾರೆ. ಭವಿಷ್ಯ ಕೇಳಿ ವಾಪಾಸ್ ತೆರಳಿದ್ದಾರೆ ಎನ್ನಲಾಗಿದೆ.

## ಭಿನ್ನಮತೀಯ ಚಟುವಟಿಕೆ ಇಲ್ಲ

ನಗರದಲ್ಲಿ ಸೋಮವಾರ ಪತ್ರಕರ್ತರ ಜೊತೆ ಮಾತನಾಡಿದ ಅವರು, ಈ ವಿಚಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅತ್ಯಂತ ಪ್ರಬುದ್ಧತೆಯಿಂದ ನಡೆದುಕೊಳ್ಳುತ್ತಿದ್ದಾರೆ. ಸಣ್ಣಪುಟ್ಟ ಗೊಂದಲಗಳು ಬಗೆಹರಿದಿವೆ ಎಂದು ತಿಳಿಸಿದರು.

## ಸಿಬಿಐ ವ್ಯಾಪ್ತಿಗೆ ಡಿಜಿಟಲ್ ಅರೆಸ್ಟ್

ಕೇಂದ್ರವನ್ನು ಪ್ರಶ್ನಿಸಿತ್ತು. ಆಗ ಸಿಬಿಐ ಈಗಾಗಲೇ ಕೆಲವು ಪ್ರಕರಣಗಳನ್ನು ನಿಭಾಯಿಸುತ್ತಿದೆ ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ತಿಳಿಸಿದ್ದರು. ಇದಕ್ಕೆ ಪ್ರತಿಕ್ರಿಯೆ ನೀಡಿದ ನ್ಯಾಯಮೂರ್ತಿ ಬಾಗ್ಚಿ, ಎಲ್ಲಾ ಪ್ರಕರಣಗಳನ್ನ ನಿರ್ವಹಿಸಲು ಸಿಬಿಐ ಬಳಿ ಅಗತ್ಯ ಸಂಪನ್ಮೂಲಗಳಿವೆಯೇ ಪರಿಶೀಲಿಸುವಂತೆ ಸೂಚಿಸಿದ್ದರು. ಡಿಜಿಟಲ್ ಅರೆಸ್ಟ್ ಸೈಬರ್ ವಂಚನೆಯ ಒಂದು ವಿಧಾನ. ಇದರಲ್ಲಿ ವಂಚಕರು ಕಾನೂನು ಅಧಿಕಾರಿಗಳಂತೆ ಪೋಸ್ ನೀಡುತ್ತಾರೆ. ಆಡಿಯೊ ಅಥವಾ ವೀಡಿಯೊ ಕರೆಗಳಲ್ಲಿ ಜನರನ್ನು ಬೆದರಿಸುತ್ತಾರೆ. ಬಂಧನದ ಸುಳ್ಳು ನೆಪದಲ್ಲಿ ಡಿಜಿಟಲ್ ಒತ್ತೆಯಾಳುಗಳನ್ನಾಗಿ ಮಾಡಿ ಹಣವನ್ನು ಸುಲಿಗೆ ಮಾಡುತ್ತಾರೆ.

## ಕ್ರಮಕ್ಕೆ ಆರ್‌ಬಿಐಗೆ ಪತ್ರ

ನಗರದ ಆಯಾ ವಿಭಾಗದ ಡಿಸಿಪಿಗಳಿಗೆ ತಮ್ಮ ವ್ಯಾಪ್ತಿಯ ಲಿಸ್ಟ್ ತಯಾರಿಗೆ ಸೂಚನೆ ನೀಡಲಾಗಿದೆ. ರಿಜಿಸ್ಟರ್ ಆಫ್ ಸೊಸೈಟಿಯಿಂದ ಮಾಹಿತಿ ಪಡೆದು, ಆರ್‌ಬಿಐ ಮೂಲಕವೇ ವಾರ್ನಿಂಗ್ ಕೊಡಿಸಲು ಪೊಲೀಸರು ಮುಂದಾಗಿದ್ದಾರೆ. ಈ ಬಗ್ಗೆ ಈಗಾಗಲೇ ಆರ್‌ಬಿಐ ಅಧಿಕಾರಿಗಳ ಜೊತೆ ಪೊಲೀಸ್ ಆಯುಕ್ತರು ಚರ್ಚೆ ನಡೆಸಿದ್ದಾರೆ.

## ಡಿಜಿಟಲ್ ಸ್ಟ್ಯಾಂಪಿಂಗ್ ಜಾರಿ

ಈಗ ಒಂದು ಬಾರಿ ಅಗ್ರಿಮೆಂಟ್ ಮಾಡಿಕೊಂಡರೆ ಡಿಜಿಟಲ್ ಮೂಲಕ ದಾಖಲೆ ಭದ್ರವಾಗಿ ಇರಲಿದೆ ಎಂದು ವಿವರಿಸಿದರು.

## ಹೈಮೆಟ್ಟಿಲೇರಿದ ಹೋಟೆಲ್‌ಗಳ ಸಂಘ

ಬರುತ್ತವೆ ಎಂದು ಅರ್ಜಿಯಲ್ಲಿ ಹೇಳಲಾಗಿದೆ. ಈ ಆದೇಶವನ್ನು 'ತಾರತಮ್ಯ' ಎಂದು ಕರೆದಿರುವ ಅಸೋಸಿಯೇಷನ್, ಹೆಚ್ಚಿನ ಮಹಿಳೆಯರಿಗೆ ಉದ್ಯೋಗ ನೀಡಿರುವ ಸರ್ಕಾರವೇ ತನ್ನ ಉದ್ಯೋಗಿಗಳಿಗೆ ಇದೇ ರೀತಿಯ ನಿಬಂಧ ನೆಯನ್ನು ಜಾರಿಗೆ ತಂದಿಲ್ಲ ಎಂದಿದೆ.

# ಪೌರ ಕಾರ್ಮಿಕರಿಗೆ ವಸತಿ ಸೌಲಭ್ಯ ಕಲ್ಪಿಸಲು ಜಿಲ್ಲಾಧಿಕಾರಿ ಸೂಚನೆ

ರಾಮನಗರ: ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರ ಕಾರ್ಮಿಕರಿಗೆ ಆಶ್ರಯ ಯೋಜನೆಯಡಿ ನಿವೇಶನ ಮತ್ತು ವಸತಿ ಕಲ್ಪಿಸಲು ಸ್ಥಳ ಪರಿಶೀಲನೆ ನಡೆಸಿ ವರದಿ ನೀಡುವಂತೆ ಜಿಲ್ಲೆಯ ತಹಸೀಲ್ದಾರರುಗಳಿಗೆ ಜಿಲ್ಲಾಧಿಕಾರಿ ಯಶವಂತ್ ವಿ ಗುರುಕರ್ ಸೂಚನೆ ನೀಡಿದ್ದಾರೆ.

ಇಲ್ಲಿನ ಜಿಲ್ಲಾ ಸರ್ಕಾರಿ ಕಚೇರಿಗಳ ಸಂಕೀರ್ಣದಲ್ಲಿರುವ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗನದಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಅಧಿನಿಯಮ 2013ರ ಅನುಷ್ಠಾನ ಸಂಬಂಧ ಆಯೋಜಿಸಲಾಗಿದ್ದ ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕಳೆದ 2024ರ ಅಕ್ಟೋಬರ್‌ನಲ್ಲಿ ಜಿಲ್ಲೆಯಲ್ಲಿರುವ 3 ನಗರಸಭೆ, 2 ಪುರಸಭೆ ಹಾಗೂ ಒಂದು ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಸಮೀಕ್ಷೆ ಹಾಗೂ ಅನೈರ್ಮಲ್ಯ ಶೌಚಾಲಯಗಳ ಸಮೀಕ್ಷೆ ನಡೆಸಲಾಗಿತ್ತು. ಇದೀಗ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿನ ಇನ್‌ಸ್ಯಾನಿಟರಿ ಲ್ಯಾಟ್ರಿನ್ಸ್‌ಗಳ ಇರುವಿಕೆ ಬಗ್ಗೆ ಸಮರ್ಪಕ ರೀತಿಯಲ್ಲಿ ಸಮೀಕ್ಷೆ ಮಾಡುವಂತೆ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳಿಗೆ ಸೂಚಿಸಿದರು.



ಪೌರ ಕಾರ್ಮಿಕರುಗಳು ರಸ್ತೆ ಬದಿ ಕುಳಿತು ಊಟ ಮಾಡುತ್ತಿರುವುದು ಕಂಡುಬರುತ್ತಿದೆ ಆದ್ದರಿಂದ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಪೌರಕಾರ್ಮಿಕರುಗಳಿಗೆ ವಿಶ್ರಾಂತಿ ಕೊಠಡಿ, ಬೆಳಗಿನ ಉಪಹಾರ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು. ಈಗಾಗಲೇ ರಾಮನಗರ ಹಾಗೂ ಕನಕಪುರ ನಗರಸಭೆ ವ್ಯಾಪ್ತಿಯಲ್ಲಿ ವಿಶ್ರಾಂತಿ ಗೃಹ ನಿರ್ಮಿಸಲಾಗಿರುತ್ತದೆ. ಚನ್ನಪಟ್ಟಣ, ಮಾಗಡಿ ಹಾಗೂ ಹಾರೋಹಳ್ಳಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ವಿಶ್ರಾಂತಿ ಗೃಹ ಸ್ಥಾಪಿಸಲು ಟೆಂಡರ್ ಕರೆಯಲಾಗಿದೆ. ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ನಂತರ ವಿಶ್ರಾಂತಿ ಗೃಹಗಳನ್ನು ಶೀಘ್ರವಾಗಿ ನಿರ್ಮಿಸಲು ಕ್ರಮವಹಿಸಬೇಕು ಎಂದು ಸೂಚಿಸಿದರು.

ಪೌರ ಕಾರ್ಮಿಕರು/ ಸ್ವಚ್ಚತಾ ಕಾರ್ಮಿಕರಿಗೆ ಹೆಪಟೈಟಿಸ್–ಬಿ, ಟಿ.ಬಿ., ಅಸ್ತಮಾ ಹಾಗೂ ಹೃದಯಕ್ಕೆ ಸಂಬಂಧಿಸಿದ ರೋಗಗಳನ್ನು ನಿಯಂತ್ರಿಸಲು ಜಿಲ್ಲಾ ಹಾಗೂ ತಾಲ್ಲೂಕು ಸರ್ಕಾರಿ ಆಸ್ಪತ್ರೆಗಳಲ್ಲಿ ಆರೋಗ್ಯ ಪರೀಕ್ಷೆ ನಡೆಸಲಾಗುತ್ತಿದ್ದು, ಇದನ್ನು ನಿಯಮಿತವಾಗಿ ನಡೆಸಬೇಕು ಹಾಗೂ ಪೌರಕಾರ್ಮಿಕರು ಕಾರ್ಯನಿರ್ವಹಿಸಲು ಅವಶ್ಯವಿರುವ ಮಾಸ್ಕ್, ಗ್ಲೌಸ್, ಇತರೆ ಸಲಕರಣೆ–ಸಾಮಗ್ರಿಗಳನ್ನು ಸಮರ್ಪಕವಾಗಿ ಒದಗಿಸಬೇಕು ಎಂದು ಸೂಚಿಸಿದರು. ಜಿಲ್ಲೆಯಲ್ಲಿ ಬ್ಯಾಂಕ್ ಖಾತೆ ಇಲ್ಲದ ಪೌರ ಕಾರ್ಮಿಕರಿಗೆ ಕಡ್ಡಾಯವಾಗಿ ಒಂದು ವಾರದೊಳಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಬ್ಯಾಂಕ್ ಖಾತೆ ತೆರೆದು, ವೇತನ ಹಾಗೂ ಜೀವ ವಿಮೆ ಮಾಡಿಸಬೇಕೆಂದು ಸೂಚಿಸಿದರು.

ಸಭೆಯಲ್ಲಿ ಅಪರ ಪೊಲೀಸ್ ವರಿಷ್ಠಾಧಿಕಾರಿ ರಾಮಚಂದ್ರಯ್ಯ, ಅಪರ ಜಿಲ್ಲಾಧಿಕಾರಿ ಆರ್. ಚಂದ್ರಯ್ಯ, ಉಪವಿಭಾಗಾಧಿಕಾರಿ ಬಿನೋಯ್, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಧನರಾಜ್, ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಶಿವಕುಮಾರ್, ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕಿ ದೀಪ ಎಸ್., ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಅಧಿನಿಯಮ 2013ರ ಅನುಷ್ಠಾನದ ಜಿಲ್ಲಾ ಜಾಗೃತ ಮತ್ತು ಉಸ್ತುವಾರಿ ಸಮಿತಿ ಸದಸ್ಯರುಗಳಾದ ಆರ್. ನಾಗರಾಜು, ಡಾ. ಲೋಕೇಶ್, ಅಂಜನ ಮೂರ್ತಿ, ಕುಮಾರ ವೈ. ಎನ್., ವನಜ, ಜೀವನ್ ಮೂರ್ತಿ, ಚಲಪತಿ ಸೇರಿದಂತೆ ನಗರಸಭೆಗಳ ಪೌರಾಯುಕ್ತರು, ಪುರಸಭೆ ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯಿತಿ ಅಧಿಕಾರಿ, ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಭಗವದ್ಗೀತೆಯ ಪಾರಾಯಣ ನಮ್ಮ ಜೀವನದ ಉಸಿರಾಗಲಿ: ಗಣಪತಿ ಶ್ರೀ



ಮೈಸೂರು: ಶ್ರೀ ಕೃಷ್ಣ ಪರಮಾತ್ಮನು ಭಗವದ್ಗೀತೆಯಲ್ಲಿ ಹೇಳಿರುವ ಪ್ರತಿಯೊಂದು ಮಾತು ಹಾಗೂ ಅಕ್ಷರಗಳನ್ನು ಅರ್ಥಮಾಡಿಕೊಂಡು ನಮ್ಮ ಜೀವನವನ್ನು ಮುನ್ನಡೆಸಬೇಕು ಎಂದು ಅವಧೂತ ದತ್ತ ಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಭಕ್ತರಿಗೆ ಕರೆ ನೀಡಿದರು.

ಅವಧೂತ ದತ್ತ ಪೀಠದಲ್ಲಿ ಗೀತಾ ಜಯಂತಿ ಅಂಗವಾಗಿ ಆಯೋಜಿಸಲಾಗಿದ್ದ ಸಂಪೂರ್ಣ ಭಗವದ್ಗೀತೆ ಪಾರಾಯಣ ಮತ್ತು ಚಿನ್ನದ ಪದಕ ಪ್ರದಾನ ಸಮಾರಂಭದಲ್ಲಿ ಶ್ರೀಗಳು ಆಶೀರ್ವಚನ ನೀಡಿ ಮಾತನಾಡಿದರು.

ಭಾರತೀಯ ಸಂಪ್ರದಾಯದ ಬಗ್ಗೆ ಮಾತನಾಡಿದ ಅವರು,ನಮ್ಮ ಪೂರ್ವಜರು ಭಗವದ್ಗೀತೆಯನ್ನು ತಮ್ಮ ಜೀವನದ ಭಾಗವಾಗಿಸಿಕೊಂಡಿದ್ದರು. ಹಿಂದೆ ಮಹಾತ್ಮರು ಮತ್ತು ಶ್ರೀಮಂತರು ಲಕ್ಷಾಂತರ ಚಿಕ್ಕ ಭಗವದ್ಗೀತೆ ಪುಸ್ತಕಗಳನ್ನು ಮುದ್ರಿಸಿ ಜನರಿಗೆ ಉಚಿತವಾಗಿ ಹಂಚುತ್ತಿದ್ದರು. ಆ ಸಂಪ್ರದಾಯ ಮತ್ತೆ ಮರುಕಳಿಸಬೇಕು ಎಂದು ಆಶಿಸಿದರು.

ದತ್ತ ಪೀಠದಲ್ಲಿ ಮುದ್ರಿತವಾದ ಪುಸ್ತಕಗಳನ್ನು ಭಕ್ತರು ಖರೀದಿಸಿ, ಅದನ್ನು ಕೊಂಡುಕೊಳ್ಳಲು ಶಕ್ತಿಯಿಲ್ಲದವರಿಗೆ ಉಚಿತವಾಗಿ ಹಂಚುವ ಸಂಕಲ್ಪ ಮಾಡಬೇಕು,ಎಂದು ತಿಳಿಸಿದರು.

ಪುಸ್ತಕಗಳು ಯಾವಾಗಲೂ ನಮ್ಮ ಕೈಯಲ್ಲಿ ಇರುವುದಿಲ್ಲ, ಆದರೆ ಭಗವದ್ಗೀತೆಯನ್ನು ಕಂಠಪಾಠ ಮಾಡಿದರೆ ಶ್ಲೋಕಗಳು 24 ಗಂಟೆಯೂ ನಮ್ಮ ಜೊತೆಗೇ ಇರುತ್ತವೆ. ಪ್ರಯಾಣದ ಸಮಯದಲ್ಲಿ ಅಥವಾ ಊಟ ಮಾಡುವಾಗಲೂ ಮನಸ್ಸಿನಲ್ಲಿಯೇ ಪಾರಾಯಣ ಮಾಡಬಹುದು ಎಂದು ಸ್ವಾಮೀಜಿ ಕಂಠಪಾಠದ ಮಹತ್ವವನ್ನು ವಿವರಿಸಿದರು.

ಇದೇ ವೇಳೆ ಮುಂಬರುವ ಬೃಹತ್ ಕಾರ್ಯಕ್ರಮದ ಬಗ್ಗೆ ಮಾಹಿತಿ ನೀಡಿದ ಸ್ವಾಮೀಜಿ, 2026ರ ಮಾ.22 ರಂದು ಹೈದರಾಬಾದ್‌ನ ಗಚ್ಚಿಬೌಲಿ ಒಳಾಂಗಣ ಕ್ರೀಡಾಂಗಣದಲ್ಲಿ ಸಂಪೂರ್ಣ ಭಗವದ್ಗೀತೆ ಪಾರಾಯಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಅಲ್ಲದೆ ದೆಹಲಿಯ ಭಾರತ ಮಂಟಪದಲ್ಲಿಯೂ ಕಾರ್ಯಕ್ರಮ ನಡೆಯಲಿದ್ದು, ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಶ್ರೀಗಳು ಆಹ್ವಾನಿಸಿದರು. ಪ್ರತಿಯೊಬ್ಬರೂ ಪ್ರತಿನಿತ್ಯ ಭಗವದ್ಗೀತೆಯ ಕನಿಷ್ಠ ಒಂದು ಅಧ್ಯಾಯವನ್ನಾದರೂ ಪಾರಾಯಣ ಮಾಡಬೇಕು ಎಂದು ಭಕ್ತರಿಂದ ಇದೇ ವೇಳೆ ಸಂಕಲ್ಪ ಮಾಡಿಸಿದರು.

ತೆಲುಗು ರಾಜ್ಯಗಳಲ್ಲದೆ, ಕರ್ನಾಟಕ, ತಮಿಳುನಾಡು ಸೇರಿದಂತೆ ದೇಶ ವಿದೇಶಗಳಲ್ಲಿ ಗೀತಾ ಪಾರಾಯಣದ ಅರಿವು ಮೂಡಿದೆ ಎಂದರು. ಕಾರ್ಯಕ್ರಮದಲ್ಲಿ ಭಗವದ್ಗೀತೆಯನ್ನು ಸಂಪೂರ್ಣವಾಗಿ ಕಂಠಪಾಠ ಮಾಡಿ ಒಪ್ಪಿಸಿದ ಸುಮಾರು 948ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಮತ್ತು ಸಾಧಕರಿಗೆ ಶ್ರೀಗಳು ಚಿನ್ನದ ಪದಕ ಹಾಗೂ ಬಹುಮಾನಗಳನ್ನು ವಿತರಿಸಿದರು.

ನಂತರ ಮೈಸೂರಿನ 'ಗೀತಾ ಪರಿವಾರ'ದ ಸದಸ್ಯರು ಮತ್ತು ರಾಜ್ಯದ ವಿವಿಧ ಮೂಲೆಗಳಿಂದ ಬಂದಿದ್ದ ಭಕ್ತರನ್ನು ಶ್ರೀಗಳು ಅಭಿನಂದಿಸಿದರು.

ಗೀತಾ ಜಯಂತಿ ಅಂಗವಾಗಿ ಮೈಸೂರಿನ ಗಣಪತಿ ಸಚ್ಚಿದಾನಂದ ಆಶ್ರಮದ ನಾದ ಮಂಟಪದಲ್ಲಿ ಇಂದು ಸಂಪೂರ್ಣ ಭಗವದ್ಗೀತಾ ಪಾರಾಯಣ ಹಮ್ಮಿಕೊಳ್ಳಲಾಗಿತ್ತು.

ಈ ಪಾರಾಯಣದಲ್ಲಿ ದೇಶದ ವಿವಿಧ ಭಾಗಗಳಿಂದ ಆಗಮಿಸಿದ್ದ ಸುಮಾರು 5000ಕ್ಕೂ ಹೆಚ್ಚು ಮಂದಿ ಭಾಗವಹಿಸಿ ಗೀತೆಯ ಸಂಪೂರ್ಣ 700 ಶ್ಲೋಕಗಳನ್ನು ಪಠಣ ಮಾಡಿದರು. 6 ವರ್ಷದಿಂದ ಮಕ್ಕಳಿಂದ 75 ವರ್ಷದವರೆಗಿನ ಭಕ್ತರು ಈ ಪಾರಾಯಣದಲ್ಲಿ ಪಾಲ್ಗೊಂಡಿದ್ದರು.

## ಬೈಕ್‌ಗೆ ಕಂಟೇನರ್ ಬಡಿದು ತಾಯಿ ಮಗ ಸಾವು

ಬೆಂಗಳೂರು : ಬೆಳ್ಳಂ ಬೆಳಗ್ಗೆ ಬೆಂಗಳೂರಿನ ಮೈಸೂರು ರಸ್ತೆಯಲ್ಲಿ ಭೀಕರ ಅಪಘಾತ ಸಂಭವಿಸಿದ್ದು, ತಾಯಿ, ಮಗ ಮೃತಪಟ್ಟಿರುವ ದಾರುಣ ಘಟನೆ ನಡೆದಿದೆ.

ಇಂದು ಬೆಳಗ್ಗೆ 7 ಗಂಟೆ ಸುಮಾರಿಗೆ ಮೈಸೂರು ರಸ್ತೆಯ ಟಿಂಬರ್ ಲೇಔಟ್ ಸಿಗ್ನಲ್ ಬಳಿ ಈ ಭೀಕರ ಅಪಘಾತ ಸಂಭವಿಸಿದ್ದು, ಅಶ್ವಿನಿ (41), ಅಭಿಲಾಶ್ (19) ಮೃತ ದುರ್ದೈವಿಗಳಾಗಿದ್ದಾರೆ.

ಕಂಟೇನರ್ಗೆ ಬೈಕ್ ಟಚ್ ಆಗಿ ಕೆಳಗೆ ಬಿದ್ದ ಸವಾರರು ಸಾವನ್ನಪ್ಪಿದ್ದಾರೆ. ಮೈಸೂರು ರಸ್ತೆಯಿಂದ ಮಾರ್ಕೆಟ್ ಕಡೆ ಬೈಕ್ ನಲ್ಲಿ ಹೋಗುತ್ತಿದ್ದ ವೇಳೆ ಅಪಘಾತ ಸಂಭವಿಸಿದೆ. ತಾಯಿಯನ್ನ ಕೆಲಸಕ್ಕೆ ಡ್ರಾಪ್ ಮಾಡಲು ಹೋಗುತ್ತಿದ್ದ ಯುವಕ ಕಾರು ಮತ್ತು ಕಂಟೇನರ್ ಮಧ್ಯೆದಲ್ಲಿ ಚಲಾಯಿಸಿದ್ದಾನೆ. ಈ ವೇಳೆ ಕಂಟೇನರ್ ಗೆ ಬೈಕ್ ಟಚ್ ಆಗಿ ತಾಯಿ–ಮಗ ಕೆಳಗೆ ಬಿದ್ದಿದ್ದಾರೆ. ಬೈಕ್ ಸವಾರರು ಕೆಳಗೆ ಬಿದ್ದ ರಭಸಕ್ಕೆ ಇಬ್ಬರ ತಲೆಗೆ ತೀವ್ರವಾಗಿ ಪೆಟ್ಟಾಗಿದೆ. ಇಬ್ಬರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದ ವೇಳೆ ಇಬ್ಬರು ಕೂಡ ಮಾರ್ಗ ಮಧ್ಯೆಯೇ ಸಾವನ್ನಪ್ಪಿದ್ದಾರೆ.

ಸ್ಥಳಕ್ಕೆ ಬ್ಯಾಟರಾಯನಪುರ ಸಂಚಾರಿ ಪೊಲೀಸರು ಭೇಟಿ ಮಾಡಿ ಪರಿಶೀಲನೆ ನಡೆಸಿದ್ದಾರೆ.

## ಭೀಮ ಬಲ ಬಳಗದಿಂದ ಸಂವಿಧಾನ ಕಾಲ್ನಡಿಗೆ ಜಾಥಾ

ಮೈಸೂರು: 'ಸಂವಿಧಾನ ಜಾರಿಗೆ ಬಂದು 75 ವರ್ಷಗಳಾದ ವಿಶೇಷವಾಗಿ 'ಭೀಮ ಬಲ ಬಳಗ' ತಂಡದಿಂದ ಇಂದು ಆಯೋಜಿಸಿದ್ದ ವಾಕಾಥಾನ್ ಕಾರ್ಯಕ್ರಮವು ಸುಮಾರು 200 ಜನಗಳು ಭಾಗವಹಿಸುವ ಮೂಲಕ ಯಶಸ್ವಿಯಾಗಿ ನಡೆಯಿತು.

ಈ ಕಾರ್ಯಕ್ರಮವು ಬೆಳಿಗ್ಗೆ 8 ಗಂಟೆಗೆ ಕ್ರಾಫರ್ಡ್ ಭವನದ ಬಳಿಯಲ್ಲಿರುವ ನಾಲ್ವಡಿ ಕೃಷ್ಣರಾಜ ಒಡೆಯರ್ ರವರ ಪ್ರತಿಮೆಗೆ ಪುಷ್ಪಾರ್ಚನೆ ಮಾಡುವ ಮೂಲಕ ಆರಂಭಗೊಂಡು ನಗರದ ಪ್ರಮುಖ ರಸ್ತೆಗಳಲ್ಲಿ ಸಾಗಿ ಅಂಬೇಡ್ಕರ್ ಪ್ರತಿಮೆಯ ಬಳಿ ವಿರಾಮಗೊಂಡಿತು.

ನಂತರ ಅಂಬೇಡ್ಕರ್ ಪ್ರತಿಮೆ ಬಳಿ ಸಂವಿಧಾನ ಪೀಠಿಕೆಯನ್ನು ಸಾಮೂಹಿಕವಾಗಿ ಓದುವ ಮೂಲಕ ಸಂವಿಧಾನ 75 ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಮೈಸೂರು ವಿಶ್ವ ವಿದ್ಯಾನಿಲಯದ ವಿದ್ಯಾರ್ಥಿ ಕ್ಷೇಮ ಪಾಲನ ನಿರ್ದೇಶನಾಲಯದ ನಿರ್ದೇಶಕ ಗುರುಸಿದ್ದಯ್ಯ ಹಾಗೂ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ ದೀಪಕ್ , ಮಾಜಿ ಸಿಂಡಿಕೇಟ್ ಸದಸ್ಯ ಶರತ್ ಸತೀಶ್ ಹಾಗೂ ಭೀಮ ಬಲ ಬಳಗದ ಸಂಚಾಲಕ ಎಂ.ಎಸ್. ಪರಮಾನಂದ ಅವರು ಸಂಚಾಲಕರು ಧ್ವಜ ತೋರುವ ಮೂಲಕ ವಾಕಥಾನ್ ಗೆ ಚಾಲನೆ ನೀಡಿದರು. ಭೀಮ ಬಲ ಭಾರತಕ್ಕೆ ಬಲ ತಂದುಕೊಟ್ಟಿದೆ. ಎಲ್ಲರ ಒಳಗೊಳ್ಳುವಿಕೆಯಲ್ಲಿ ಪ್ರಭುದ್ಧ ಭಾರತವನ್ನು ಕಟ್ಟಬೇಕಿದೆ. ಇದಕ್ಕಾ ಸಂವಿಧಾನದ ರಕ್ಷಣೆ ಪ್ರತಿಯೊಬ್ಬರ ಹೊಣೆ. ಏಕೆಂದರೆ, ಸಂವಿಧಾನದ ಕೇವಲ ದಲಿತರಿಗೆ ಮಾತ್ರವಲ್ಲದೆ,



ಪ್ರತಿಯೊಬ್ಬ ಪ್ರಜೆಗೂ ಸ್ವಾತಂತ್ರ, ರಕ್ಷಣೆ, ಸಾಮಾಜಿಕ ನ್ಯಾಯಕಯನ್ನು ಒದಗಿಸಿದೆ. ಎಲ್ಲರನ್ನೂ ಸಮಾನವಾಗಿ ಕಾಣುವ ಸಂವಿಧಾನವನ್ನು ನಾವೆಲ್ಲರೂ ಗೌರವಿಸಬೇಕು ಎಂದು ಕೆ.ದೀಪಕ್ ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಭೀಮ ಬಲ ಬಳಗದ ಸಂಚಾಲಕರಾದ ಪರಮಾನಂದ.ಎಂ.ಎಸ್ ನಟರಾಜ್ ಶಿವಣ್ಣ ಸಿಂಡಿಕೇಟ್ ಸದಸ್ಯರು ಮೈಸೂರು ವಿಶ್ವವಿದ್ಯಾನಿಲಯ ಶ್ರೀಮತಿ ವೇದಾವತಿ ಆನೆ ಮಹೇಶ್ ಕಾರ್ತಿಕ್ ಮರಿಯಪ್ಪ, ಸುರೇಶ್ ನಾಡನಹಳ್ಳಿ, ನವೀನ್ ಮೌರ್ಯ, ಅಶ್ವಿನಿ ಶರತ್, ಪ್ರಫುಲ್ಲ ಮಲ್ಲಾಡಿ, ಡಾ. ಕಿರಣ್ ಸಂದೇಶ್, ಡಾ. ಅನಿಲ್ ಥಾಮಸ್, ಪುಷ್ಪ, ಇತರರು ಭಾಗವಹಿಸಿದ್ದರು.

**ಶಾಲಾ ಮಂಡಳಿಯಿಂದ ಘೋಷಣೆ, ಆತಂಕಕ್ಕೀಡಾಗಿ ಶಾಲೆ ಮುತ್ತಿದ ಪೋಷಕರು**

# ಮೃತ ಬಾಲಕನ ಕುಟುಂಬಕ್ಕೆ 30 ಲಕ್ಷ ಪರಿಹಾರ

ಮೈಸೂರು: ಶಾಲಾ ಪ್ರವಾಸಕ್ಕೆಂದು ತೆರಳಿದ್ದ ನಗರದ ತರಬಾಳು ಶಾಲಾ ವಾಹನ ಅಪಘಾತಕ್ಕೀಡಾಗಿ ಸಾವನ್ನಪ್ಪಿದ್ದ ವಿದ್ಯಾರ್ಥಿಗೆ 30 ಲಕ್ಷ ಪರಿಹಾರ ಘೋಷಿಸಿ, ಗಾಯಗೊಂಡ ಎಲ್ಲಾ ವಿದ್ಯಾರ್ಥಿಗಳ ಚಿಕಿತ್ಸಾ ವೆಚ್ಚವನ್ನು ಭರಿಸುವುದಾಗಿ ಶಾಲಾ ಆಡಳಿತ ಮಂಡಳಿ ಘೋಷಿಸಿದೆ.

ನಿನ್ನೆ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದ ಸುಳೆ ಮುರ್ಕಿ ಬಳಿ ಪ್ರವಾಸಕ್ಕೆ ಬಂದಿದ್ದ ಶಾಲಾ ಬಸ್ ಪಲ್ಟಿಯಾಗಿದೆ. ಅಪಘಾತದಲ್ಲಿ



ಓರ್ವ ವಿದ್ಯಾರ್ಥಿ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ಘಟನೆಯಲ್ಲಿ 26 ಮಂದಿ ಗಾಯಗೊಂಡಿದ್ದಾರೆ.

ಮೃತ ಬಾಲಕನನ್ನು ಮೈಸೂರಿನ ಪವನ್ (15) ಎಂದು ಗುರುತಿಸಲಾಗಿದೆ. ಈತ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಯಾಗಿದ್ದ ಎಂದು ತಿಳಿದು ಬಂದಿದೆ. ಗಾಯಗೊಂಡ ವಿದ್ಯಾರ್ಥಿಗಳನ್ನು ಹೊನ್ನಾವರ ಸರ್ಕಾರಿ ಆಸ್ಪತ್ರೆಗೆ ರವಾನೆ ಮಾಡಲಾಗಿದೆ. ಕೆಲವರ ಸ್ಥಿತಿ ಗಂಭೀರವಾಗಿದೆ. ಈ ಹಿನ್ನೆಲೆಯಲ್ಲಿ ಶಾಲೆಗೆ ಮುಗಿ ಬಿದ್ದ ಪೋಷಕರು ತಮ್ಮ ಮಕ್ಕಳ ಸಂಪರ್ಕಿಸಲು ಆತಂಕದೊಂದಿಗೆ ಪರದಾಡಿದ್ದಾರೆ.

ಶಾಸಕ ಶ್ರೀವತ್ಸ ಶಾಲೆಗೆ ಭೇಟಿ ನೀಡಿ ಶಾಲಾಡಳಿತದೊಂದಿಗೆ ಚರ್ಚಿಸಿ ಕುಟುಂಬ ದವರಿಗೆ ಸಾಂತ್ವನ ಹೇಳಿದರು. ಬಳಿಕ ಮಾತ ನಾಡಿ, ಅಪಘಾತದಲ್ಲಿ ಮೃತಪಟ್ಟ ಬಾಲಕನ ಕುಟುಂಬಕ್ಕೆ 30 ಲಕ್ಷ ಪರಿಹಾರ ಹಾಗು ಗಾಯಗೊಂಡ ವಿದ್ಯಾರ್ಥಿಗಳ ಸಂಪೂರ್ಣ ಚಿಕಿತ್ಸಾ ವೆಚ್ಚ ಭರಿಸುವುದಾಗಿ ತರಳಬಾಳು ಶಿಕ್ಷಣ ಸಂಸ್ಥೆ ಆಡಳಿತ ಮಂಡಳಿ ತಿಳಿಸಿದೆ ಎಂದು ತಿಳಿಸಿದರು.

ಶೈಕ್ಷಣಿಕ ಪ್ರವಾಸಕ್ಕೆ ತೆರಳಿದ್ದ ಬಸ್ ಹೊನ್ನಾವರ ಬಳಿ ಅಪಘಾತಕ್ಕೀಡಾಗಿ ಓರ್ವ ವಿದ್ಯಾರ್ಥಿ ಸಾವನ್ನಪ್ಪಿದ್ದು ಕೆಲ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಗಾಯಗೊಂಡಿದ್ದರು. ಈ ಹಿನ್ನೆಲೆಯಲ್ಲಿ ತರಳಬಾಳು ಶಾಲಾ ಆಡಳಿತ ಮಂಡಳಿ ಹಾಗೂ ಪೋಷಕರೊಂದಿಗೆ ಸಭೆ ನಡೆಸಿ ಬಳಿಕ ಮಾತನಾಡಿದ ಅವರು ಪವನ್ ಎಂಬ ವಿದ್ಯಾರ್ಥಿ



ಅಪಘಾತದಲ್ಲಿ ಮೃತಪಟ್ಟಿದ್ದಾನೆ. ಆತ ಬಡ ಕುಟುಂಬ ವಿದ್ಯಾರ್ಥಿಯಾಗಿದ್ದಾನೆ. ಅಪಘಾತದಲ್ಲಿ ಮೃತಪಟ್ಟ ವಿದ್ಯಾರ್ಥಿ ಪೋಷಕರಿಗೆ ಶಾಲಾ ಆಡಳಿತ ಮಂಡಳಿ 30ಲಕ್ಷ ಪರಿಹಾರ ನೀಡಲಿದೆ. ಜೊತೆಗೆ ಜನವರಿಯಲ್ಲಿ ಕುಟುಂಬಕ್ಕೆ ಆಶ್ರಯ ಯೋಜನೆಯಡಿ ಮನೆ ಅಥವಾ ನಿವೇಶನ ನೀಡಲಾಗುವುದು. ನಾವು ಏನೇ ಕೊಟ್ಟರೂ ಆ ತಂದೆ ತಾಯಿಗೆ ಮಗನ್ನು ಕೊಡಲು ಸಾದ್ಯವಿಲ್ಲ ಎಂದು ಸಂತಾಪ ಸೂಚಿಸಿದರು.

ಶಾಲೆಗಳು ಮಕ್ಕಳನ್ನು ಪ್ರವಾಸಕ್ಕೆ ಕರೆದು ಕೊಂಡು ಹೋಗುವಾಗ ಸರ್ಕಾರ ಮಾರ್ಗ ಸೂಚಿ ಪಾಲಿಸಬೇಕು. ಈ ಶಾಲೆಯವರು ಸರ್ಕಾರದ ನಿಯಮಗಳನ್ನು ಪಾಲಿಸಿಲ್ಲ ಎಂಬುದು ಗೊತ್ತಾಗಿದೆ. ಕೆಎಸ್ ಆರ್ ಟಿಸಿ ಬಸ್ ನಲ್ಲೆ ಪ್ರವಾಸಕ್ಕೆ ಕರೆದುಕೊಂಡು ಹೊಗಬೇಕು ಎಂಬ ನಿಯಮ ಇದೆ. ಈ ನಿಯಮ ಪಾಲನೆ ಆಗಿಲ್ಲ. ಸಂಸ್ಥೆಯ ಲೋಪದೋಷಗಳೂ ಇವೆ. ಇದನ್ನು ಇಲಾಖೆ ಅಧಿಕಾರಿಗಳು ಕ್ರಮವಹಿಸುತ್ತಾರೆ. ಸರ್ಕಾರಿ ಬಸ್ ನಲ್ಲಿ ಹೋಗಿದ್ದರೆ 10 ಲಕ್ಷ ಮತ್ತು ನ್ಯಾಯಾಲದ ತೀರ್ಮಾನದಂತೆ ಪರಿಹಾರ ಸಿಗುತ್ತಿತ್ತು. ಈ ದುರ್ಘಟನೆ ನಡೆಯಬಾರದಿತ್ತು. ನಡೆದುಹೋಗಿದೆ. ಮಣಿಪಾಲ್ ಆಸ್ಪತ್ರೆಯಲ್ಲಿರುವ ಗಾಯಾಳುಗಳು ಅಪಾಯದಿಂದ ಪಾರಾಗಿದ್ದಾರೆ ಎಂದರು. ಶಾಸಕ ಹರೀಶ್ ಗೌಡ ಮಾತನಾಡಿ, ಈ ಘಟನೆಗೆ ಚಾಲಕನ ಅಜಾಗರೂಕತೆ ಕಾರಣವಾಗಿದೆ. ಶಾಲಾ ಆಡಳಿತ ಮಂಡಳಿ ಜೊತೆ ಸಭೆ ಮಾಡಿದ್ದೇವೆ ಮಂಡಳಿ ಉತ್ತಮ ಸ್ಪಂದನೆ ನೀಡಿದೆ. ಪರಿಹಾರ ನೀಡುವ ಭರವಸೆ ನೀಡಿದ್ದಾರೆ. ಶಾಸಕ ಶ್ರೀವತ್ಸ ಮಾನವೀಯತೆಯಿಂದ ಆಶ್ರಯ ಯೋಜನೆಯಡಿ ಮನೆ ನೀಡುವ ಭರವಸೆ ನೀಡಿದ್ದಾರೆಂದರು.

### ಸರಣಿ ಆರೋಪ

**ಶಾಲಾಡಳಿತ ಮಂಡಳಿಯೂ ಯಾವುದೇ ಕಾನೂನು ಪಾಲಿಸದೇ ಪ್ರವಾಸಕ್ಕೆಂದು ಮಕ್ಕಳನ್ನು ಕರೆದೊಗಿದ್ದಾರೆ. ಘಟನೆ ಬಳಿಕವೂ ಸಹ ಪೋಷಕರಿಗೆ ಸರಿಯಾಗಿ ಮಾಹಿತಿ ನೀಡುತ್ತಿಲ್ಲ. ನಮ್ಮ ಗಾಬರಿಗೆ ಸರಿಯಾಗಿ ಸ್ಪಂದಿಸುವ ಕೆಲಸ ಮಾಡುತ್ತಿಲ್ಲ. ಮಕ್ಕಳನ್ನು ಒತ್ತಡದಲ್ಲಿಯೂ ಕರೆದೋಗಿದ್ದಾರೆಂದು ಪೋಷಕರು ಆರೋಪಿಸಿದರು.**

ಹೊನ್ನಾವರದ ಬಳಿ ಅಪಘಾತವಾಗಿದೆ ಅಲ್ಲಿನ ಶಾಸಕ ಹಾಗೂ ಸಚಿವ ಮಂಕಾಳ್ ವೈದ್ಯ ಅವರ ಜತರ ಕೂಡ ಮಾತನಾಡಿದ್ದೇನೆ. ಪ್ರವಾಸ ತೆರಳಿದ್ದ ಮಕ್ಕಳನ್ನು ವಾಪಸ್ ಕರೆಸುವ ವಿಚಾರವನ್ನು ನಾನು ಸಿಎಂ ಗಮನಕ್ಕೂ ತಂದಿದ್ದೆನೆ. ಅಲ್ಲಿ ಏನೆಲ್ಲಾ ವ್ಯವಸ್ಥೆ ಮಾಡಬೇಕೊ ಎಲ್ಲವನ್ನು ಮಾಡಿದ್ದಾರೆ ಎಂದರು. ಸಭೆಯಲ್ಲಿ ಶಾಲಾ ಆಡಳಿತ ಮಂಡಳಿ ಸದಸ್ಯರು, ನಗರಪಾಲಿಕೆ ಮಾಜಿ ಸದಸ್ಯ ಗೋಪಿ, ಬಿಆರ್ ಸಿ ಶ್ರೀಕಂಠಸ್ವಾಮಿ ಸೇರಿ ಇತರರು ಹಾಜರಿದ್ದರು.

> **ಪ್ರವಾಸ ಸಂದರ್ಭದಲ್ಲಿ ಶಾಲೆಗಳವರು ಬಿಇಒ ಕಚೇರಿ ಅನುಮತಿ ಪಡೆಯಬೇಕು. ಆದರೆ ಈ ಶಾಲೆಯವರು ಅನುಮತಿ ಪಡೆದಿಲ್ಲ. ಪ್ರವಾಸಕ್ಕೆ ತೆರಳುವ ಮಾರ್ಗಸೂಚಿ ಪಾಲನೆ ಮಾಡಿಲ್ಲ. ಸರ್ಕಾರ ಸುತ್ತೋಲೆ ಪ್ರಕಾರ 11 ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲನೆ ಮಾಡಬೇಕು. ಅದರಲ್ಲಿ ಕೆ ಎಸ್ ಆರ್ ಟಿಸಿ ಅಥವಾ ಕೆಎಸ್ ಟಿಡಿಸಿ ಬಸ್ ನಲ್ಲೆ ತೆರಳಬೇಕು ಎಂಬ ನಿಯಮ ಇದೆ. ಇವರು ಖಾಸಗಿ ಬಸ್ ನಲ್ಲಿ ಪ್ರವಾಸ ಕೈಗೊಂಡಿದ್ದಾರೆ. ಈ ಹಿಂದೆಯೇ ಎಲ್ಲಾ ಶಾಲೆಗಳಿಗೂ ಸುತ್ತೋಲೆ ಕಳುಹಿಸಲಾಗಿದೆ. ಈ ಸಂಬಂಧ ಮಕ್ಕಳು ಸುರಕ್ಷತೆ ದೃಷ್ಟಿಯಿಂದ ಮಾರ್ಗಸೂಚಿ ಪಾಲಿಸಬೇಕು ಎಂದು ಎಲ್ಲಾ ಶಾಲೆಗಳಿಗೂ ಸೂಚನೆ ನೀಡಲಾಗಿದೆ. ಮಾರ್ಗಸೂಚಿ ಪಾಲನೆ ಮಾಡದ ತರಳಬಾಳು ಶಾಲೆ ವಿರುದ್ದ ಕ್ರಮ ಕೈಗೊಳ್ಳಲಾಗುವುದು.**
>
> ▶▶ **ಉದಯ್ ಕುಮಾರ್** ಡಿಡಿಪಿಐ

# ರೈತರು ಸಂಘಟಿತರಾಗದಿದ್ದರೆ ರೈತ ಸಂಕುಲವೇ ನಾಶ



ಚಾಮರಾಜನಗರ, ನಮ್ಮನ್ನು ಆಳುತ್ತಿರುವ ಸರ್ಕಾರಗಳ ರೈತ ವಿರೋಧಿ ಧೋರಣೆಗಳು ಹಾಗೂ ಕಾಯ್ದೆಗಳಿಂದಾಗಿ ಈಗಾಗಲೇ ರೈತರು ಸಂಕಷ್ಟದಲ್ಲಿದ್ದಾರೆ. ಇದೇ ಸ್ಥಿತಿ ಮುಂದುವರಿದರೆ ರೈತ ಸಂಕುಲವೇ ನಾಶವಾಗಿ, ಎಲ್ಲರು ಕಾರ್ಪೋರೇಟ್ ವಲಯವಾಗುತ್ತದೆ. ಹೀಗಾಗಿ ರೈತರು ಎಚ್ಚರ ವಹಿಸಿ, ಸಂಘಟಿತರಾಗಬೇಕಾಗಿದೆ ಎಂದು ಸಾಮೂಹಿಕ ನಾಯಕತ್ವದ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಹೊನ್ನೂರು ಪ್ರಕಾಶ ತಿಳಿಸಿದರು.

**▸▸ ಹೊನ್ನೂರು ಪ್ರಕಾಶ್ ಕಳವಳ**
**▸▸ ಮೂಡ್ನಾಕೂಡು, ಪುಣಜನೂರಿನಲ್ಲಿ ರೈತ ಸಮಘ ಗ್ರಾಮ ಘಟಕ ಉದ್ಘಾಟನೆ**

ತಾಲೂಕಿನ ಮೂಡ್ನಾಕೂಡು ಹಾಗೂ ಪುಣಜನೂರು ಗ್ರಾಮಲ್ಲಿ ಸಾಮೂಹಿಕ ನಾಯಕತ್ವದ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಗ್ರಾಮ ಘಟಕವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಇತ್ತೀಚಿನ ಕಾಲಘಟ್ಟದಲ್ಲಿ ರೈತರು ಒಗ್ಗಟ್ಟಾಗಿ ಸಂಘಟನೆಗೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ರೈತರಾಗಿ ಉಳಿಯುವುದಿಲ್ಲ. ನಮ್ಮ ಮೇಲೆ ಮಾರಣಾಂತಿಕ ಕಾಯ್ದೆಗಳು ಜಾರಿಯಾಗುತ್ತೇವೆ. ಈಗಾಗಲೇ ಎಲ್ಲಾ ನಾಟಿ ಬೀಜಗಳನ್ನು ಕಳೆದುಕೊಂಡಿದ್ದೇವೆ. ಹೊರ ದೇಶಗಳಿಂದ ಶೇ 10 ರಷ್ಟು ಎಣ್ಣೆಯನ್ನು ಆಮದು ಮಾಡಿಕೊಳ್ಳುತ್ತಿದ್ದೇವೆ. ಅದು 60 ಪರ್ಸೆಂಟ್ ತಲುಪಿದೆ. ಎಲ್ಲವನ್ನು ಅಮದು ಮಾಡಿಕೊಟ್ಟರೆ, ನಮ್ಮ ರೈತ ಸ್ಥಿತಿ, ಅವರು ಬೆಳೆಗಳಿಗೆ ಎಲ್ಲಿ ಮೌಲವರ್ಧಿತ ಬೆಲೆಗಳು ದೊರೆಯುತ್ತಿವೆ ಎಂದು ಪ್ರಶ್ನಿಸಿದರು.

ಅಂತರರಾಷ್ಟ್ರೀಯ ಒಪ್ಪಂದ ಕಾಯ್ದೆಯನ್ನು ಅನುಷ್ಠಾನ ಮಾಡಿಕೊಂಡಿರುವ ಸರ್ಕಾರಗಳು ಯಾವ ದೇಶದಲ್ಲಿ ಹೆಚ್ಚು ಬೆಳೆಯುತ್ತಿದ್ದಾರೆ. ಅದನ್ನು ನಮ್ಮ ದೇಶದಲ್ಲಿ ಮಾರುಕಟ್ಟೆ ಮಾಡುವ ಅವಕಾಶವನ್ನು ಕಲ್ಪಿಸಕೊಡಲಾಗಿದೆ. ಇದೊಂದು ಮರಣ ಶಾಸನವಾಗಿದೆ ಎಂದರು.

ಈಗ ಮುಸುಕಿನ ಜೋಳ ಸರದಿ ಆರಂಭವಾಗಿದೆ. ಭಾರತಕ್ಕೆ ಅಮೇರಿಕಾದಿಂದ ಶೂನ್ಯ ಸುಂಕದ ಮುಖಾಂತರ ಮುಸುಕಿನ ಜೋಳ ಅಮದಾಗುತ್ತಿದೆ. ಇದನ್ನು ಯಥನಾಲಿಗೆ ಮಾತ್ರ ಬಳಸುತ್ತೇವೆ ಎಂದು ಹೇಳುತ್ತಾ ಅಮೇರಿಕಾದಿಂದ ಬರುತ್ತಿದೆ. ಇಡೀ ಪ್ರಪಂಚದಲ್ಲಿ ಅಮೆರಿಕ ಶೇ. 35ರಷ್ಟು ಮುಸುಕಿನ ಜೋಳ ಬೆಳೆಯುತ್ತಿದೆ. ಭಾರತದಲ್ಲಿ ಶೇ. 3 ರಷ್ಟು ಮಾತ್ರ ಬೆಳೆಯುತ್ತಿದೆ. ಈ ವರ್ಷ ಹೆಚ್ಚು ಮುಸುಕಿನ ಜೋಳ ಬೆಳೆದಿದ್ದೇವೆ. ಇದೇ ವೇಳೆಯಲ್ಲಿ ಅಮೆರಿಕದಿಂದ ಮುಸುಕಿನ ಜೋಳ ಹೆಚ್ಚಿನ ಪ್ರಮಾಣದಲ್ಲಿ ಭಾರತಕ್ಕೆ ಬಂದರೆ, ನಮ್ಮ ರೈತರ ಗತಿ ಏನಾಗುತ್ತದೆ ಎಂದು ಕಳವಳ ವ್ಯಕ್ತಪಡಿಸಿದರು.

ಈಗಾಗಲೇ ನಮ್ಮ ದೇಶಕ್ಕೆ ಹೆಚ್ಚಾಗಿ ಎಣ್ಣೆಕಾಳುಗಳು, ತೊಗರಿ ಅಮದಾಗುತ್ತಿದೆ. ಇನ್ನು ಮುಸುಕಿನ ಜೋಳ ಬಂದಿದೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಉತ್ಪನ್ನಗಳು ಆಮದಾಗಬಹುದು ಇದು ಹೀಗೆ ಮುಂದುವರಿದರೆ ನಮ್ಮ ದೇಶದ ರೈತರ ಸ್ಥಿತಿ ಅದೋಗತಿ ಇಳಿಯಲಿದೆ ಎಂದರು.

### ಸಫಾರಿಗೆ ಅವಕಾಶ ಬೇಡ

ವನ್ಯಪ್ರಾಣ ಗಳು ರೈತರ ಜಮೀನುಗಳಿಗೆ ನುಗ್ಗದಂತೆ ತಡೆದು ನಂತರ ಸಫಾರಿ, ರೆಸಾರ್ಟ ಪ್ರಾರಂಭಿಸಲಿ ರೈತರ ಪ್ರಾಣ ಹಾನಿಯಾಗುವುದಿಲ್ಲ ಎಂದು ಖಾತರಿ ಮಾಡಿದರೆ ಮಾತ್ರ ಅವಕಾಶ ನೀಡಬೇಕು ಎಂದು ಒತ್ತಾಯಿಸಿದರು. ಕಾರ್ಯಕ್ರಮದಲ್ಲಿ ರೈತ ಸಂಘದ ಜಿಲ್ಲಾ ಅಧ್ಯಕ್ಷ ಮಂಡಳಿ ಸದಸ್ಯರಾದ ಅಂಬಳೆ ಶಿವಕುಮಾರ್, ಮಡ್ರಳ್ಳಿ ಪಾಪಣ್ಣ, ಜಿಲ್ಲಾ ಹಸಿರು ಸೇನೆಯ ಬೇರಂಬಾಡಿ ಶಶಿ, ಕೆಕೆಹುಂಡಿ ಪ್ರಸಾದ್, ಉಪಾಧ್ಯಕ್ಷರಾದ ಬರಗಿ ಮಹೇಶ್ ತಾಲೂಕು ಅಧ್ಯಕ್ಷ ಮಂಡಳಿ ಸದಸ್ಯರಾದ ಬೆಟ್ಟದಪುರ ಬಸವಣ್ಣ ಮೇಲಾಜಿಪುರದ ಮಲ್ಲೇಶ, ಬೆಟ್ಟದಪುರದ ಜಗದೀಶ್, ಮಹದೇವಸ್ವಾಮಿ ಹಸಿರು ಸೇನೆಯ ಚನ್ನಒಡೆಯನಪುರದ ಮಾದೇವಪ್ರಭು, ಸಂಪಿಗೆಪುರದ ಕುಮಾರ್ ಹಾಗೂ ಗ್ರಾಮಸ್ಥರು ಯುವಕರು ಭಾಗವಹಿಸಿದ್ದರು.

# ಪೂರ್ಣಾವಧಿ ಸಿಎಂ ಆಗಿ ಸಿದ್ದರಾಮಯ್ಯ ಘೋಷಣೆಗೆ ಆಗ್ರಹ



ಮೈಸೂರು: ಮುಖ್ಯಮಂತ್ರಿ ಸಿದ್ದರಾಮಯ್ಯರನ್ನು ಪೂರ್ಣವಧಿ ಸಿಎಂ ಎಂದೂ ಕಾಂಗ್ರೆಸ್ ಹೈಕಮಾಂಡ್ ಘೋಷಿಸಿ ಗೊಂದಲಕ್ಕೆ ತೆರೆ ಎಳೆಯಬೇಕೆಂದು ಆಗ್ರಹಿಸಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ, ಅಹಿಂದ ಸಂಘಟನೆಗಳ ದುಂಡುಮೇಜಿನ ಸಭೆ ನಡೆಸಿ ಸಾಂಕೇತಿಕವಾಗಿ ರಸ್ತೆ ನಡೆಸಿ ಪ್ರತಿಭಟಿಸಿದರು.

ಈ ವೇಳೆ ಮಾತನಾಡಿದ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ, ಅಹಿಂದ ಸಂಘಟನೆಗಳ ಅಧ್ಯಕ್ಷ ಕೆ.ಎಸ್.ಶಿವರಾಮು ರಾಜ್ಯದಲ್ಲಿ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಅವರನ್ನು ಪೂರ್ಣವಾಧಿಗೆ ಪೂರ್ಣಗೊಳಿಸಬೇಕು. ಪಟ್ಟಭದ್ರ ಹಿತಾಸಕ್ತಿಗಳು ಸಾಕಷ್ಟು ಗೊಂದಲಗಳನ್ನು ಸೃಷ್ಟಿಸುತ್ತಿದ್ದಾರೆ. ಕಾಂಗ್ರೆಸ್ ಮತಗಳನ್ನು ಒಡೆಯಲು ಜೆಡಿಎಸ್, ಬಿಜೆಪಿ ಪ್ರಯತ್ನಗಳನ್ನು ನಡೆಸುತ್ತಿದ್ದಾರೆ. ಈ ಷಡ್ಯಂತ್ರವನ್ನು ರಾಜ್ಯ ಹಾಗೂ ರಾಷ್ಟ್ರ ನಾಯಕರು ಅರ್ಥಮಾಡಿಕೊಳ್ಳಬೇಕು. ಒಂದು ಕಡೆ ಸಿದ್ದರಾಮಯ್ಯನವರನ್ನು ಮುಖ್ಯಮಂತ್ರಿ ಸ್ಥಾನದಿಂದ ಇಳಿಸಲು ಪ್ರಯತ್ನಿಸುತ್ತಿದ್ದಾರೆ. ಮತ್ತೊಂದು ಕಡೆ ಡಿ.ಕೆ.ಶಿವಕುಮಾರ್ ರನ್ನು ಮುಖ್ಯಮಂತ್ರಿ ಮಾಡಬೇಕೆಂದು ಬಿಜೆಪಿ, ಜೆಡಿಎಸ್ ಮುಖಂಡರು ಒತ್ತಾಯ ಮಾಡುತ್ತಿದ್ದಾರೆ. ಹೈಕಮಾಂಡ್ ಕಾಂಗ್ರೆಸ್ ನಾಯಕರು ಮಧ್ಯೆ ಪ್ರವೇಶ ಮಾಡಿ ಸಿದ್ದರಾಮಯ್ಯನವರನ್ನೇ ಪೂರ್ಣಾವಧಿ ಮುಖ್ಯಮಂತ್ರಿ ಎಂದು ಘೋಷಿಸಬೇಕು. ಗೊಂದಲವನ್ನು ಬಗೆಹರಿಸಬೇಕೆಂದು ಮಾಧ್ಯಮ ಹಾಗೂ ಮೇಲ್ ಮೂಲಕ ಮನವಿಯನ್ನು ಮಾಡುತ್ತಿದ್ದೇವೆಂದರು.

2023ರಲ್ಲಿ 136 ಸ್ಥಾನ ಪಡೆದು ಕಾಂಗ್ರೆಸ್ ಅಧಿಕಾರ ಮಾಡುತ್ತಿದೆ. ರಾಜಕೀಯ ಗೊಂದಲದ ವಾತಾವರಣ ಮೂಡಿಸುವ ಕೆಲಸ ನಡೆಯುತ್ತಿದೆ. 2013ರಲ್ಲಿ ಸಿದ್ದರಾಮಯ್ಯ ಸಿಎಂ ಜನಪರ ಕೆಲಸ ಮಾಡಿದ್ದಾರೆ. ಅದಕ್ಕೆ 2023ರಲ್ಲಿ ಬಹುಮತದಿಂದ ಅಧಿಕಾರಕ್ಕೆ ಬಂದರು. ಅಹಿಂದ ಸಮುದಾಯದ ಕಾಂಗ್ರೆಸ್ ಪಕ್ಷದ ಬೆನ್ನೆಲುಬು, ರಾಜ್ಯದಲ್ಲಿ ಶೇ.70 ಈ ಸಮುದಾಯದ, ಅಹಿಂದ ಸಮುದಾಯದ ರಾಜ್ಯದಲ್ಲಿ 4 ಕೋಟಿ ಇದೆ. ಜಾತಿಗಣತಿ ಕಸದ ತಿಪ್ಪೆಗೆ ಎಸೆಯಿರಿ ಎಂದಿದ್ದಾರೆ. ಕೆಲವರು, ಸಾಮಾಜಿಕ, ಆರ್ಥಿಕ, ಶೈಕ್ಷಣಿಕವಾಗಿ ಹಿಂದೆ ಉಳಿದಿದೆ. ರಾಜ್ಯದಲ್ಲಿ 23 ಜನ ಮುಖ್ಯಮಂತ್ರಿಯಲ್ಲಿ ಶೇಕಡಾವಾರು ಪ್ರಬಲ ಜಾತಿಯವರೇ ಸಿಎಂ ಆಗಿದ್ದಾರೆ. ಡಿಸಿಎಂ ಡಿ.ಕೆ.ಶಿವಕುಮಾರ್ ವಿರುದ್ಧ ನಾವು ಇಲ್ಲ, ಕಾಂಗ್ರೆಸ್ ವಿರುದ್ಧ ಇಲ್ಲ. ಅರ್ಹತೆ ಇದೆ ಅವರೂ ಆಗಲಿ. ಅಹಿಂದ ಶೇ.63ರಷ್ಟು ಮತ ಹಾಕಿದೆ. ಲಿಂಗಾಯತ 22ರಿಂದ 23, ಒಕ್ಕಲಿಗ 18ರಿಂದ 20, ಬ್ರಾಹ್ಮಣ –ಶೇ.1ರಷ್ಟು ನಾವು ಶೇ.63 ಹಾಕಿ ಸುಮ್ಮನೇ ಇರಬೇಕ? ಸಿಎಂ ಸಿದ್ದರಾಮಯ್ಯ ಪೂರ್ಣ ಇರಬೇಕು ಎಂದರು.

ಬಿಜೆಪಿ ಜೆಡಿಎಸ್ ಡಿಕೆಶಿಯನ್ನು ಬಲಿಪಶು ಮಾಡುತ್ತಿದ್ದಾರೆ. ಸಿದ್ದರಾಮಯ್ಯ ಖುರ್ಚಿಯಿಂದ ಇಳಿಸಲು ಷಡ್ಯಂತ್ರ, ಡಿಕೆಶಿ–ಸಿಎಂ ಇಳಿಸಲು ಒಂದೇ ಕಲ್ಲಿನಲ್ಲಿ ಎರಡು ಹಕ್ಕಿ ಹೊಡೆಯುವ ಗುರಿ ಮಾಡಿದ್ದಾರೆ. ಸಿದ್ದರಾಮಯ್ಯ ಪೂರ್ಣವಾಧಿ ಸಿಎಂ ಇರಬೇಕು. ಸಿಎಂ ಸಿದ್ದರಾಮಯ್ಯರನ್ನು ಇಳಿಸಬಾರದು.ಈ ಹಿನ್ನೆಲೆಯಲ್ಲಿ ಎಐಸಿಸಿ ಕಚೇರಿ ಮುಂದೆ ಪ್ರತಿಭಟನೆ ಮಾಡಿ, ಒತ್ತಡ ಹಾಕುತ್ತೇವೆಂದರು. ಪ್ರತಿಭಟನೆಯಲ್ಲಿ ಯೋಗೇಶ್ ಉಪ್ಪಾ, ಮಾರ, ಕೆ.ಆರ್.ಬ್ಯಾಂಕ್ ಅಧ್ಯಕ್ಷ ಬಸವರಾಜು, ದೊರೆ, ನಾಯಕರ ಯುವಸೇನೆ ಅಧ್ಯಕ್ಷ ದೇವರಾಜ ಟಿ.ಕಾಟೂರು ಇನ್ನಿತರರು ಉಪಸ್ಥಿತರಿದ್ದರು.

**ಒಕ್ಕಲಿಗರು ಡಬಲ್ ಸ್ಟಾಂಡ್**

**‘ ಲೋಕಸಭೆಯಲ್ಲಿ ಬಿಜೆಪಿ ಹಾಗೂ ವಿಧಾನ ಸಭೆಯಲ್ಲಿ ಜೆಡಿಎಸ್‌ಗೆ ಒಕ್ಕಲಿಗರು ಮತ ಚಲಾಯಿಸುತ್ತಾರೆ. ಮುಂದಿನ ಚುನಾವಣೆಯಲ್ಲಿ ಮೈಸೂರು, ಮಂಡ್ಯ, ತುಮಕೂರು, ಬೆಂಗಳೂರಿನಲ್ಲಿ ಪೂರ್ಣ ಮತದಲ್ಲಿ ಕಾಂಗ್ರೆಸ್ ಗೆಲ್ಲಿಸಿ, ಆಗ ಸಿಎಂ ಹುದ್ದೆ ಕೇಳಲಿ. ಅಹಿಂದ ಸಮುದಾಯದ ದಲಿತ, ಎಸ್ಸಿ, ಎಸ್ಟಿ, ನಾಯಕ, ಕುರುಬ ಹೀಗೆ ಎಲ್ಲಾ ಸಮುದಾಯಗಳು ಒಮ್ಮತದಿಂದ ಸಿದ್ದರಾಮಯ್ಯನವರನ್ನು ಒಪ್ಪಿದ್ದಾರೆ. ಇಂತಹ ವೇಳೆ ಅವರ ಬದಲಾವಣೆ ಸರಿಯಲ್ಲ.**

**▸▸ ಕೆ.ಎಸ್.ಶಿವರಾಮು**

## ವಿಶ್ವನಾಥ್ ಸುಫಾರಿ ಕಿಲ್ಲರ್:

**ಜೆಡಿಎಸ್ ಗೆ ಹೋಗಿ ಎಚ್.ಡಿ.ಕುಮಾರಸ್ವಾಮಿ ಮುಗಿಸಿದರು. ಬಿಜೆಪಿಗೆ ಹೋಗಿ ಬಿ.ಎಸ್.ವೈ ಮುಗಿಸಿದರು. ಈಗ ಸಿದ್ದರಾಮಯ್ಯ ಮೇಲೆ ಕಣ್ಣು ಇಟ್ಟಿದ್ದಾರೆ. ಇವರ ಸುಫಾರಿ ಕಿಲ್ಲರ್ ಆಗಿದ್ದು, ಇವರು ಅರೆ ಹುಚ್ಚನಾಗಿ ಮಾತನಾಡುವುದು ಬಿಡಬೇಕೆಂದು ಕೆ.ಎಸ್.ಶಿವರಾಮು ಒತ್ತಾಯಿಸಿದರು.**

## ರಕ್ತದಾನದ ಜಾಗೃತಿ ವೃದ್ಧಿಸಲಿ: ದಿನೇಶ್ ಗುಂಡೂರಾವ್

ಮೈಸೂರು: ನಗರದ ಜೆಕೆ ಗ್ರೌಂಡ್ ನಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಆಯೋಜಿಸಿದ ವಿಶ್ವ ಏಡ್ಸ್ ದಿನಾಚರಣೆ ಕಾರ್ಯಕ್ರಮದಲ್ಲಿ ಜೀವದಾರ ರಕ್ತನಿಧಿ ಕೇಂದ್ರದ ರಕ್ತದಾನ ಜಾಗೃತಿ ವುಳ್ಳ 2026ರ ಕ್ಯಾಲೆಂಡರ್ ಅನ್ನು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಬಿಡುಗಡೆಗೊಳಿಸಿದರು.

ಬಳಿಕ ಮಾತನಾಡಿ, ಅನೇಕ ಸಂಘಟನೆ ಮತ್ತು ಸರಕಾರೇತರ ಸಂಘಟನೆಗಳ ಶ್ರಮದಿಂದ ಕಳೆದ ದಶಕಗಳಲ್ಲಿ ರಕ್ತದಾನದ ಮಹತ್ವದ ಬಗ್ಗೆ ಸಮಾಜದಲ್ಲಿ ಜಾಗೃತಿ ಮೂಡಿದೆ. ಆದರೆ ಈ ಜಾಗೃತಿ ಇನ್ನೂ ಹೆಚ್ಚು ವ್ಯಾಪಕವಾಗುವ ಅವಶ್ಯಕತೆ ಇದೆ. ಈ ಹಿಂದಿನ ದಿನಮಾನಗಳಿಗೆ ಹೋಲಿಸಿದ್ದಲ್ಲಿ ಕಳೆದ ದಶಕದಲ್ಲಿ ರಕ್ತದಾನ ಮಹತ್ವದ ಬಗ್ಗೆ ಜಾಗೃತಿ ಮೂಡಿದೆ. ಕಾಲೇಜುಗಳ ಎನ್ ಎಸ್ ಎಸ್ ಮತ್ತು ಎನ್‌ಸಿಸಿ ಕೆಡೆಟ್‌ಗಳಿಗೆ ಸೀಮಿತವಾಗಿದ್ದ ರಕ್ತದಾನ ಶಿಬಿರ ಇಂದು ಅನೇಕ ಸರಕಾರೇತರ ಸಂಘಟನೆ ಮತ್ತು ಯುವಕ ಮಂಡಳಿ ರಕ್ತದಾನ ಶಿಬಿರ ಆಯೋಜಿಸುತ್ತಿರುವುದು ಶ್ಲಾಘನೀಯ. ಸಂಗೀತ ಆಲಿಸುವುದು, ಪ್ರವಾಸ ಮತ್ತು ಇತರ ಹವ್ಯಾಸಗಳಂತೆ ಇತ್ತೀಚೆಗೆ ನಿಯಮಿತವಾಗಿ ರಕ್ತದಾನ ಮಾಡುವುದು ಸಹ ಕೆಲ ಯುವಕರ ಹವ್ಯಾಸವಾಗಿದೆ. ಈ ಬಗೆಯ ಸಕಾರಾತ್ಮಕ ಬೆಳವಣಿಗೆ?ಗಳು ಆರೋಗ್ಯ ಕ್ಷೇತ್ರದ ಬಹು ದೊಡ್ಡ ಸವಾಲಾಗಿದ್ದ ರಕ್ತದ ಕೊರತೆ ನೀಗಿಸುತ್ತಿವೆ ಎಂದರು ಇದೇ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಕುಮಾರಸ್ವಾಮಿ, ಜಿಲ್ಲಾ ಏಡ್ಸ್ ಪ್ರತಿಬಂದಕ ಮತ್ತು ನಿಯಂತ್ರಣ ಘಟಕದ ಜಿಲ್ಲಾ ಕಾರ್ಯಕ್ರಮ ಅಧಿಕಾರಿ ಡಾ.ಮಹಮ್ಮದ್ ಸಿರಾಜ್ ಅಹಮದ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ ವಿಜಯ್ ಕುಮಾರ್, ಮೂಡ ಮಾಜಿ ಅಧ್ಯಕ್ಷ ಎಚ್ ವಿ ರಾಜೀವ್, ಡಾ.ಸುಜಾತಾ ರಾವ್, ಜೀವದಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ವಿನಯ್ ಕಣಗಾಲ್, ಎಸ್.ಎನ್.ರಾಜೇಶ್, ಮಹೇಶ್ ಕುಮಾರ್ ಇನ್ನಿತರರು ಹಾಜರಿದ್ದರು.



## ಜ್ಯೋತಿಗೌಡನಪುರ ಅಂಬೇಡ್ಕರ್, ಬುದ್ಧ ವಿಗ್ರಹ ವಿರೂಪಗೊಳಿಸಿದ ಪ್ರಕರಣ | ಪ್ರಮುಖ ಆರೋಪಿ ಬಂಧನ

# ತನಿಖೆ ಪ್ರಗತಿಯಲ್ಲಿದೆ: ಎಸ್ಪಿ




ಚಾಮರಾಜನಗರ, ತಾಲೂಕಿನ ಜ್ಯೋತಿಗೌಡನ ಪುರದಲ್ಲಿ ಬುದ್ಧ ಹಾಗೂ ಅಂಬೇಡ್ಕರ್ ಪ್ರತಿಮೆಗಳ ವಿರೂಪ ಪ್ರಕರಣ ನಡೆದು 11 ದಿನಕ್ಕೆ ಪ್ರಮುಖ ಆರೋಪಿಯನ್ನು ಬಂಧಿಸಿದ್ದು, ಪ್ರಕರಣ ತನಿಖೆ ಹಂತದಲ್ಲಿದೆ. ಭಾಗಿಯಾಗಿರುವ ಬಗ್ಗೆ ನಿಖರವಾದ ಮಾಹಿತಿ ಇದ್ದರೆ ಮಾತ್ರ ಬಂಧಿಸಲಾಗುತ್ತದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತಾ ಹೇಳಿದರು.

ನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಎಸ್‌ಸಿ, ಎಸ್‌ಟಿ ಮುಖಂಡರ ಕುಂದು ಕೊರತೆ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಈ ಪ್ರಕರಣ ಬಹಳ ಸೂಕ್ಷ್ಮವಾಗಿದ್ದು, ಘಟನೆ ವರದಿ ಯಾಗುತ್ತಿದ್ದಂತೆ ಎಲ್ಲಾ ಹಂತದಲ್ಲಿಯೂ ತನಿಖೆ ನಡೆಸಿ, ಘಟನೆಯ ಪ್ರಮುಖ ಆರೋಪಿಯನ್ನು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ನೀಡಲಾಗಿದೆ. ಈ ಪ್ರಕರಣ ತನಿಖೆಯನ್ನು ಇನ್ನು ಸಹ ಪೂರ್ಣ ಮಾಡಿಲ್ಲ. ಎಲ್ಲಾ ಅಯಾಮಗಳಲ್ಲಿ ನಮ್ಮ ತನಿಖಾ ತಂಡ ಪರಿಶೀಲನೆ ಮಾಡುತ್ತಿದೆ. ಈ ಪ್ರಕರಣದಲ್ಲಿ ಯಾರೇ ಭಾಗಿಯಾಗಿದ್ದರು. ಅವರನ್ನು ಬಿಡುವ ಪ್ರಶ್ನೆಯೇ ಇಲ್ಲ. ಯಾವುದೇ ರಾಜಕೀಯ ಒತ್ತಡ ಬಂದಿಲ್ಲ. ಈಗ ನಾವು ಬಂಧಿಸಿರುವ ವ್ಯಕ್ತಿಯೇ ನಾನೇ ಮಾಡಿದ್ದು ಎಂದು ತಪ್ಪು ಒಪ್ಪಿಕೊಂಡಿದ್ದಾನೆ. ಅಲ್ಲದೇ ಪ್ರಾಥಮಿಕ ತನಿಖಾ ವರದಿ, ಆತನ ಚಲನವಲನಗಳು ಮತ್ತು ಸಿಡಿಆರ್ ನಂಬರ್ಗಳು ಆಧರಿಸಿ ಆತನನ್ನು ಬಂಧಿಸಿದ್ದೇವೆ ಎಂದು ತಿಳಿಸಿದರು.

ದಲಿತ ಮುಖಂಡರಾದ ಸಿ.ಎಂ. ಕೃಷ್ಣಮೂರ್ತಿ ಮತ್ತು ಜ್ಯೋತಿಗೌಡನಪುರದ ರಾಘವೇಂದ್ರ ಪ್ರಸನ್ನ ಮಾತನಾಡಿ, ಈ ಪ್ರಕರಣದಲ್ಲಿ ಇನ್ನುಳಿದ ಆರೋಪಿಗಳನ್ನು ಬಂಧಿಸುವಲ್ಲಿ ಪೊಲೀಸ್ ಇಲಾಖೆ ವಿಫಲವಾಗಿದೆ. ಪ್ರಕರಣದ ನಡೆದು ತಿಂಗಳುಗಳೇ ಕಳೆದಿದೆ, ಒಬ್ಬನನ್ನು ಬಿಟ್ಟರೆ ಉಳಿದವರ ಬಂಧನವಾಗಿಲ್ಲ. ದಲಿತರಿಗೆ ಅಗಿರುವ ಅನ್ಯಾಯದ ಪ್ರಕರಣದಲ್ಲಿ ನ್ಯಾಯ ಸಿಕ್ಕಿರುವುದು ವಿರಳ. ಹೀಗಾಗಿ ನ್ಯಾಯ ಕಲ್ಪಿಸಿಕೊಡಲು ಇಲಾಖೆ ಬದ್ಧತೆಯನ್ನು ಹೊಂದಬೇಕು ಎಂದರು.

ಚಾಮರಾಜನಗರದ ಮಹಿಳಾ ಠಾಣೆಯಲ್ಲಿ ದಾಖಲಾಗಿರುವ ಪೋಕ್ಸೋ ಪ್ರಕರಣದಲ್ಲಿ ಇನ್ನು ಸಹ ಆರೋಪಿಯನ್ನು ಬಂಧಿಸಿಲ್ಲ. ಪೋಕ್ಸೋ ಕಾಯಿದೆಯಡಿಯಲ್ಲಿ ಸಂತ್ರಸ್ತೆ ಬಾಲಕಿಗೆ ಮಗು ಜನಿಸಿದೆ. ಈಗ ತಾಯಿ ಮತ್ತು ನವಜಾತ ಶಿಶುವನ್ನು ಬೇರೆ ಮಾಡಲಾಗಿದೆ. ಶಿಶು ಪಾಲನಾ ಕೇಂದ್ರಕ್ಕೆ ನೀಡಲಾಗಿದೆ. ಸಂತ್ರಸ್ತ ಬಾಲಕಿಗೆ ನ್ಯಾಯ ನೀಡುವುದು ಯಾವಾಗ, ಆರೋಪಿಯನ್ನು ಬಂಧಿಸುವುದು ಯಾವಾಗ ಎಂದು ದಲಿತ ಮುಖಂಡ ರಾಮಸಮುದ್ರ ಪರಶಿವಯ್ಯ ಪ್ರಶ್ನಿಸಿದರು. ಹನೂರು ತಾಲೂಕಿನ ರಾಮಪುರ ಹೋಬಳಿಯ ಹೂಗ್ಯಂ, ಪೊನ್ನಾಚಿ, ಗಾಜನೂರು, ಕೊಪ್ಪಾ ಸೇರಿದಂತೆ ಅನೇಕ ಗ್ರಾಮಗಳ ಸೇವಿಂಗ್ ಶಾಪ್‌ಗಳಲ್ಲಿ ದಲಿತರಿಗೆ ಹೇರ್ ಕಟ್ಟಿಂಗ್ ಮಾಡದೆ ಅಸ್ಪಶ್ಯತೆ ಆಚರಣೆ ಮಾಡಲಾಗುತ್ತಿದೆ. ಈ ಸಂಬಂಧ ಹಿಂದೆಯೂ ಸಹ ನಾವು ದೂರು ನೀಡಿದ್ದೇವೆ. ಎಸ್ಪಿ ಅವರು ಗ್ರಾಮಕ್ಕೆ ಭೇಟಿ ನೀಡಿದ್ದಾಗ ಇನ್ನು ಯಾರು ಬಂದಿಲ್ಲ ಎಂಬ ಉತ್ತರ ಬಂದಿತ್ತು. ಆದರೆ, ಕಟಿಂಗ್ ಮಾಡಿದರೆ, ಅಂಗಡಿ ಖಾಲಿ ಮಾಡಿಸುವ ಬೆದರಿಕೆ ಹಾಕುತ್ತಿದ್ದಾರೆ. ಹೀಗಾಗಿ ನಮಗೆ ನ್ಯಾಯ ಕೊಡಿ ಎಂದು ದೊಡ್ಡಂಡಿದವಾಡಿ ಸಿದ್ದರಾಜು ಕೇಳಿದರು.

ಸಭೆಯಲ್ಲಿ ಡಿವೈಎಸ್ಪಿಗಳಾದ ಸ್ನೇಹಾ ರಾಜ್, ಧರ್ಮೇಂದ್ರ, ಸರ್ಕಲ್ ಇನ್ಸ್‌ಪೆಕ್ಟರ್ಗಳು ಮತ್ತು ದಲಿತ ಮುಖಂಡರಾದ ಮಹೇಶ್ ಕುದರ್, ಸಿದ್ದಯ್ಯನಪುರ ಶಿವರಾಜು, ಸಿ.ಕೆ. ಮಂಜುನಾಥ್, ಬಾನು ಪ್ರಕಾಶ್, ವಾಸು, ಲಿಂಗರಾಜು, ಬುದ್ದ ಮಹೇಶ್, ಸಿದ್ದಯ್ಯನಪುರ ಮಹೇಶ್, ಸಂಘಸೇನಾ, ಮೊದಲಾದವರು ಹಾಜರಿದ್ದರು.

# ವರುಣ ಅಭಿವೃದ್ಧಿ ರಾಜ್ಯಕ್ಕೆ ಮಾದರಿ



ಮೈಸೂರು: ವರುಣಾಕ್ಷೇತ್ರ ಅಭಿವೃದ್ಧಿಯಲ್ಲಿ ರಾಜ್ಯಕ್ಕೆ ಮಾದರಿ ಕ್ಷೇತ್ರವಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.

ವರುಣ ಕ್ಷೇತ್ರದ ಪುಟ್ಟೇಗೌಡನ ಹುಂಡಿಯಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ಸಿ.ಎಸ್. ಆರ್. ನಿಧಿಯಡಿ ನಿರ್ಮಿಸಲಾದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ 3 ಹೆಚ್ಚುವರಿ ಶಾಲಾ ಕೊಠಡಿಗಳನ್ನು ಉದ್ಘಾಟನೆ ಮಾಡಿ ಮಾತನಾಡಿದ ಎಂಎಲ್ ಸಿ ಯತೀಂದ್ರ ಸಿದ್ದರಾಮಯ್ಯ ಅವರು, ಪುಟ್ಟೇಗೌಡನ ಹುಂಡಿ ಹಾಗೂ ಚಟ್ನಳ್ಳಿ ಗ್ರಾಮಗಳಲ್ಲಿ 45 ಲಕ್ಷದಲ್ಲಿ ಕೊಠಡಿ ನಿರ್ಮಾಣ, ಕೀಳನಪುರದಲ್ಲಿ 30 ಲಕ್ಷಗಳಲ್ಲಿ 2 ಕೊಠಡಿ, ಕೆಂಪೇಗೌಡನ ಹುಂಡಿಯಲ್ಲಿ 15 ಲಕ್ಷದಲ್ಲಿ 1 ಕೊಠಡಿ, ಮೆಲ್ಲಹಳ್ಳಿಯಲ್ಲಿಯು ಕೊಠಡಿ ನಿರ್ಮಾಣದ ಜೊತೆಗೆ ಶೌಚಾಲಯ ನಿರ್ಮಾಣಕ್ಕೆ ಗುದ್ದಲ್ಲಿ ಪೂಜೆ ಮಾಡಿದೇವೆ. ಈ ಹಿಂದೆ ಶಾಲಾ ಕೊಠಡಿಗಳ ನಿರ್ಮಾಣಕ್ಕೆ 11.5 ಕೋಟಿ ಹಣ ಕೊಟ್ಟಿದ್ದೆವು, ನಮ್ಮ ಸರ್ಕಾರ ಬಂದ ಮೇಲೆ ವರುಣಾ ಕ್ಷೇತ್ರದಲ್ಲಿಎಲ್ಲಾ ಗ್ರಾಮಗಳಲ್ಲಿಯೂ ಶಾಲಾ ಕೊಠಡಿಗಳ ಕೊರತೆ ಇಲ್ಲದ ಹಾಗೆ ಸಿ,ಎಸ್.ಆರ್. ನಿಧಿಯಡಿ ಕೊಠಡಿಗಳನ್ನು ನಿರ್ಮಾಣ ಮಾಡುತಿದ್ದೇವೆ. ಪೋಷಕರು ಮಕ್ಕಳನ್ನು ಹೆಚ್ಚು ವಿದ್ಯಾವಂತರನ್ನಾಗಿ ಮಾಡಿ, ಶಿಕ್ಷಕರು ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಬೇಕುಎಂದಅವರು ಮರುಣಾ ಕ್ಷೇತ್ರ ಜನರ ಋಣ ತೀರಿಸಲು ಸಾಧ್ಯವಿಲ್ಲ ಎಂದರು. ಈ ಸಂದರ್ಭದಲ್ಲಿ ಡಿ.ಡಿ.ಪಿ. ಐಉದಯ್ ಕುಮಾರ್, ತಹಶೀಲ್ದಾರ್ ಮಹೇಶ್ ಕುಮಾರ್, ಇ.ಓ. ಕೃಷ್ಣ, ಬಿ.ಇ.ಓ ಪ್ರಕಾಶ್, ಗ್ರಾಪಂ. ಅಧ್ಯಕ್ಷ ನಂಜುಂಡಸ್ವಾಮಿ, ಮಹದೇವಪ್ಪ, ಎ.ಪಿ.ಎಂ.ಸಿ. ಮಾಜಿಅಧ್ಯಕ್ಷ ಬೀರೆಗೌಡ, ತಾ,ಪಂ, ಮಾಜಿ ಸದಸ್ಯರಾದ ಮಹದೇವಪ್ಪಎಂ.ಟಿ. ರವಿಕುಮಾರ್ ಜಿ.ಕೆ. ಬಸವಣ್ಣ, ಸಿದ್ದರಾಮೇಗೌಡ, ಆಪ್ತ ಸಹಾಯಕ ಶಿವಸ್ವಾಮಿ ಪ್ರದೀಪ್ ಕುಮಾರ್, ನಾಗರಾಜ್ ಇತರರು ಹಾಜರಿದ್ದರು.

# ನಾಳೆ ಹನುಮದ್ ವೃತ್ತ ಪ್ರಯುಕ್ತ ಹೋಮ



ಮೈಸೂರು: ಉತ್ತರಾದಿ ಮಠದ ವತಿಯಿಂದ ಕೆ.ಆರ್.ಎಸ್. ರಸ್ತೆ ಯಾದವಗಿರಿಯ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಡಿ.3ರಂದು ಉತ್ತರಾದಿ ಮಠದ 1008 ಸತ್ಯಾತ್ಮತೀರ್ಥ ಶ್ರೀಪಾದಂಗಳವರ ನೇತೃತ್ವದಲ್ಲಿ ಹನುಮದ್ ವ್ರತ ಪ್ರಯುಕ್ತ ಪವಮಾನ ಹೋಮ ಹಾಗೂ ನವಗ್ರಹ ಹೋಮ ಆಯೋಜಿಸಲಾಗುತ್ತಿದೆ ಎಂದು ವಿಪ್ರ ಸಮುದಾಯದ ಮುಖಂಡ ಎನ್.ಎಂ.ನವೀನ್‌ಕುಮಾರ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಬೆಳಗ್ಗೆ 8.30ಕ್ಕೆ ಧಾರ್ಮಿಕ ಕಾರ್ಯಕ್ರಮ ಪ್ರಾರಂಭವಾಗಲಿದೆ. ನಗರದ ಶ್ರೀಮದಾನಂದ ತೀರ್ಥರಿಂದ ಹರಿವಾಯು ಸ್ತುತಿ ಪಾರಾಯಣ, ಮಧು ಅಭಿಷೇಕ, ಪಂಚಾಮೃತಾಭಿಷೇಕ, ಹರೀಶಾಚಾರ್ಯ ರಾರಾವಿ ಅವರಿಂದ ಮನುಚ್ಚರಿತ್ರೆ ಮಧ್ಯಾಹ್ನ 12.30ಕ್ಕೆ ಪಲ್ಲಕ್ಕಿ ಉತ್ಸವ ನೆರವೇರಲಿದೆ. ಪಂ. ಅನಿರುದ್ಧಾಚಾರ್ಯ ಪಾಂಡುರಂಗಿ ಈ ವೇಳೆಯ ಸಭಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರೆಂದರು. ಶಾಸಕರಾದ ಟಿ.ಎಸ್. ಶ್ರೀವತ್ಸ, ಹರೀಶ್‌ಗೌಡ, ಕೆ. ವಿವೇಕಾನಂದ, ಎಸ್. ರಘುನಾಥ್, ಆರ್. ಲಕ್ಷ್ಮಿ?ಮಕಾಂತ್, ಡಿ.ಟಿ. ಪ್ರಕಾಶ್, ಕೆ.ಆರ್. ಸತ್ಯನಾರಾಯಣ ಇನ್ನಿತರರು ಉಪಸ್ಥಿತರಿರುವರೆಂದರು. ಶರತ್‌ಚಂದ್ರ, ಪ್ರಮೋದಾಚಾರ್, ವಾಸುದೇವ ಮೂರ್ತಿ, ಸೂರ್ಯ ನಾರಾಯಣ, ಸತ್ಯನಾರಾಯಣ ಹಾಜರಿದ್ದರು.

# ಕುಡಿದ ಅಮಲಲ್ಲಿ ವ್ಯಕ್ತಿ ಕೊಲೆ: ಓರ್ವನ ಬಂಧನ

ಮೈಸೂರು: ವ್ಯಕ್ತಿಯೋರ್ವನನ್ನು ತಲೆಗೆ ರಾಡಿನಿಂದ ಹೊಡೆದು ಕೊಲೆ ಮಾಡಿದ ಚಾಮರಾಜ ಜೋಡಿ ರಸ್ತೆ ಗಾಯಿತ್ರಿ ಟಾಕೀಸ್ ಬಳಿ ಘಟನೆ ನಡೆದಿದೆ.

ಶಶಿ(30) ಕೊಲೆಗೀಡಾದ ವ್ಯಕ್ತಿಯಾಗಿದ್ದು, ಚಿಂದಿ ಆಯುವ ಅಲೆಮಾರಿಯನ್ನು ಸೀನ ಮತ್ತು ನರಸಿಂಹ ಎಂಬುವವರು ಕುಡಿದ ಮತ್ತಿನಲ್ಲಿ ಹಲ್ಲೆ ಮಾಡಿದ್ದಾರೆನ್ನಲಾಗಿದೆ. ಈ ಹಿನ್ನೆಲೆಯಲ್ಲಿ ಚಿಂದಿ ಆಯುವ ಸಹಪಾಟಿಗಳು ಸ್ಥಳಕ್ಕೆ ಆಗಮಿಸಿ ಕಂಬನಿ ಮಿಡಿದಿದ್ದಾರೆ. ಕೆ.ಆರ್.ಪೊಲೀಸ್ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಪ್ರಕರಣ ದಾಖಲು ಮಾಡಿದರು. ಪೊಲೀಸರು ಅಕ್ಕಪಕ್ಕದ ಸಿಸಿ ಕ್ಯಾಮರಾಗಳ ಪರಿಶೀಲನೆ ನಡೆಸಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸೀನ ಎಂಬ ವ್ಯಕ್ತಿಯ ಬಂಧನ ಮಾಡಿದ್ದಾರೆ.

## ತಂದೆಯ ಅಂತ್ಯಕ್ರಿಯೆ ಮುಗಿಸಿ ಬಂದ ಮಗ ಹೃದಯಾಘಾತದಿಂದ ಸಾವು

ಚಾಮರಾಜನಗರ, ತಂದೆಯ ನಿಧನದ ಬೆನ್ನಲ್ಲೇ ಪುತ್ರನೂ ಕೊನೆಯುಸಿರೆಳೆದ ಘಟನೆ ಜಿಲ್ಲೆಯ ಹನೂರು ತಾಲೂಕಿನ ಅಣಗಳ್ಳಿದೊಡ್ಡಿಯಲ್ಲಿ ನಡೆದಿದೆ. ಅಣಗಳ್ಳಿ ದೊಡ್ಡಿ ಗ್ರಾಮದ ನಿವಾಸಿ ಮಲ್ಲಣ್ಣ (54) ಮೃತರು. ಇವರು ಶಿಕ್ಷಕರಾಗಿದ್ದರು.

ಮಲ್ಲಣ್ಣ ಅವರ ತಂದೆ ದೊಡ್ಡಲಿಂಗಯ್ಯ ವಯೋಸಹಜವಾಗಿ ಮೃತಪಟ್ಟಿದ್ದರು. ಶನಿವಾರ ಇವರ ಅಂತ್ಯಕ್ರಿಯೆ ಮುಗಿಸಿ ಬಂದು ಮಲಗಿದ್ದ ಪುತ್ರ ಕೂಡ ಭಾನುವಾರ ಕೊನೆಯುಸಿರೆಳೆದಿದ್ದಾರೆ.

ಹಲಗಾಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿದ್ದ ಮಲ್ಲಣ್ಣ ಮೃದು ಸ್ವಭಾವದವರಾಗಿದ್ದರು. ಇಂದು ಸಂಜೆ ಮಲ್ಲಣ್ಣ ಅವರ ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ನೆರವೇರಿತು. ಮಲ್ಲಣ್ಣ ಮೇಷ್ಟ್ರು ಎಂದೇ ಜನಜನಿತವಾಗಿದ್ದ ಇವರು ಶಿಸ್ತಿಗೆ ಹೆಸರುವಾಸಿಯಾಗಿದ್ದರು. ತಂದೆ ಇಲ್ಲದ್ದನ್ನು ಅರಗಿಸಿಕೊಳ್ಳಲಾಗದೇ ಅವರಿಗೆ ಹೃದಯಾಘಾತವಾಗಿರಬಹುದು ಎಂದು ಸಂಬಂಧಿಕರು ಶಂಕೆ ವ್ಯಕ್ತಪಡಿಸಿದ್ದಾರೆ. ಹನೂರು ಕ್ಷೇತ್ರ ಶಿಕ್ಷಣಾಧಿಕಾರಿ ಮಹೇಶ್??, ಬಿಆರ್?ಸಿ ವೆಂಕಟೇಶ್, ಬಡ್ತಿ ಮುಖ್ಯ ಶಿಕ್ಷಕರ ಸಂಘದ ಅಧ್ಯಕ್ಷ ಶಿವಮಲ್ಲು, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಕೃಷ್ಣೆಗೌಡ ಮಲ್ಲಣ್ಣರ ಅಂತಿಮ ದರ್ಶನ ಪಡೆದು ಕಂಬನಿ ಮಿಡಿದರು.

**ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಧೀಶರಾದ ಬಸವರಾಜ್ ತಳವಾರ ಹೇಳಿಕೆ**

# ಮುಂಜಾಗ್ರತಾ ಕ್ರಮ ಕೈಗೊಂಡಾಗ ಮಾತ್ರ ರೋಗಗಳು ದೂರ



ಗುಂಡ್ಲುಪೇಟೆ: ಜನರು ಜಾಗೃತರಾಗಿ ಮುಂಜಾಗ್ರತಾ ಕ್ರಮ ಕೈಗೊಂಡಾಗ ಮಾತ್ರ ರೋಗಗಳಿಂದ ದೂರವಿರಲು ಸಾಧ್ಯ. ಎಚ್‌ಐವಿ ಸೋಂಕಿನ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಿ ಜಾಗರೂಕರನ್ನಾಗಿ ಮಾಡಬೇಕು ಎಂದು ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಧೀಶರಾದ ಬಸವರಾಜ್ ತಳವಾರ. ಹೇಳಿದರು

ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ತಾಲೂಕು ಕಾನೂನು ಸೇವಾ ಸಮಿತಿ,ತಾಲೂಕು ವಕೀಲರ ಸಂಘ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಗುಂಡ್ಲುಪೇಟೆ ಇವರ ಸಂಯುಕ್ತ ಆಶ್ರಯದಲ್ಲಿ ವಿಶ್ವ ಏಡ್ಸ್ ದಿನಾಚರಣೆ ಅಂಗವಾಗಿ ನಡೆದ ಜಾಗೃತಿ ಜಾಥ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ವಿಶ್ವ ಆರೋಗ್ಯ ಸಂಸ್ಥೆ 1988 ಡಿಸೆಂಬರ್ ಒಂದರಿಂದರಿಂದ ಏಡ್ಸ್ ದಿನಾಚರಣೆಯನ್ನು ಆಚರಿಸಿಕೊಂಡು ಬರುತ್ತಿದೆ. ಇದರ ಮುಖ್ಯ ಉದ್ದೇಶ ಹೆಚ್.ಐ.ವಿ ಸೋಂಕಿತರನ್ನ ಸಮಾಜದಲ್ಲಿ ಯಾವ ರೀತಿ ನೋಡುತ್ತಾ ಇದ್ದಾರೆ ಎಂದರೆ ಸೋಂಕಿತರಿಗೆ ಕಾಯಿಲೆ ಬಂದಿದೆ ಎನ್ನುವುದಕ್ಕಿಂತ ಜನ ಸಾಮಾನ್ಯರು ಕಾಣುವ ರೀತಿಯಿಂದ ಮನನೊಂದು ಸಾಕಷ್ಟು ಜನರು ಸಾವನ್ನಪ್ಪಿತ್ತಿರುವುದು ಆಗಬಾರದು

ಜನರು ಜಾಗೃತರಾಗಿ ಮುಂಜಾಗ್ರತಾ ಕ್ರಮ ಕೈಗೊಂಡಾಗ ಮಾತ್ರ ರೋಗಗಳಿಂದ ದೂರವಿರಲು ಸಾಧ್ಯ. ಎಚ್‌ಐವಿ ಸೋಂಕಿನ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಿ ಜಾಗರೂಕರನ್ನಾಗಿ ಮಾಡಬೇಕು ಎಂದರು ತಿಳಿಸಿದರು

2017 ರಿಂದ ಏಡ್ಸ್ ತಡೆ ಕಾನೂನು ಜಾರಿಗೆ ಬಂದಿದ್ದು ಇದರ ಅನ್ವಯ ಹೆಚ್.ಐ.ವಿ ಸೋಂಕಿತರಿಗೆ ತೊಂದರೆ ಮಾಡುತ್ತಿರುವುದು ಕಂಡು ಬಂದರೆ ಅಂತವರ ವಿರುದ್ಧ ದಂಡ ಮತ್ತು ಶಿಕ್ಷೆಯನ್ನು ನೀಡಲಾಗುತ್ತದೆ ಹಾಗೂ ಸೋಂಕಿತರಿಗೆ ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಗಳು ಚಿಕಿತ್ಸೆ ನಿರಾಕರಿಸುವಂತಿಲ್ಲ ಎಂದು ತಿಳಿಸಿದರು.

ತಾಲೂಕು ಆರೋಗ್ಯ ವೈದ್ಯಾಧಿಕಾರಿ ಡಾ. ಅಲೀಂಪಾಷ ಮಾತನಾಡಿ,ಪ್ರತಿ ವರ್ಷ ಡಿಸೆಂಬರ್ ಒಂದರಂದು ಏಡ್ಸ್ ದಿನಾಚರಣೆ ಆಚರಣೆ ಮಾಡಿಕೊಂಡು ಬರಲಾಗುತ್ತಿದ್ದು ಈ ವರ್ಷ ಏಡ್ಸ್ ಹರಡುವಿಕೆಯನ್ನು ನಿಯಂತ್ರಿಸಲು ಇರುವ ಅಡೆತಡೆಗಳನ್ನು ಕೊನೆಗಾಣಿಸಬೇಕು ಎಂಬ ಘೋಷ ವಾಕ್ಯದಡಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಏಡ್ಸ್ ರೋಗ ಮೊದಲು 1980ರಲ್ಲಿ ಮೊದಲ ಬಾರಿಗೆ ಪತ್ತೆಯಾದ ಪ್ರಾರಂಭದಲ್ಲಿ ಭಯದ ವಾತವರಣ ನಿರ್ಮಾಣವಾಗಿತ್ತು.ನಂತರ ಏಡ್ಸ್ ಪ್ರಿಯವೇಷನ್ ಸೊಸೈಟಿ, ಆರೋಗ್ಯ ಇಲಾಖೆ ಹಾಗೂ ವಿವಿಧ ಸಂಘ ಸಂಸ್ಥೆಗಳು ಮೂಡಿಸಿದ ಜಾಗೃತಿಯಿಂದ ಇಂದು ಏಡ್ಸ್ ಹರಡುವಿಕೆ ಕಡಿಮೆಯಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್ಸಿ ನ್ಯಾಯಾಧೀಶರಾದ ಆರ್.ಬಿ ಗಿರೀಶ್,ತಾಲೂಕು ವಕೀಲರ ಸಂಘದ ಅಧ್ಯಕ್ಷ ಟಿ. ಎಸ್ ವೆಂಕಟೇಶ,ಕಾರ್ಯದರ್ಶಿ ಜವರಾಜು, ತಾಲೂಕು ಸಾರ್ವಜನಿಕ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ.ಮಂಜುನಾಥ್ ಮತ್ತು ಸಿಬ್ಬಂದಿಗಳು ಹಾಜರಿದ್ದರು.

# ಹಸಿದವರಿಗೆ ಅನ್ನ ಕೊಡುವುದು ಒಂದು ಪುಣ್ಯದ ಕೆಲಸ



ಚಾಮರಾಜನಗರ, ಹಸಿದವರಿಗೆ ಅನ್ನ ಕೊಡುವುದು ಒಂದು ಪುಣ್ಯದ ಕೆಲಸವಾಗಿದೆ ಎಂದು ಎಂಎಸ್ಐಎಲ್ ಅಧ್ಯಕ್ಷರು, ಶಾಸಕ ಸಿ.ಪುಟ್ಟರಂಗಶೆಟ್ಟಿ ಹೇಳಿದರು.

ನಗರದ ಶ್ರೀಚಾಮರಾಜೇಶ್ವರ ದೇವಸ್ಥಾನದ ಮುಂಭಾಗದಲ್ಲಿ ಶಿವು ಜನಸ್ನೇಹಿ ಟ್ರಸ್ಟ್ ಅಕ್ಷಯ ಜೋಳಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು ಶಿವು ಜನಸ್ನೇಹಿ ಟ್ರಸ್ಟ್ ಅಕ್ಷಯ ಜೋಳಿಗೆ ಕಾರ್ಯಕ್ರಮ ಒಂದು ಜನೋಪಯೋಗಿ ಕಾರ್ಯಕ್ರಮ ವಾಗಿದ್ದು ಇದು ನಗರಕ್ಕೆ ಬಹಳ ಅವಶ್ಯಕವಾಗಿದೆ. ಶಿವು ಜನಸ್ನೇಹಿ ಟ್ರಸ್ಟ್ ಕೋವಿಡ್ ಸಂದರ್ಭದಲ್ಲಿ ಸೇವಾ ಕಾರ್ಯಗಳನ್ನು ಮಾಡಿದೆ. ಟ್ರಸ್ಟ್ ಸೇವಾ ಕಾರ್ಯ ಯಶಸ್ವಿಯಾಗಲಿ ಎಂದು ಶುಭ ಕೋರಿದರು.

ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದ

ಮರಿಯಾಲ ಶ್ರೀಇಮ್ಮಡಿಮುರುಘರಾಜೇಂದ್ರಸ್ವಾಮಿಜಿ ಮಾತನಾಡಿ, ಶಿವು ಜನಸ್ನೇಹಿ ಟ್ರಸ್ಟ್ ಅಕ್ಷಯ ಜೋಳಿಗೆ ಕಾರ್ಯಕ್ರಮ ಆರಂಭಿಸಿರುವುದು ಅತ್ಯಂತ ಸಂತಸದ್ದು, ಈ ಟ್ರಸ್ಟ್ ಕಳೆದ ಹತ್ತಾರು ವರ್ಷಗಳಿಂದ ಜನಪರ ಕಾರ್ಯಗಳನ್ನು ಮಾಡಿಕೊಂಡು ಬರುತ್ತಿದೆ. ಕೋವಿಡ್ ಸಂದರ್ಭದಲ್ಲೂ ಕೂಡ ಅನೇಕ ಶವ ಹೂಳುವ ಕೆಲಸ ಮಾಡಿದಾರೆ. ಅಕ್ಷಯ ಜೋಳಿಗೆ ವಿಶೇಷ ಕಾರ್ಯಕ್ರಮವನ್ನು ಟ್ರಸ್ಟ್ ಮಾಡಿ ಹಸಿದವರಿಗೆ ಅನ್ನ ನೀಡುವ ಕೆಲಸ ಮಾಡುತ್ತಿದೆ. ಅತ್ಯಂತ ಶ್ಲಾಘನೀಯ ವಾದದ್ದು ಎಂದರು.

ಅನ್ನ ನಮ್ಮ ಜೀವವೇ ಆಗಿದೆ. ಅನ್ನವೇ ಪ್ರಾಣವಾಗಿದೆ. ಮಾನವನಿಂದ ಹಿಡಿದು ಪ್ರಾಣಿ, ಪಕ್ಷಿ ಸಂಕುಲ ಸೇರಿದಂತೆ ಎಲಕ್ಕೂ ಆಹಾರ ಅಗತ್ಯವಾಗಿದೆ. ಆಹಾರ ಇಲ್ಲದೆ ನಿರ್ಗತಿಕರು ಇದ್ದಾರೆ. ಕಲ್ಯಾಣ ಮಂಟಪ, ದೇವಾಲಯಗಳಲ್ಲಿ ಹಾಳಾಗುತ್ತಿದೆ. ಭಗವಂತ ಕೊಟ್ಟಿರುವುದನ್ನು ನಾವೆಲ್ಲರೂ ಕೂಡ ಪವಿತ್ರವಾದ ಭಾವನೆಗಳಿಂದ ಅದನ್ನು ಸ್ವೀಕಾರ ಮಾಡಬೇಕು. ಎಷ್ಟು ಜನರು ಆಹಾರವನ್ನು ಸುರಿಯುತ್ತಾರೆ, ಚೆಲ್ಲುತ್ತಾರೆ ಇದನ್ನು ಮನಗಂಡು ಶಿವು ಅಕ್ಷಯ ಜೋಳಿಗೆ ಕಾರ್ಯಕ್ರಮ ಮಾಡುತ್ತಿದ್ದಾರೆ ಇದು ಯಶ್ವಸಿಯಾಗಲಿ, ದೊಡ್ಡಮಟ್ಟದಲ್ಲಿ ಬೆಳೆಯಲಿ ಎಂದು ಶುಭ ಕೋರಿದರು. ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ. ರಾಮಚಂದ್ರ, ಕನಿಷ್ಠವೇತನಾ ಸಲಹಾ ಸಮಿತಿ

# ಸಿಎಂ ಡಿಸಿಎಂ ಜೋಡೆತ್ತುಗಳಾಗಿ ಸರ್ಕಾರ ನಡೆಸಲಿ



ಚಾಮರಾಜನಗರ, ಸಿಎಂ ಡಿಸಿಎಂ ಜೋಡೆತ್ತುಗಳಾಗಿ ಐದು ವರ್ಷ ಸರ್ಕಾರ ನಡೆಸಲಿ ಎಂದು ಹೈಕಮಾಂಡ್‌ಗೆ ಒತ್ತಾಯಿಸುತ್ತೇವೆ ಎಂದು ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ನಂಜೇಗೌಡ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿ, ಇತ್ತೀಚೆಗೆ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಶಿವಕುಮಾರ್ ಒಟ್ಟಿಗೆ ಸೇರಿ ಮಾತುಕತೆ ನಡೆಸಿ ಸಿಎಂ ಸ್ಥಾನದ ಗೊಂದಲಕ್ಕೆ ಅಂತ್ಯವಾಡಿರುವುದು ಕಾಂಗ್ರೆಸ್ ಕಾರ್ಯಕರ್ತರಾದ ನಮ್ಮೆಲ್ಲರಿಗೂ ಶುಭ ಸಂದೇಶವನ್ನು ನೀಡಿದ್ದಾರೆ ಎಂದರು. ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ ಶಿವಕುಮಾರ್ ನಾಯಕತ್ವದಲ್ಲಿ ಸಚಿವರು ಹಾಗೂ ಶಾಸಕರು ಎಲ್ಲರೂ ಒಟ್ಟಾಗಿ ಕಾಂಗ್ರೆಸ್ ಹೈಕಮಾಂಡ್ ಆದೇಶದಂತೆ ಚುನಾವಣೆಗೂ ಮುನ್ನ ಘೋಷಣೆ ಮಾಡಿದ 5 ಗ್ಯಾರಂಟಿಗಳನ್ನು ಈಡೇರಿಸುತ್ತಾ ಉತ್ತಮ ರೀತಿಯಲ್ಲಿ ಸರ್ಕಾರವನ್ನು ತೆಗೆದುಕೊಂಡು ಹೋಗುತ್ತಿದ್ದಾರೆ. ಸಿಎಂ ಡಿಸಿಎಂ ಜೋಡೆತ್ತುಗಳಾಗಿ ಒಗ್ಗಟಾಗಿ ಸಂಘಟನೆ ಮಾಡಿದರೆ 2028ರ ವಿಧಾನ ಸಭಾ ಚುನಾವಣೆಯಲ್ಲಿ ಮತ್ತೆ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುವುದರಲ್ಲಿ ಸಂಶಯವಿಲ್ಲ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಸಂಘದ ಉಪಾಧ್ಯಕ್ಷ ನಟರಾಜು, ಗೌರವಾಧ್ಯಕ್ಷ ಮಹದೇವು, ಪ್ರಧಾನ ಕಾರ್ಯದರ್ಶಿ ಶಿವಲಿಂಗೇಗೌಡ, ಕೊಳ್ಳೇಗಾಲ ತಾಲೂಕು ಅಧ್ಯಕ್ಷ ವೆಂಕಟೇಗೌಡ, ಸದಸ್ಯರಾದ ಮಂಜು, ಸ್ವಾಮಿ ಹಾಜರಿದ್ದರು.

### ಪುರಸಭಾ ಮಾಜಿ ಅಧ್ಯಕ್ಷರು ಕೆ ಬಿ ಮಹೇಶ್ ಅಮಾನತು

# ಅದೇಶ ವಾಪಸ್ ಪಡೆಯಲು ಮನವಿ



ಕೆ.ಆರ್.ಪೇಟೆ: ಪುರಸಭಾ ಮಾಜಿ ಅಧ್ಯಕ್ಷರು ಹಾಗೂ ಹಾಲಿ ಹಿರಿಯ ಸದಸ್ಯರಾದ ಕೆ ಬಿ ಮಹೇಶ್ ಅಮಾನತು ಅದೇಶವನ್ನು ತಕ್ಷಣ ವಾಪಸ್ ಪಡೆಯದೇ ಇದ್ದಲ್ಲಿ ಬೂಕನಕೆರೆ ಹೋಬಳಿಯ ಎಲ್ಲಾ ಕಾಂಗ್ರೆಸ್ ಮುಖಂಡರು ತಮ್ಮ ತಮ್ಮ ಹುದ್ದೆಗಳಿಗೆ ರಾಜೀನಾಮೆ ನೀಡಿ ಜಿಲ್ಲಾ ಕಾಂಗ್ರೆಸ್ ಕಚೇರಿಯ ಮುಂದೆ ಪ್ರತಿಭಟನೆ ನಡೆಸಬೇಕಾಗುತ್ತದೆ. ಇದಕ್ಕೆ ಆಸ್ಪದ ನೀಡದೇ ಕೆ.ಬಿ.ಮಹೇಶ್ ಅವರ ಅಮಾಮತ್ತು ಆದೇಶ ಹಿಂಪಡೆಯಬೇಕು ಎಂದು ಬೂಕನಕೆರೆ ಹೋಬಳಿಯ ಕಾಂಗ್ರೆಸ್ ಮುಖಂಡರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರನ್ನು ಒತ್ತಾಯ ಮಾಡಿದರು.

ತಾಲ್ಲೂಕು ಬೂಕನಕೆರೆ ಹೋಬಳಿ ಕಾಂಗ್ರೆಸ್ ಮುಖಂಡರಿಂದ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಪತ್ರಿಕಾಗೋಷ್ಠಿಯನ್ನು ನಡೆಸಿ ಕಿಡಿಕಾರಿದರು. ತಾಲ್ಲೂಕು ಕಾಂಗ್ರೆಸ್ ಹಿರಿಯ ಮುಖಂಡರು ಹಾಗೂ ಕಾಂಗ್ರೆಸ್ ಪಕ್ಷದ ನಿಷ್ಠಾವಂತರಾದ ಕೆ ಬಿ ಮಹೇಶ್ ಅಮಾನತು ಆದೇಶವನ್ನು ಹಿಂಪಡೆಯದಿದ್ದರೆ ನಮ್ಮ ನಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಬೇಕಾಗುತ್ತದೆ ಎಂದು ಕಾಂಗ್ರೆಸ್ ವರಿಷ್ಠರಿಗೆ ಎಚ್ಚರಿಕೆ ನೀಡಿದರು.

ಇನ್ನೂ ಕೆಲವು ದಿನಗಳಲ್ಲಿ ಗ್ರಾಮ ಪಂಚಾಯತಿ, ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯತಿ ಪುರಸಭೆ ಚುನಾವಣೆಗಳು ಸಾಲು ಸಾಲಿನ ರೀತಿಯಲ್ಲಿ ಬರುತ್ತಿರುವ ಸಂದರ್ಭದಲ್ಲಿ ಕಳೆದ 35ವರ್ಷಗಳಲ್ಲಿ ಪಕ್ಷಕ್ಕೆ ಪ್ರಾಮಾಣಿಕವಾಗಿ ದುಡಿದಿರುವ ಕೆ ಬಿ ಮಹೇಶ್ ಅಮಾನತು ಶಿಕ್ಷೆಯನ್ನು ರದ್ದು ಪಡಿಸಿ ಗೌರವ ಯುತವಾಗಿ ನಡೆಸಿಕೊಳ್ಳಲು ಇದೇ ಸಮಯದಲ್ಲಿ ಮನವಿ ಮಾಡಿದರು. ಗೋಷ್ಠಿಯಲ್ಲಿ ಪಿ ಎಲ್ ಡಿ ಬ್ಯಾಂಕ್ ಅಧ್ಯಕ್ಷ ಕಬ್ಬಲಗೆರೆಪುರ ಪುಟ್ಟಸ್ವಾಮಿಗೌಡ, ಜಿಲ್ಲಾ ಪಂಚಾಯತಿ ಸದಸ್ಯ ಬೂಕನಕೆರೆ ಬಿ.ಟಿ. ವೆಂಕಟೇಶ್, ಬೂಕನಕೆರೆ ಅಡಿಕೆ ಮಹೇಶ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ತಾಲ್ಲೂಕು ಅಧ್ಯಕ್ಷ ಅಗ್ರಹಾರಬಾಚಹಳ್ಳಿ ಕುಮಾರ್,ಪುರಸಭಾ ಉಪಾಧ್ಯಕ್ಷ ಉಮೇಶ್,ಸದಸ್ಯ ರವೀಂದ್ರ ಬಾಬು,ಸಲ್ಲು, ಬಲ್ಲೇನಹಳ್ಳಿ ರಮೇಶ್, ಕಾಂಗ್ರೆಸ್ ಯುವ ಮುಖಂಡರಾದ ಬಲ್ಲೇನಹಳ್ಳಿ ಬಿ.ಎಸ್.ರಾಮು, ಚಟ್ಟಂಗೆರೆ ನಾಗೇಶ್, ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ಧನಂಜಯ, ರಾಮೇಗೌಡ, ಅಶೋಕ್,ವಕೀಲ ನಾಗೇಶ್,ವಿಠಲಾಪುರ ಗ್ರಾ.ಪಂ.ಮಾಜಿ ಅಧ್ಯಕ್ಷ ಹರೀಶ್,ಪುರಸಭಾ ಮಾಜಿ ಕೌನ್ಸಿಲರ್ ಮಹೇಶ್, ಸುನಿಲ್, ಅನಿಲ್ ಸೇರಿದಂತೆ ಇತರರು ಹಾಜರಿದ್ದರು

## ಜಿ.ಪರಮೇಶ್ವರ್‌ಗೆ ಸಿಎಂ ಸ್ಥಾನ ಸಿಗಲೆಂದು ತೆಂಗಿನಕಾಯಿ ಕಾಯಿ ಒಡೆದ ಬೆಂಡರವಾಡಿ ಗ್ರಾಮಸ್ಥರು.

ಗುಂಡ್ಲುಪೇಟೆ: ರಾಜ್ಯದ ಗೃಹ ಸಚಿವ ಜಿ.ಪರಮೇಶ್ವರ್ ರವರಿಗೆ ಮುಖ್ಯಮಂತ್ರಿ ಸ್ಥಾನ ಸಿಗಲೆಂದು ಆರ್ಯೆಸಿ ತಾಲ್ಲೂಕಿನ ಬೆಂಡರವಾಡಿ ಗ್ರಾಮದಲ್ಲಿ ಜಿ.ಪರಮೇಶ್ವರ್ ಅಭಿಮಾನಿಗಳು ತೆಂಗಿನಕಾಯಿ ಒಡೆಯುವ ಮೂಲಕ ಗ್ರಾಮದೇವತೆ ಸೂಲದ ಮಾರಮ್ಮನಿಗೆ ಪೂಜೆ ಸಲ್ಲಿಸಿದರು.

ಈ ವೇಳೆ ಅಭಿಮಾನಿ ಬಳಗದ ಅದ್ಯಕ್ಷರಾದ ಪ್ರೋ.ಮಹದೇವವ ಭರಣಿ ಮಾತನಾಡಿ ರಾಜ್ಯದ ಗೃಹ ಮಂತ್ರಿಗಳಾಗಿರುವ ಡಾ.ಜಿ. ಪರಮೇಶ್ವರ್ ರವರು ರಾಜಕೀಯ ರಂಗದಲ್ಲಿ ತನ್ನದೇ ಚಾಪನ್ನ ಮೂಡಿಸಿ ದಲಿತರ ಪಾಲಿಗೆ ಬೆಳಕಾಗಿ ರಾಜ್ಯ ಸರ್ಕಾರದಲ್ಲಿ ಹಲವಾರು ಜವಾಬ್ದಾರಿಯುತ ಸ್ಥಾನಗಳನ್ನು ನಿಭಾಯಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಆದ್ದರಿಂದ ನಮ್ಮ ಗ್ರಾಮದಲ್ಲಿ ಡಾ.ಜಿ ಪರಮೇಶ್ವರ್ ಅಭಿಮಾನಿ ಬಳಗದ ಯುವಕರೊಂದಿಗೆ 101 ಇಡುಗಾಯಿಗಳನ್ನು ಒಡೆಯುವುದರ ಮೂಲಕ ಇಂದು ಗ್ರಾಮದಲ್ಲಿ ಪೂಜೆ ಸಲ್ಲಿಸಲಾಗಿದೆ ಆದಷ್ಟೂ ಬೇಗ ಮುಖ್ಯಮಂತ್ರಿ ಯಾಗಲಿ ಎಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಬೆಂಡರವಾಡಿ ಗ್ರಾಮದ ಮುಖಂಡರು ಹಾಜರಿದ್ದರು.



### ಬಿಡದಿ ಟೌನ್‌ಶಿಪ್‌ಗೆ ಭೂಸ್ವಾಧೀನ

# ಪರಿಹಾರಕ್ಕಿಂತ ಸಹಭಾಗಿತ್ವ ಉತ್ತಮ

## ಎಚ್.ಸಿ.ಬಾಲಕೃಷ್ಣ ಹೇಳಿಕೆ | ಶೇ 80 ಭೂಮಾಲೀಕರು ಭೂಸ್ವಾಧೀನಕ್ಕೆ ಒಪ್ಪಿದ್ದಾರೆ | ಎಕರೆಗೆ ಕನಿಷ್ಠ 2 ಕೋಟಿ ಪರಿಹಾರ | ಬೆಂಗಳೂರು ನಗರದ ಒತ್ತಡ ಕಡಿಮೆ ಮಾಡಲು ಟೌನ್‌ಶಿಪ್ | ಎಚ್.ಡಿ.ಕುಮಾರಸ್ವಾಮಿ ಕನಸು ಸಾಕಾರಗೊಳಿಸುತ್ತಿದ್ದೇವೆ

ರಾಮನಗರ: ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವತಿಯಿಂದ ಬಿಡದಿ ಬಳಿ ಟೌನ್‌ಶಿಪ್ ನಿರ್ಮಾಣಕ್ಕೆ ಸಂಬಂಧಿಸಿದಂತೆ ಭೂಸ್ವಾಧೀನದ ಬದಲಿಗೆ ನಗದು ಪರಿಹಾರ ಪಡೆಯುವ ಬದಲಿಗೆ ಯೋಜನೆಯಲ್ಲಿ ಸಹಭಾಗೀದಾರರಾಗುವಂತೆ ಭೂಮಾಲೀಕರು ಮತ್ತು ರೈತರಿಗೆ ಮಾಗಡಿ ಕ್ಷೇತ್ರದ ಶಾಸಕ ಹೆಚ್.ಸಿ.ಬಾಲಕೃಷ್ಣ ಸಲಹೆ ನೀಡಿದ್ದಾರೆ.

ನಗರದ ಕಂದಾಯ ಭವನದಲ್ಲಿರುವ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಚೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ನಗದು ಪರಿಹಾರ ನೀಡಲು ಸರ್ಕಾರದ ಬಳಿ ಹಣಕ್ಕೆ ಕೊರತೆ ಇಲ್ಲ. ಇಂದಿನಿಂದ ಮೂರು ತಿಂಗಳ ಒಳಗಾಗಿ ಭೂಸ್ವಾಧೀನಕ್ಕೆ ಒಪ್ಪಿಗೆ ನೀಡಿ ಪರಿಹಾರ ಪಡೆದುಕೊಳ್ಳಬಹುದು, ನಗದು ಪರಿಹಾರಕ್ಕೆ ಬದಲಿಗೆ ಯೋಜನೆಯಲ್ಲಿ ಭಾಗೀದಾರರಾಗುವುದು ಭೂಮಾಲೀಕರ ಕುಟುಂಬದ ಭವಿಷ್ಯದ ದೃಷ್ಟಿಯಲ್ಲಿ ಒಳ್ಳೆಯದು ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

### ಸಹಭಾಗಿತ್ವದ ಸಲಹೆ ಏಕೆ?

ಭೂಸ್ವಾಧೀನಕ್ಕೆ ನಗದುಪರಿಹಾರ ಪಡೆಯುವ ಬದಲಿಗೆ ರೈತರು ಮತ್ತು ಭೂಮಾಲೀಕರು ಟೌನ್‌ಶಿಪ್‌ನ ಸಹಭಾಗಿತ್ವ ಪಡೆಯುವಂತೆ ತಮ್ಮ ಸಲಹೆ ಏಕೆ ಎಂಬುದನ್ನು ವಿವರಿಸಿದ ಅವರು, ಟೌನ್‌ಶಿಪ್‌ನ ಅಭಿವೃದ್ಧಿಯಲ್ಲಿ ನಿಜವಾದ ಪಾಲುದಾರರಾಗಲು ಒಪ್ಪಿದವರಿಗೆ ಶೇ 50–50 ಅನುಪಾತದಲ್ಲಿ ಅಭಿವೃದ್ಧಿ ಪಡಿಸಿದ ನಿವೇಶನ ನೀಡಲಾಗುತ್ತಿದೆ. ವಸತಿ ನಿವೇಶನಕ್ಕೆ ಶೇ 50–50 ಅನುಪಾತದಲ್ಲಿ, ವಾಣಿಜ್ಯ ಉದ್ದೇಶದ ನಿವೇಶನಗಳಿಗೆ ಶೇ45–55ರ ಅನುಪಾತದಲ್ಲಿ ಪಾಲುದಾರರಗಳು ಸಾಧ್ಯವಿದೆ. ಹೀಗೆ ಪಡೆದ ಭೂಮಿಯಲ್ಲಿ ನಿರ್ಮಣವಾಗುವ ಕಟ್ಟಡಗಳಿಂದ ನಿರಂತರ ಬಾಡಿಗೆ ಬರುತ್ತದೆ. ಜೀವನಕ್ಕೆ ಸಹಕಾರಿಯಾಗಲಿದೆ ಹೀಗಾಗಿ ನಗದು ಪರಿಹಾರ ಪಡೆಯುವ ಬದಲಿಗೆ ಯೋಜನೆಯಲ್ಲಿ ಪಾಲುದಾರರಾಗಲು ತಾವು ವೈಯಕ್ತಿಕ ಸಲಹೆ ನೀಡುತ್ತಿರುವುದಾಗಿ ತಿಳಿಸಿದರು.

### ಎಕರೆಗೆ ಕನಿಷ್ಠ 2 ಕೋಟಿ ರೂ ಪರಿಹಾರ

ಬಿಡದಿ ಹೋಬಳಿಯ ಬೌರಮಂಗಲ, ಕಂಚುಗಾರನ ಹಳ್ಳಿ, ಕೆಂಪಯ್ಯನಪಾಳ್ಯ, ಅರಳಾಳುಸಂದ್ರ, ಹೊಸೂರು, ಬನ್ನಿಗಿರಿ, ಕೆ.ಜಿ.ಗೊಲ್ಲರಪಾಳ್ಯ, ಮಂಡಲಹಳ್ಳಿ, ವಡೇರಹಳ್ಳಿ ಗ್ರಾಮಗಳ ವ್ಯಾಪ್ತಿಯ 7431 ಎಕರೆ ಭೂಮಿಯಲ್ಲಿ ಅತ್ಯಾಧುನಿಕ ಎಐ ಸಿಟಿ ನಿರ್ಮಾಣವಾಗುತ್ತಿದೆ. ಬೆಂಗಳೂರು ನಗರದ ಒತ್ತಡವನ್ನು ಕಡಿಮೆ ಮಾಡುವ ಉದ್ದೇಶದಲ್ಲಿ ಟೌನ್‌ಶಿಪ್ ನಿರ್ಮಿಸಲು ಸರ್ಕಾರ ಉದ್ದೇಶಿಸಿದೆ. 7431 ಎಕರೆ ಪೈಕಿ ಸರ್ಕಾರದ ಸ್ವಾಮ್ಯದಲ್ಲಿರುವ 750 ಎಕರೆ ಹೊರತುಪಡಿಸಿ 6731 ಎಕರೆಯನ್ನು ರೈತರು ಸೇರಿದಂತೆ ಖಾಸಗಿ ವ್ಯಕ್ತಿಗಳ ಸ್ವಾಮ್ಯದಲ್ಲಿರುವ ಭೂಮಿಯನ್ನು ಸ್ವಾಧೀನಕ್ಕೆ ಪಡೆಯಲಾಗುತ್ತಿದೆ. ಸ್ವಾಧೀನಕ್ಕೆ ಒಪ್ಪಿಗೆ ನೀಡುವ ರೈತರು ಮತ್ತು ಭೂಮಾಲೀಕರಿಗೆ ಎಕರೆಗೆ 2 ಕೋಟಿ ಯಿಂದ 2.55 ಕೋಟಿರೂವರೆಗೆ ಪರಿಹಾರದ ಮೊತ್ತ ದೊರೆಯಲಿದೆ ಎಂದು ಅವರು ತಿಳಿಸಿದರು.



### ನಮ್ಮ ಹೋರಾಟಕ್ಕೆ ಸ್ಪಂದನೆ ಸಿಗಲಿಲ್ಲ

2019–20ರಲ್ಲಿ ಒಂದು ಸಾವಿರ ಎಕರೆ ಕೆಐಎಡಿಬಿನವರು ಸ್ವಾಧೀನ ಮಾಡಿದರು. ಈಗ ಹೋರಾಟ ಮಾಡುತ್ತಿರುವ ರೈತರು ವಿರೋಧ ಮಾಡಿದ್ದರು. ತಾವು ಸಹ ಅವರಿಗೆ ಬೆಂಬಲವಾಗಿ ನಿಂತಿದ್ದೆನು. ಆಗ ಜಿಲ್ಲಾಧಿಕಾರಿಗಳಾಗಿದ್ದ ಅರ್ಚನಾ ಅವರು ದರ ನಿಗಧಿ ಸಭೆ ಮಾಡಿದಾಗಲೂ ಒಳ್ಳೆಯ ದರಕ್ಕಾಗಿ ಒತ್ತಾಯ ಮಾಡಲಾಗಿತ್ತು. ಅಂದು ಸಿಎಂ ಆಗಿದ್ದ ಯಡಿಯೂರಪ್ಪ ಅವರು ಸಹ ಒಳ್ಳೆಯ ದರ ನೀಡುವ ಭರವಸೆ ಕೊಟ್ಟಿದ್ದರು. ತದನಂತರ ಡಿಸಿಎಂ ಆಗಿದ್ದ ಅಶ್ವಥನಾರಾಯಣ ಅವರು ಸಹ ಪ್ರತಿಕ್ರಿಯೆ ನೀಡಿರಲಿಲ್ಲ. ನಮ್ಮ ಹೋರಾಟಕ್ಕೆ ಅಂದು ಸ್ಪಂದನೆ ಸಿಗಲಿಲ್ಲ ಎಂದು ಹಿಂದಿನ ಘಟನೆಗಳನ್ನು ಮೆಲಕುಹಾಕಿದರು.

ಇಂದು ಭೂಸ್ವಾಧೀನಕ್ಕೆ ಉಪಮುಖ್ಯಮಂತ್ರಿಗಳು ಎಕರೆಗೆ 1.50 ಕೋಟಿ ರೂ ಪರಿಹಾರ ನೀಡುವುದಾಗಿ ಹೇಳಿದ್ದರು. ಆದರೆ ಭೂಮಾಲೀಕರು ಈ ದರಕ್ಕೆ ಒಪ್ಪಿಗೆ ಕೊಡಲಿಲ್ಲ. ನಮ್ಮ ಸರ್ಕಾರ ರೈತರ ಭಾವನೆಗಳನ್ನು ಸ್ಪಂದಿಸಿದೆ. ಪ್ರತಿ ಎಕರೆಗೆ ಕನಿಷ್ಠ 2.07 ಕೋಟಿ ರೂ ಪರಿಹಾರ ಸಿಗುತ್ತಿದೆ ಎಂದರು. ಬಿಡದಿ ಟೌನ್ ಶಿಪ್‌ಗೆ ಗುರುತಿಸಿರುವ ಭೂಮಿಯ ಸ್ವಾಧೀನಕ್ಕೆ ಶೇ 80ರಷ್ಟು ಭೂಮಾಲೀಕ ರೈತರ ಒಪ್ಪಿಗೆ ಇದೆ. ಇನ್ನು ಶೇ 20ರಷ್ಟು ಮಾಲೀಕರ ಅಸಮಾಧಾನ ಇದೆ. ಇವರು ತಮ್ಮ ಒಪ್ಪಿಗೆ ನೀಡದಿದ್ದರೆ ನ್ಯಾಯಾಲಯದ ಮೊರೆ ಹೋಗಬಹುದು ಎಂದರು. ಸಧ್ಯದಲ್ಲೇ ಭೂಮಾಲೀಕರ ಸಭೆಯನ್ನು ಕರೆದು ತಾವು ಸಹ ಮಾತನಾಡುವುದಾಗಿ ತಿಳಿಸಿದರು.

### ಎಚ್.ಡಿ.ಕುಮಾರಸ್ವಾಮಿ ಅವರ ಕನಸು ಸಾಕಾರ!

ಬಿಡದಿ ಬಳಿ ಟೌನ್‌ಶಿಪ್ ನಿರ್ಮಾಣ ಮಾಡುವುದು ಮಾಜಿ ಮುಖ್ಯಮಂತ್ರಿ ಹಾಲಿ ಕೇಂದ್ರ ಸಚಿವರಾಗಿರುವ ಎಚ್.ಡಿ.ಕುಮಾರಸ್ವಾಮಿ ಅವರ ಕನಸಿನ ಕೂಸು. ಅವರು ಸೇರಿದಂತೆ ತದ ನಂತರ ಬಂದ ಸರ್ಕಾರಗಳು ಸಹ ಟೌನ್‌ಶಿಪ್ ನಿರ್ಮಾಣಕ್ಕೆ ನಡೆಸಿದ ಪ್ರಕ್ರಿಯೆಗಳನ್ನೇ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ನೇತೃತ್ವದ ಸರ್ಕಾರ ಅನುಷ್ಠಾನಗೊಳಿಸಲು ಮುಂದಾಗಿದೆ. ಎಚ್.ಡಿ . ಕುಮಾರಸ್ವಾಮಿ ಅವರ ಕನಸನ್ನು ಸಾಕಾರಗೊಳಿಸುತ್ತಿದ್ದೇವೆ. ಬೆಂಗಳೂರು ನಗರದ ಮೇಲಿನ ಒತ್ತಡ ಕಡಿಮೆ ಮಾಡುವ ಉದ್ದೇಶದ ಈ ಯೋಜನೆಗೆ ಎಲ್ಲರ ಸಹಕಾರ ಮುಖ್ಯ ಎಂದರು.

ಬಿಡದಿ ಟೌನ್‌ಶಿಪ್‌ಗೆ ವಿರೋಧ ವ್ಯಕ್ತವಾಗಿತ್ತು. ಕೆಲವರು ನ್ಯಾಯಾಲಯದ ಮೆಟ್ಟಿಲೇರಿದ್ದರು. ಆದರೆ ನ್ಯಾಯಾಲಯ ಯೋಜನೆಗೆ ತಡೆ ನೀಡಲಿಲ್ಲ ಎಂದರು. ತದನಂತರ ಗುರುತಿಸಿದ ಭೂಮಿ ರೆಡ್ ಜೋನ್ ಎಂದು ಗುರುತಿಸಿಕೊಂಡಿತು. ಎಚ್.ಡಿ.ಕುಮಾರಸ್ವಾಮಿಯವರು ಎರಡನೇ ಬಾರಿಗೆ ಮುಖ್ಯಮಂತ್ರಿಗಳಾದಗ ಯೋಜನೆಯನ್ನು ಕೈಬಿಡಬೇಕು ಎಂದು ರೈತರು ಮನವಿ ಮಾಡಿಕೊಂಡರು. ಆಗಲೂ ಕುಮಾರಸ್ವಾಮಿಯವರು ಸೂಕ್ತ ಪರಿಹಾರ ನೀಡುವುದಾಗಿ ಭರವಸೆ ನೀಡಿದ್ದರು ಎಂದರು.

### ರೆಡ್‌ಜೋನ್‌ನಿಂದಾಗಿಯೇ ಪರಿಹಾರ ಹೆಚ್ಚಾಗಲಿಲ್ಲ

### ಅಪಪ್ರಚಾರಕ್ಕೆ ಕಿವಿಗೊಡಬೇಡಿ

ಟೌನ್‌ಶಿಪ್ ನಿರ್ಮಾಣಕ್ಕೆ ಭೂಸ್ವಾಧೀನದ ವಿಚಾರದಲ್ಲಿ ಅಪಪ್ರಚಾರಗಳು ನಡೆಯುತ್ತಿವೆ. ಪರಿಹಾರ ನೀಡಲು ಸರ್ಕಾರದ ಬಳಿ ಹಣ ಇಲ್ಲ. ಯೋಜನೆ ಅನುಷ್ಠಾನಕ್ಕೆ ಹಣ ಇಲ್ಲ. ಹಳ್ಳಿಗಳಿಂದ ಗುಳೇ ಹೋಗುವಂತೆ ಮಾಡುತ್ತಾರೆ ಎಂದೆಲ್ಲ ಅಪಪ್ರಚಾರಗಳು ನಡೆಯುತ್ತಿವೆ. ಇವೆಲ್ಲ ಸುಳ್ಳು. ಪರಿಹಾರಕ್ಕೆ ಬೇಕಾಗಿರುವ ಹಣ ಸರ್ಕಾರದ ಬಳಿ ಇದೆ. ಯೋಜನೆ ಅನುಷ್ಠಾನಕ್ಕೆ ಹುಡ್ಕೋದಿಂದ ಸರ್ಕಾರದ ಗ್ಯಾರಂಟಿಯ ಮೇಲೆ ಸುಮಾರು 2000 ಕೋಟಿ ರೂ ಸಾಲ ಪ್ರಾಧಿಕಾರ ಪಡೆಯಲಿದೆ ಎಂದು ಮಾಧ್ಯಮಪ್ರತಿನಿಧಿಗಳ ಪ್ರಶ್ನೆಗಳಿಗೆ ಬಾಲಕೃಷ್ಣ ಪರತಿಕ್ರಿಯಿಸಿದರು.

ಬಿಡದಿ ಟೌನ್‌ಶಿಪ್ ನಿರ್ಮಾಣಕ್ಕೆ ಗುರುತಿಸಲಾಗಿದ್ದ ಭೂಮಿಯಲ್ಲಿ ಇನ್ನಾವುದೇ ಚಟುವಟಿಕೆಗೆ ಅವಕಾಶ ಇಲ್ಲದ ರೆಡ್‌ಜೋನ್ ಎಂದು ಘೋಷಿಸಿದ್ದರಿಂದಲೇ ಇಂದು ರೈತರು ಆಗ್ರಹಿಸುತ್ತಿರುವ ಪರಿಹಾರದ ಮೊತ್ತವನ್ನು ನೀಡಲು ಸಾಧ್ಯವಾಗುತ್ತಿಲ್ಲ. ಇಲ್ಲದಿದ್ದರೆ ಎಕರೆಗೆ ಕನಿಷ್ಠ 2.5 ಕೋಟಿ ದೊರೆಯುತ್ತಿತ್ತು ಎಂದರು.

### ಗ್ರಾಮಗಳನ್ನು ಉಳಿಸಿಕೊಳ್ಳುತ್ತೇವೆ

ಬೈರಮಂಗಲ, ಕಂಚುಗಾರನಹಳ್ಳಿ, ಕೆಂಪಯ್ಯನಪಾಳ್ಯ, ಅರಳಾಳುಸಂದ್ರ, ಹೊಸೂರು, ಬನ್ನಿಗಿರಿ, ಕೆ.ಜಿ.ಗೊಲ್ಲರಪಾಳ್ಯ, ಮಂಡಲಹಳ್ಳಿ, ವಡೇರಹಳ್ಳಿ ಗ್ರಾಮಗಳನ್ನು ಯಥಾವತ್ ಉಳಿಸಿಕೊಳ್ಳಲಾಗುತ್ತದೆ. ಟೌನ್‌ಶಿಪ್ ಅಭಿವೃದ್ಧಿ ಪಡಿಸಿದಂತೆ ಈ ಗ್ರಾಮಗಳನ್ನು ಅಭಿವೃದ್ಧಿ ಪಡಿಸಲಾಗುವುದು. ಹಾಲಿ ಇರುವ ದೇವಸ್ಥಾನಗಳ ಜೀರ್ಣೋದ್ಧಾರ. ಶಾಲೆಗಳು, ಆಸ್ಪತ್ರೆಗಳು, ಕೌಶಲ ತರಬೇತಿ ಕೇಂದ್ರಗಳು ಹೀಗೆ ಅನೇಕ ಸವಲತ್ತುಗಳನ್ನು ಕಲ್ಪಸಿಲಾಗುವುದು. ಈ ಗ್ರಾಮಗಳ ವ್ಯಾಪ್ತಿಯಲ್ಲಿ ವಾಸಿಸುವ ನಿವೇಶನ, ಮನೆ ರಹಿತರಿಗೂ ಉಚಿತ ನಿವೇಶನ ನೀಡುವ ವ್ಯವಸ್ಥೆ ಇರಲಿದೆ, ಮೇಲಾಗಿ ಟೌನ್‌ಶಿಪ್ ನಿರ್ಮಾಣವಾದ ನಂತರ ಸ್ಥಳೀಯರಿಗೆ ಉದ್ಯೋಗ ನೀಡುವ ನಿಯಮವೂ ಜಾರಿಯಾಗಲಿದೆ ಎಂದು ಎಚ್.ಸಿ.ಬಾಲಕೃಷ್ಣ ವಿವರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಗಾಣಕಲ್ ನಟರಾಜು, ನಿರ್ದೇಶಕರಾದ ಪುಟ್ಟಯ್ಯ, ನರಸಿಂಹಯ್ಯ, ಅಬ್ಬನಕುಪ್ಪೆ ರಮೇಶ್, ಬಿಡದಿ ಹೋಬಳಿ ಬೈರಮಂಗಲ ಮತ್ತು ಸುತ್ತಮುತ್ತಲ ಗ್ರಾಮಗಳ ಪ್ರಮುಖರಾದ ವಿಷಕಂಠಪ್ಪ, ಸಿದ್ದರಾಜು, ಸಿ.ಉಮೇಶ್, ಹೊಸೂರು ರಾಜಣ್ಣ, ಮಹದೇವಯ್ಯ ಮುಂತಾದವರು ಉಪಸ್ಥಿತರಿದ್ದರು.

# ಶಾಸಕ ಸಿ.ಪುಟ್ಟರಂಗಶೆಟ್ಟಿಗೆ ಸನ್ಮಾನ



ಚಾಮರಾಜನಗರ: ವಿಧಾನಸಭೆಯ ಪಂಚಾಯತ್‌ರಾಜ್ ಸ್ಥಳೀಯಸಂಸ್ಥೆಗಳ ಸಮಿತಿ ಅಧ್ಯಕ್ಷರಾಗಿ ಆಯ್ಕೆಯಾಗಿ

ಸಹಕಾರ ರತ್ನ ಪ್ರಶಸ್ತಿ ಪಡೆದ ಎಂಎಸ್ಐಎಲ್ ಅಧ್ಯಕ್ಷ. ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರನ್ನು ಚಾಮರಾಜನಗರ ತಾಲ್ಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಕಚೇರಿ ಸಭಾಂಗಣದಲ್ಲಿ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ನಲ್ಲೂರು ಸೋಮೇಶ್ವರ ಹಾಗೂ ಸದಸ್ಯರು ಸನ್ಮಾನಿಸಿ ಅಭಿನಂದಿಸಿದರು.

**ಸಹಕಾರ ರತ್ನ ಪ್ರಶಸ್ತಿ ಪಡೆದ ಹಿನ್ನೆಲೆ ತಾಲ್ಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿವತಿಯಿಂದ ಅಭಿನಂದನೆ**

ಇದೇ ವೇಳೆ ಅಧ್ಯಕ್ಷ ನಲ್ಲೂರು ಸೋಮೇಶ್ವರ ಮಾತನಾಡಿ ಶಾಸಕ ಸಿ. ಪುಟ್ಟರಂಗಶೆಟ್ಟಿ ಅವರು ಪಂಚಾ ಯಿತಿಯಿಂದ ವಿಧಾನ ಸಭಾ ವರಗೆ ಚುನಾಯಿತರಾಗಿ ಸ್ಥಳೀಯ ಸಂಸ್ಥಗಳ ಬಗ್ಗೆ ಅಪಾರವಾದ ಅನುಭವವಿದೆ. ಉತ್ತಮ ಜನಪರ ಸೇವೆಸಲ್ಲಿಸಿದ್ದಾರೆ, ರಾಜ್ಯಸರ್ಕಾರ ಇವರ ಸೇವೆಯನ್ನು ಗುರ್ತಿಸಿ, ಸಹಕಾರರತ್ನ ಪ್ರಶಸ್ತಿ ನೀಡಿದೆ, ಈಚೆಗೆ ವಿಧಾನಸಭೆ ಪಂಚಾಯತ್‌ರಾಜ್ ಸ್ಥಳೀಯಸಂಸ್ಥೆಗಳ ಸಮಿತಿ ಅಧ್ಯಕ್ಷರಾಗಿ ಸರ್ಕಾರ ಆಯ್ಕೆಮಾಡಿರುವುದು ಸಂತಸ ತಂದಿದೆ ಎಂದು ಹೇಳಿದರು. ಚಾಮರಾಜನಗರ ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸದಸ್ಯರಾದ ಮರಿಯಾಲಹುಂಡಿಕುಮಾರ್, ರಾಜೇಶ್, ಮಾದಾಪುರಕುಮಾರ್‌ಸ್ವಾಮಿ. ಸಿದ್ದಿಕ್ ಉಲ್ಲಾ, ಮಂಜುಳಾ,ರಾಜು, ಸುಕುಮಾರ, ರಮೇಶ್,ಮಲ್ಲಿಕಾರ್ಜುನ್, ಜಡೆಯಪ್ಪ, ಚಿನ್ನಸ್ವಾಮಿ, ಹಾಜರಿದ್ದರು.

### ಚಂದಕವಾಡಿ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ

# ಸಂವಿಧಾನ ಸಮರ್ಪಣಾ ದಿನಾಚರಣೆ ಆಚರಣೆ




ಚಾಮರಾಜನಗರ. ಡಾ.ಬಿ.ಆರ್.ಅಂಬೇಡ್ಕರ್ ಅವರು ದೇಶಕ್ಕೆ ಉತ್ತಮ ಸಂವಿಧಾನ ನೀಡುವ ಮೂಲಕ ಅಪಾರ ಕೊಡುಗೆ ನೀಡಿದ್ದಾರೆ ಎಂದು ಚಾಮರಾಜನಗರ ಜಿಲ್ಲಾ ಪೋಲಿಸ್ ಉಪಾದೀಕ್ಷಕಿ ಸ್ನೇಹರಾಜ್ ಹೇಳಿದರು.

ತಾಲ್ಲೂಕಿನ ಚಂದಕವಾಡಿ ಗ್ರಾಮದ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಜಿಲ್ಲಾ ಮಾನಸಸಂಪನ್ಮೂಲ ಕೇಂದ್ರದ ವತಿಯಿಂದ ಆಯೋಜಿಸಿದ್ದ ಸಂವಿಧಾನ ಸಮರ್ಪಣಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಸಂವಿಧಾನದಿಂದಲೇ ಸಮಾಜದಲ್ಲಿ ಪ್ರತಿಯೊಬ್ಬರೂ ಸುಂದರ ಹಾಗೂ ಸಮಾನ ಜೀವನ ನಡೆಸುವಂತಾಗಿದೆ ದೇಶದ ಪ್ರತಿಯೊಬ್ಬರೂ ಎಲ್ಲ ಮೂಲಸೌಲಭ್ಯಗಳನ್ನು ಪಡೆದುಕೊಳ್ಳಲು ಸಂವಿಧಾನ ಸಹಕಾರಿ ಆಗಿದೆ. ವಿದ್ಯಾರ್ಥಿಗಳು ಓದಿಗೆ ಮೊದಲ ಆದ್ಯತೆ ನೀಡಬೇಕು. ಓದಿನಿಂದಲೇ ಜೀವನವನ್ನು ರೂಪಿಸಿಕೊಳ್ಳಲು ಸಾಧ್ಯ, ಶಿಕ್ಷಣದ ಪಡೆದು ಭವಿಷ್ಯದಲ್ಲಿ ಉತ್ತಮ ಪ್ರಜೆಗಳಾಗಿ ಹೊರಹೊಮ್ಮಬೇಕು ಎಂದರು.

ಜಿಲ್ಲಾ ಪಂಚಾಯತ್ ಜಿಲ್ಲಾ ತರಬೇತಿ ಸಂಯೋಜಕ ಟಿ.ಜೆ. ಸುರೇಶ್ ಮಾತನಾಡಿ, ಭಾರತದ ಸಂವಿಧಾನ ವಿಶ್ವದಲ್ಲಿಯೇ ಅತಿದೊಡ್ಡದು. ನಮ್ಮ ಸಂವಿಧಾನವು ವಿಶೇಷವಾಗಿ ವಿಶಿಷ್ಟವಾಗಿ ರಲು ಕಾರಣ ಕತೃ ಇದರ ಹಿಂದಿರುವ ಶ್ರಮ ವಿಶ್ವಜ್ಞಾನಿ ಭಾರತ ರತ್ನ ಡಾ. ಬಿ.ಆರ್.ಅಂಬೇಡ್ಕರ್ ಅವರದು,ಸರ್ವರಿಗೂ ಅನ್ವಯವಾಗುವಂತಹ ಸಂವಿಧಾನ ದೇಶದ ಪವಿತ್ರ ಗ್ರಂಥ. ರಾಷ್ಟ್ರದ ಏಕತೆ, ಸಮಗ್ರತೆ, ವ್ಯಕ್ತಿ ಗೌರವ. ಆರ್ಥಿಕ, ರಾಜಕೀಯ, ಸಾಮಾಜಿಕ ಸಮಾನತೆಯನ್ನು ಪ್ರತಿಯೊಬ್ಬರಿಗೂ ಕಲ್ಪಿಸಿದೆ. ಹಕ್ಕುಗಳ ಜೊತೆಗೆ ಕರ್ತವ್ಯಗಳನ್ನು ಪಾಲನೆ ಮಾಡಬೇಕು ಎಂಬ ಸಂದೇಶವನ್ನು ಸಂವಿಧಾನದಲ್ಲಿ ತಿಳಿಸಲಾಗಿದೆ ಎಂದರು. ಜಿಲ್ಲಾ ಮಾನಸಸಂಪನ್ಮೂಲ ಕೇಂದ್ರದ ಸಂಯೋಜಕ ಕೆ.ಸಿ.ರೇಚಣ್ಣ ಮಾತನಾಡಿ ನಮ್ಮ ಸಂವಿಧಾನವು ಮಾನವ ಘನತೆ, ಸಮಾನತೆ ಮತ್ತು ಸ್ವಾತಂತ್ರ್ಯಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುತ್ತದೆ. ಹಕ್ಕುಗಳ ಜೊತೆಗೆ, ನಾಗರೀಕರಾಗಿ ನಮ್ಮ ಕರ್ತವ್ಯಗಳನ್ನು ಸಹ ನೆನಪಿಸುತ್ತದೆ, ಆ ಕರ್ತವ್ಯಗಳನ್ನು ಪೂರೈಸಲು ನಾವು ಸದಾ ಪ್ರಯತ್ನಿಸಬೇಕು. ಈ ಕರ್ತವ್ಯಗಳು ಬಲಿಷ್ಠ ಪ್ರಜಾಪ್ರಭುತ್ವಕ್ಕೆ ಅಡಿಪಾಯವಾಗಿವೆ ಎಂದರು. ಪ್ರಾಂಶುಪಾಲೆ ಸಾವಿತ್ರಿ ಅಧ್ಯಕ್ಷತೆ ವಹಿಸಿದ್ದರು. ಜನಹಿತಾ ಶಕ್ತಿ ಹೋರಾಟವೇದಿಕೆ ಜಿಲ್ಲಾಧ್ಯಕ್ಷ ರಾಮಸಮುದ್ರಸುರೇಶ್, ಕಾನೂನುಸಲಹೆಗಾರ ಚಂದ್ರ ಕಾಂತ್, ಉಪನ್ಯಾಸಕ ಚಂದ್ರು, ಸಿದ್ದಾರ್ಥಪದವಿಪೂರ್ವ ಕಾಲೇಜು ಪ್ರಾಂಶುಪಾಲ ರಂಗಸ್ವಾಮಿ ವಿದ್ಯಾರ್ಥಿಗಳು ಹಾಜರಿದ್ದರು.

# ‘ವಿಶ್ವಮಟ್ಟಕ್ಕೆ ಮೈಸೂರು ರೈಲು ಅಭಿವೃದ್ಧಿ’



**ಮೈಸೂರು:** ರೈಲ್ವೆ ಜಂಕ್ಷನ್ ಅನ್ನು ಪ್ರಸ್ತುತ ರೂ. 395.73 ಕೋಟಿಗಳ ಅಂದಾಜು ವೆಚ್ಚದಲ್ಲಿ ವಿಶ್ವಮಟ್ಟದ ನಿಲ್ದಾಣವಾಗಿ ಮರು ಅಭಿವೃದ್ಧಿ ಪಡಿಸಲಾಗುವುದು ಎಂದು ಮೈಸೂರು ವಿಭಾಗದ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಮುದಿತ್ ಮಿತ್ತಲ್ ತಿಳಿಸಿದರು.

ಮೈಸೂರು ವಿಭಾಗದಿಂದ ಸ್ಟೇಷನ್ ಮಹೋತ್ಸವದ ಅಂಗವಾಗಿ ಮೈಸೂರು ರೈಲು ನಿಲ್ದಾಣದಲ್ಲಿ ಆಯೋಜಿಸಿದ್ದ ವಿಶೇಷ ಕಾರ್ಯಕ್ರಮವನ್ನು ಮೈಸೂರು ವಿಭಾಗದ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಮುದಿತ್ ಮಿತ್ತಲ್ ಉದ್ಘಾಟಿಸಿದರು. ನಂತರ ಪರಂಪರೆ ಗ್ಯಾಲರಿ ಭೇಟಿ ನಂತರ ಮೈಸೂರು ರೈಲು ಸಂಗ್ರಹಾಲಯಕ್ಕೆ ಭೇಟಿ ನೀಡಿದರು.

ನಂತರ ಮಾತನಾಡಿದ ಅವರು, ಮೈಸೂರು ಮಹಾರಾಜರು, ರೈಲು ಸಂಪರ್ಕವನ್ನು ಆರ್ಥಿಕ ಅಭಿವೃದ್ಧಿಗೆ ಪ್ರಮುಖವೆಂದು ಪರಿಗಣಿಸಿ, ಮೈಸೂರು ಪ್ರಾಂತ್ಯದಲ್ಲಿ ರೈಲ್ವೆ ಅಭಿವೃದ್ಧಿಗೆ ಮಹತ್ವದ ಪಾತ್ರವಹಿಸಿದ್ದರು. ಮಹಾರಾಜರ ಆಡಳಿತದಲ್ಲಿದ್ದ ಮೈಸೂರು ಸ್ಟೇಟ್ ರೈಲ್ವೆ 14 ಏಪ್ರಿಲ್ 1951 ರಂದು ಭಾರತೀಯ ರೈಲ್ವೆ ರಾಷ್ಟ್ರೀಕರಣದ ನಂತರ, ಭಾರತ ಸರಕಾರದ ಅಧೀನದ ದಕ್ಷಿಣ ರೈಲ್ವೇಗೆ ವಿಲೀನಗೊಂಡಿತು. 2003ರಲ್ಲಿ ಹುಬ್ಬಳ್ಳಿಯಲ್ಲಿ ನೈಋತ್ಯ ರೈಲ್ವೇ ವಲಯ ಸ್ಥಾಪನೆಯೊಂದಿಗೆ, ಮೈಸೂರು ವಿಭಾಗವು ಈ ಹೊಸ ವಲಯದ ಅವಿಭಾಜ್ಯ ಅಂಗವಾಯಿತು. ಮೈಸೂರು ರೈಲು ನಿಲ್ದಾಣವು ಓಖು?2 ವರ್ಗಕ್ಕೆ ಸೇರಿದ ನಿಲ್ದಾಣವಾಗಿದ್ದು, ಒಟ್ಟು ಆರು ಪ್ಲಾಟ್ ಫಾರ್ಮ್ ಹೊಂದಿದೆ. ದ್ವಿ ಸಾಪ್ತಾಹಿಕ, ತ್ರೈ ಸಾಪ್ತಾಹಿಕ ಮತ್ತು ಸಾಪ್ತಾಹಿಕ ಸೇವೆಗಳನ್ನು ಒಳಗೊಂಡಂತೆ 106 ರೈಲುಗಳು ಸಂಚರಿಸುತ್ತವೆ. ಇವು ಮೈಸೂರು ನಗರಕ್ಕೆ ನವದೆಹಲಿ, ಹಾವ್ಡಾ, ಪಾಟ್ನಾ, ಮುಂಬೈ, ಕಚ್ಚೇಗುಡ, ಚೆನ್ನೈ, ತಿರುವನಂತಪುರಂ ಸೇರಿದಂತೆ ಕರ್ನಾಟಕದ ವಿವಿಧ ಭಾಗಗಳು ದೇಶದ ಪ್ರಮುಖ ನಗರಗಳಿಗೆ ಸಂಪರ್ಕ ಕಲ್ಪಿಸುತ್ತವೆ. ನಿಲ್ದಾಣದಲ್ಲಿ ದಿನಕ್ಕೆ ಸರಾಸರಿ 60,000 ಪ್ರಯಾಣಿಕರ ಸಂಚಾರವಿದ್ದು, ದಿನನಿತ್ಯ ಸುಮಾರು ರೂ. 21?25 ಲಕ್ಷಗಳಷ್ಟು ಆದಾಯವನ್ನು ಗಳಿಸುತ್ತದೆ. ಎಸ್ಕಲೇಟರ್, ಲಿಫ್ಟ್, ಅಂಡರ್ ಪಾಸ್, ಪಾದಚಾರಿ ಮೇಲ್ಸೇತುವೆ, ವೈ–ಫೈ, ಕೋಚ್ ಸೂಚನಾ ಫಲಕ, ಸಾರ್ವಜನಿಕ ಘೋಷಣೆ ವ್ಯವಸ್ಥೆ, ಆಹಾರ ಮಳಿಗೆ, ನಿರೀಕ್ಷಣಾ ಮಂದಿರ, ಬ್ಯಾಟರಿ ಚಾಲಿತ ವಾಹನ, ಎಟಿಎಂಗಳಂತಹ ಆಧುನಿಕ ಸೌಲಭ್ಯಗಳನ್ನು ಹೊಂದಿದೆ. ನಿಲ್ದಾಣವು ದಿವ್ಯಾಂಗ ಸ್ನೇಹಿಯಾಗಿದೆ ಎಂದು ಮಾಹಿತಿ ನೀಡಿದರು.

ಮೈಸೂರು ಜಂಕ್ಷನ್ ಅನ್ನು ಪ್ರಸ್ತುತ ರೂ. 395.73 ಕೋಟಿಗಳ ಅಂದಾಜು ವೆಚ್ಚದಲ್ಲಿ ವಿಶ್ವಮಟ್ಟದ ನಿಲ್ದಾಣವಾಗಿ ಮರು ಅಭಿವೃದ್ಧಿಪಡಿಸಲಾಗುವುದು. ಈ ಅಭಿವೃದ್ಧಿಯು ಹೆಚ್ಚುತ್ತಿರುವ ಪ್ರಯಾಣಿಕರ ಬೇಡಿಕೆಯನ್ನು ಪೂರೈಸುವಂತೆ ಹೊಸ ರೈಲುಗಳ ಚಾಲನೆ, ಹಾಲಿ ರೈಲುಗಳ ಸೇವೆಗಳ ಆವೃತ್ತಿ ಹೆಚ್ಚಿಸುವುದು ಹಾಗೂ ಹೊಸ ತಾಣಗಳಿಗೆ ಸಂಪರ್ಕ ಕಲ್ಪಿಸುವಂತೆ ರೂಪಿಸಲಾಗಿದೆ. ಈ ಯೋಜನೆಯಡಿಯಲ್ಲಿ ಮೂರು ಹೊಸ ಪ್ಲಾಟ್ ಫಾರಂಗಳು, ನಾಲ್ಕು ಪಿಟ್ ಲೈನ್‌ಗಳು ಹಾಗೂ ಅವುಗಳಿಗೆ ಸಂಬಂಧಿಸಿದ ಸ್ಟೇಬ್ಲಿಂಗ್ ಲೈನ್ ಗಳನ್ನು ನಿರ್ಮಿಸುವ ಕಾರ್ಯ ಮಂಜೂರಾಗಿದೆ ಎಂದು ತಿಳಿಸಿದರು.

ಸ್ವಾತಂತ್ರ್ಯ ಹೋರಾಟಗಾರ ವೈ.ಸಿ. ರೇವಣ್ಣ ಹಾಗೂ ನಿವೃತ್ತ ರೈಲ್ವೇ ನೌಕರ ಎಚ್.ಎಸ್. ರಾಮಣ್ಣ ಅವರಿಗೆ ಅವರ ಕೊಡುಗೆಯನ್ನು ಗುರುತಿಸಿ ಸನ್ಮಾನಿಸಲಾಯಿತು.

ಈ ಕಾರ್ಯಕ್ರಮಕ್ಕೆ ಹೆಚ್ಚುವರಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಶಮ್ಮಾಸ್ ಹಮೀದ್ ಇತರರು ಹಾಜರಿದ್ದರು.

# ಕೃಷಿ ಮೇಳದ ಪೂರ್ವ ಸಿದ್ಧತೆ ಪರಿಶೀಲಿಸಿದ ಮಂಡ್ಯ ಜಿಲ್ಲಾಧಿಕಾರಿ



**ಮಂಡ್ಯ:** ಜಿಲ್ಲೆಯ ವಿ.ಸಿ.ಫಾರ್ಮ್ ಆವರಣದಲ್ಲಿ ಡಿಸೆಂಬರ್ 05 ರಿಂದ 07 ರವರೆಗೆ ಮೂರು ದಿನಗಳ ಕಾಲ ನಡೆಯಲಿರುವ ಕೃಷಿ ಮೇಳದ ಪೂರ್ವ ಸಿದ್ಧತೆಗಳ ಕುರಿತು ಮಂಡ್ಯ ಜಿಲ್ಲಾಧಿಕಾರಿ ಡಾ ಕುಮಾರ ಸೋಮವಾರ ಪರಿಶೀಲನೆ ನಡೆಸಿದರು.

ವಿ.ಸಿ.ಫಾರ್ಮ್ ಗೆ ಭೇಟಿ ನೀಡಿದ ಕುಮಾರ ಅವರು ವೇದಿಕೆ ನಿರ್ಮಾಣ, ಮಳಿಗೆಗಳ ನಿರ್ಮಾಣ, ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಆಸನಗಳ ವ್ಯವಸ್ಥೆ ಸೇರಿದಂತೆ ಇತರೆ ಚಟುವಟಿಕೆಗಳ ಬಗ್ಗೆ ಪರಿಶೀಲನೆ ನಡೆಸಿದ ಅವರು ಕಾರ್ಯಕ್ರಮಗಳ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದು ಯಾವುದೇ ಲೋಪ ಆಗದಂತೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು. ಕೃಷಿ ಮೇಳ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿಗಳು ಸೇರಿದಂತೆ ಇನ್ನಿತರ ಗಣ್ಯರು ಪಾಲ್ಗೊಳ್ಳುವುದರಿಂದ ಶಿಷ್ಟಾಚಾರದಲ್ಲಿ ಯಾವುದೇ ಲೋಪ ಸಂಭವಿಸದಂತೆ ಮುನ್ನೆಚ್ಚರಿಕೆ ಕ್ರಮ ವಹಿಸಬೇಕು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ಅಧೀಕ್ಷಕ ಮಲ್ಲಿಕಾರ್ಜುನ ಬಾಲದಂಡಿ, ಜಂಟಿ ಕೃಷಿ ನಿರ್ದೇಶಕರಾದ ಅಶೋಕ್, ಸಹಾಯಕ ಯೋಜನಾಧಿಕಾರಿ ಶ್ರೀಹರ್ಷ, ವಿ.ಸಿ.ಫಾರ್ಮ್ ನ ಅಧಿಕಾರಿಗಳು ಸೇರಿದಂತೆ ಇತರರು ಹಾಜರಿದ್ದರು.



ಮೈಸೂರಿನ ನಜರ್ ಬಾದ್ ಗೆಳೆಯರ ಬಳಗದ ವತಿಯಿಂದ ಹಮ್ಮಿಕೊಂಡಿದ್ದ ಕನ್ನಡ ರಾಜ್ಯೋತ್ಸವ,ಕೆಂಪೇಗೌಡ ಜಯಂತಿ, ವಾಲ್ಮೀಕಿ ಜಯಂತಿ, ಶ್ರೀ ಭಕ್ತ ಕನಕದಾಸ ಜಯಂತಿಯ ಕಾರ್ಯಕ್ರಮಕ್ಕೆ ಶಾಸಕ ಕೆ.ಹರೀಶ್ ಗೌಡ ಚಾಲನೆ ನೀಡಿ ನಜರ್ ಬಾದಿನ ಹಿರಿಯರನ್ನು ಸನ್ಮಾನಿಸಿದರು ಈ ಕಾರ್ಯಕ್ರಮದಲ್ಲಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು, ನಗರಪಾಲಿಕೆಯ ಮಾಜಿ ಸದಸ್ಯ ಗೋಪಿ, ಮುಖಂಡರಾದ ವರದರಾಜು, ಎಸ್.ಆರ್ ರವಿಕುಮಾರ್ ಸೇರಿ ಇನ್ನಿತರರು ಭಾಗವಹಿಸಿದ್ದರು.

# ಕಾಂಗ್ರೆಸ್‌ಗೆ ಡಾಲ್ ರವಿ, ಕಿರಣ್ ಜಂಪ್: ಜೆಡಿಎಸ್ ಮುಖಂಡರು ಆಕ್ರೋಶ



ಕೆ.ಆರ್.ಪೇಟೆ: ತಾಲ್ಲೂಕು ಟಿಎಪಿಸಿಎಂಎಸ್ ನಿರ್ದೇಶಕರಾದ ಬಿ.ಎಂ.ಕಿರಣ್ ಅವರು ಕಿಕ್ಕೇರಿ ಹೋಬಳಿಯ ಜೆಡಿಎಸ್ ಮುಖಂಡರನ್ನು ಶಾಸಕರ ಚೇಲಾಗಳು ಎಂದು ಟೀಕಿಸಿದ್ದಾರೆ. ಇದು ಬಿ.ಎಂ.ಕಿರಣ್ ಅವರ ದುರ್ವರ್ತನೆಯನ್ನು ತೋರುತ್ತದೆ. ಇವರು ಟಿ.ಎ.ಪಿ.ಸಿ.ಎಂ.ಎಸ್ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳಿಗೆ ಮತದಾನ ಮಾಡುವ ಮೂಲಕ ಪಕ್ಷ ವಿರೋಧಿ ಚಟುವಟಿಕೆ ಮಾಡಿದ್ದಾರೆ. ಆದರೂ ನಾನು ಜೆಡಿಎಸ್ ಪಕ್ಷದ ಮುಖಂಡ ಎಂದು ಹೇಳಿಕೊಳ್ಳುತ್ತಿರುವುದು ನಾಚಿಕೆಗೇಡು ಎಂದು ಕಿಕ್ಕೇರಿ ಹೋಬಳಿಯ ಜೆಡಿಎಸ್ ಪಕ್ಷದ ಮುಖಂಡರು ಟೀಕಿಸಿದರು.

ಅವರು ಕೆ.ಆರ್.ಪೇಟೆ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ತಾಲ್ಲೂಕು ಟಿಎಪಿಸಿಎಂಎಸ್ ಅಧ್ಯಕ್ಷ ಬಲದೇವ್, ಜೆಡಿಎಸ್ ಮುಖಂಡರಾದ ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಕೃಷ್ಣೇಗೌಡ, ತಾಲ್ಲೂಕು ಟಿ.ಎ.ಪಿ.ಸಿ.ಎಂ.ಎಸ್ ನಿರ್ದೇಶಕ ಕೆ.ಬಿ.ಮಧು, ಕಿಕ್ಕೇರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಕೆ.ಬಿ.ಶೇಖರ್, ಅಂಕನಹಳ್ಳಿ ಅಣ್ಣೇಗೌಡ, ಮಾರ್ಗೋನಹಳ್ಳಿ ಶಿವಣ್ಣ, ಮಂಜು, ಚಂದ್ರೇಗೌಡ, ಆನೆಗೊಳ ನಂಜೇಶ್, ಅಂಕನಹಳ್ಳಿ ಪ್ರವೀಣ್, ಜುಜ್ಜಲಕ್ಯಾತನಹಳ್ಳಿ ಬಸವರಾಜು, ಐಕನಹಳ್ಳಿ ಗಿರೀಶ್, ಕಿಕ್ಕೇರಿ ರಾಘು, ಟಿಎಪಿಸಿಎಂಎಸ್ ಪರಾಜಿತ ಅಭ್ಯರ್ಥಿಗಳಾದ ಕರಿಶೆಟ್ಟಿ, ಕಾಂತರಾಜು, ಹಿರಿಯ ಜೆಡಿಎಸ್ ಮುಖಂಡರಾದ ಬೇಲದಕೆರೆ ನಂಜಪ್ಪ ಮತ್ತಿತರರು ಬಿ.ಎಂ.ಕಿರಣ್ ಅವರು ಪಕ್ಷ ವಿರೋಧಿ ಚಟುವಟಿಕೆ ಮಾಡಿರುವುದು ಹಲವು ದಾಖಲೆಗಳಲ್ಲಿ ಸಾಬೀತಾಗಿದೆ. ಆದರೂ ಈಗ ನಾನು ಪಕ್ಷ ವಿರೋಧಿ ಚಟುವಟಿಕೆ ಏನೂ ಮಾಡಿಲ್ಲ. ನಿಷ್ಠಾವಂತ ಕಾರ್ಯಕರ್ತ ಎಂದು ಬಿಂಬಿಸಿಕೊಳ್ಳುತ್ತಾ ಕಿಕ್ಕೇರಿ ಹೋಬಳಿಯ ಜೆಡಿಎಸ್ ಮುಖಂಡರನ್ನು ಟೀಕಿಸುತ್ತಿರುವುದು ಖಂಡನೀಯವಾದುದು. ಇದು ಮುಂದುವರೆಸಿದರೆ ಬಿ.ಎಂ.ಕಿರಣ್ ಅವರಿಗೆ ತಕ್ಕ ಪಾಠ ಕಲಿಸಬೇಕಾಗುತ್ತದೆ. ಶಾಸಕರಾದ ಹೆಚ್.ಟಿ.ಮಂಜು ಅವರಿಂದ ಹಲವು ಭಾರಿ ಸಹಾಯ ಪಡೆದಿದ್ದಾರೆ ಆದರೂ ಶಾಸಕರು ಅದೆಲ್ಲವನ್ನು ಎಲ್ಲಿಯೂ ಹೇಳಿಕೊಂಡಿಲ್ಲ. ಸಹಿಸಿಕೊಂಡಿದ್ದಾರೆ ಕಾರಣವೇನೆಂದರೆ ಬಿ.ಎಂ.ಕಿರಣ್ ಶ್ರವಣಬೆಳಗೊಳ ಶಾಸಕರಾದ ಸಿ.ಎನ್.ಬಾಲಕೃಷ್ಣ ಹಾಗೂ ರಾಜ್ಯ ಸಹಕಾರ ಮಹಾಮಂಡಳದ ನಿರ್ದೇಶಕ ಚೋಳೇನಹಳ್ಳಿ ಪುಟ್ಟಸ್ವಾಮೀಗೌಡರ ಹತ್ತಿರದ ಸಂಬಂಧಿ ಎಂಬ ಕಾರಣಕ್ಕೆ ಕಿಕ್ಕೇರಿ ಹೋಬಳಿಯಲ್ಲಿ ಜೆಡಿಎಸ್ ಪಕ್ಷದಲ್ಲಿ ಬೆಳೆಯಲಿ ಎಂದು ಎಲ್ಲಾ ರೀತಿಯಲ್ಲೂ ಸಪೋರ್ಟ್ ಮಾಡಿದ್ದಾರೆ. ಇದೆಲ್ಲವನ್ನು ಮರೆತು ಕಾಂಗ್ರೆಸ್ ದೋಣಿಯ ಮೇಲೆ ಸಾಗುತ್ತಿರುವ ವ್ಯಕ್ತಿಗಳೊಂದಿಗೆ ಗುರುತಿಸಿಕೊಂಡು ಟಿಎಪಿಸಿಎಂಎಸ್ ಚುನಾವಣೆಯಲ್ಲಿ ನಮ್ಮ ಜೆಡಿಎಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತರಾದ ಮೂವರು ಅಭ್ಯರ್ಥಿಗಳು ಕೇವಲ 1ಮತಗಳ ಅಂತರದಿಂದ ಸೋಲಲು ಇವರು ಅಡ್ಡ ಮತದಾನ ಮಾಡಿ ನೇರ ಕಾರಣರಾಗಿದ್ದಾರೆ ಎಂದು ಬಿ.ಎಂ.ಕಿರಣ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

*ಕಿರಣ್ ಗೆ ಕೃಷ್ಣೇಗೌಡ ಸವಾಲು*: ಬಿ.ಎಂ.ಕಿರಣ್ ಅವರು ಯಾವುದೇ ಚುನಾವಣೆಯನ್ನು ನೇರವಾಗಿ ಎದುರಿಸಿಲ್ಲ. ಆನೆಗೊಳ ಸೊಸೈಟಿ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಮುಖಂಡರೊಂದಿಗೆ ಹೊಂದಾಣಿಕೆ ಮಾಡಿಕೊಂಡು ಕಾಂಗ್ರೆಸ್ ಪಕ್ಷದವರಿಗೆ 5ಸ್ಥಾನಗಳನ್ನು ಬಿಟ್ಟುಕೊಡುವ ಮೂಲಕ ಆನೆಗೊಳ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಚುನಾವಣೆ ನಡೆಸಿದ್ದರೆ ಎಲ್ಲಾ ಸ್ಥಾನಗಳಲ್ಲಿಯೂ ಜೆಡಿಎಸ್ ಪಕ್ಷದ ಅಭ್ಯರ್ಥಿಗಳೇ ಗೆಲ್ಲುತ್ತಿದ್ದರು. ಕಿರಣ್ ಅವರಿಗೆ ದರ?ಯ ಇದ್ದರೆ ಆನೆಗೊಳ ಸೊಸೈಟಿಯ ನಿರ್ದೇಶಕ ಸ್ಥಾನಕ್ಕೆ ರಾಜೀನಾಮೆ ನೀಡಿ, ನನ್ನ ವಿರುದ್ಧ ಸ್ಪರ್ಧೆ ಮಾಡಿ ನನ್ನನ್ನು ಎದುರಿಸಿ ಗೆದ್ದರೆ ನಾನು ರಾಜಕೀಯ ನಿವೃತ್ತಿ ಘೋಷಣೆ ಮಾಡಿ ಮನೆಯಲ್ಲಿರುತ್ತೇನೆ ಎಂದು ಕೃಷ್ಣೇಗೌಡ ಬಿ.ಎಂ.ಕಿರಣ್‌ಗೆ ಸವಾಲು ಹಾಕಿದರು.

*ಡಾಲು ರವಿ ವಿರುದ್ಧ ಬಲದೇವ್ ಟೀಕೆ*: ಮನ್‌ಮುಲ್ ನಿರ್ದೇಶಕರಾದ ಡಾಲು ರವಿ ತಾವು ನಿಷ್ಠಾವಂತ ಜೆಡಿಎಸ್ ಕಾರ್ಯಕರ್ತ ಎಂದು ಹೇಳಿಕೊಂಡಿದ್ದಾರೆ. ಇದನ್ನು ನಾನು ತೀವ್ರವಾಗಿ ಖಂಡಿಸುತ್ತೇನೆ ಎಂದು ತಾಲ್ಲೂಕು ಟಿಎಪಿಸಿಎಂಎಸ್ ಅಧ್ಯಕ್ಷ ಬಲದೇವ್ ತಿಳಿಸಿದರು. ಡಾಲು ರವಿ ತಾವು ಮನ್‌ಮುಲ್ ಚುನಾವಣೆಯಲ್ಲಿ ಗೆದ್ದ ಬಳಿಕ ಕಾಂಗ್ರೆಸ್ ಪಕ್ಷದ ಜಿಲ್ಲಾಧ್ಯಕ್ಷರಾದ ಸಿ.ಡಿ.ಗಂಗಾಧರ್ ಮತ್ತು ಇತರೆ ಕಾಂಗ್ರೆಸ್ ಪಕ್ಷದ ಮುಖಂಡರಿಂದ ಸನ್ಮಾನ ಸ್ವೀಕರಿಸಿ, ಮನ್‌ಮುಲ್ ಮತ್ತು ಡಿಸಿಸಿ ಬ್ಯಾಂಕ್ ಚುನಾವಣೆ ಫಲಿತಾಂಶದ ಬಳಿಕ ಕಾಂಗ್ರೆಸ್ ಮುಖಂಡರೊಂದಿಗೆ ಸೇರಿ ವಿಜಯೋತ್ಸವ ಆಚರಣೆ ಮಾಡಿದ್ದಾರೆ. ಡಿಸಿಸಿ ಬ್ಯಾಂಕಿನ ಮತ ಎಣಿಕೆ ಏಜೆಂಟ್ ಆಗಿಯೂ ಕರ್ತವ್ಯ ನಿರ್ವಹಿಸಿದ್ದಾರೆ ಆದರೂ ನಾನು ಜೆಡಿಎಸ್ ನಿಷ್ಠಾವಂತ ಕಾರ್ಯಕರ್ತ ಎಂದು ಹೇಳಿಕೊಂಡಿರುವುದು ರಾಜಕೀಯ ನೆಲೆಯಿಲ್ಲದ ರಾಜಕಾರಣಿ ಹಾಗೂ ಅವಕಾಶವಾದಿ ರಾಜಕಾರಣಿ ಎಂದು ಡಾಲು ರವಿ ವಿರುದ್ಧ ಬಲದೇವ್ ಆಕ್ರೋಶ ವ್ಯಕ್ತಪಡಿಸಿದರು. ನೀವು ತಾಲ್ಲೂಕಿನಲ್ಲಿ ಯಾವ ರೀತಿ ಅವಕಾಶವಾದಿ ರಾಜಕಾರಣ ಮಾಡುತ್ತಿದ್ದೀರಿ ಎಂಬುದು ಎಲ್ಲರಿಗೂ ತಿಳಿದಿದೆ. ಮುಂದಿನ ದಿನಗಳಲ್ಲಿ ತಾಲ್ಲೂಕಿನ ಜನತೆ ತಮಗೆ ಸರಿಯಾದ ಪಾಠ ಕಲಿಸಲಿದ್ದಾರೆ. ನಮ್ಮ ಪಕ್ಷದ ಶಾಸಕರಾದ ಹೆಚ್.ಟಿ.ಮಂಜಣ್ಣ ಅವರು ಪ್ರಾಮಾಣಿಕ ರಾಜಕಾರಣ ಮಾಡುತ್ತಿದ್ದಾರೆ. 2028ಕ್ಕೆ ಮತ್ತೆ ಬಿ.ಫಾರಂ ಪಡೆದು ಮತ್ತೊಮ್ಮೆ ಶಾಸಕರಾಗುವುದು ಖಚಿತ. ಪಕ್ಷ ವಿರೋಧಿ ಚಟುವಟಿಕೆ ಮಾಡಿರುವ ನಿಮಗೆ ಜೆಡಿಎಸ್ ಪಕ್ಷದಲ್ಲಿ ಯಾವುದೇ ನೆಲೆ ಸಿಗುವುದಿಲ್ಲ.

ಸುಮ್ಮನೇ ಏಕೆ ಜೆಡಿಎಸ್ ಮುಖಂಡ ಎಂದು ಹೇಳಿಕೊಂಡು ತಿರುಗುತ್ತೀರಿ, ಬೆಕ್ಕು ಕಣ್ಣು ಮುಚ್ಚಿ ಹಾಲು ಕುಡಿದರೆ ಯಾರಿಗೂ ತಿಳಿಯುವುದಿಲ್ಲ ಅಂದುಕೊಂಡಿದ್ದಾರೆ ಎಂದು ಡಾಲು ರವಿ ನಡೆಯನ್ನು ಬಲದೇವ್ ಹೇಳಿದರು.

# ಕಾಫಿ ಎಸ್ಟೇಟ್‌ನಲ್ಲಿ ಕಾಣೆಯಾಗಿದ್ದ 2 ವರ್ಷದ ಬಾಲಕಿಯನ್ನು ಪತ್ತೆ ಹಚ್ಚಿದ ಸಾಕು ನಾಯಿ!

**ಮಡಿಕೇರಿ:** ಎಸ್ಟೇಟ್ ಹೌಸ್‌ನಿಂದ ಕಾಣೆಯಾಗಿದ್ದ ಎರಡು ವರ್ಷದ ಬಾಲಕಿಯನ್ನು ಅರಣ್ಯ ಇಲಾಖೆ ಸಿಬ್ಬಂದಿ ಮತ್ತು ಸಾಕು ನಾಯಿಯ ಸಹಾಯದಿಂದ ಪತ್ತೆ ಹಚ್ಚಿ ಮತ್ತೆ ಆಕೆಯ ಪೋಷಕರ ಮಡಿಲಿಗೆ ಸಾಕಿದ್ದಾರೆ.

ದಕ್ಷಿಣ ಕೊಡಗಿನ ಬಿ ಶೆಟ್ಟಿಗೇರಿ ಗ್ರಾಮದ ಅರಣ್ಯದ ಅಂಚಿನಲ್ಲಿರುವ ಕೊಂಗಣ ಗ್ರಾಮದಲ್ಲಿ ಈ ಘಟನೆ ವರದಿಯಾಗಿದೆ. ಜೇನು ಸಾಕಣೆ ಕುಟುಂಬದಿಂದ ಬಂದ ಎಸ್ಟೇಟ್ ಕಾರ್ಮಿಕರಾದ ಸುನಿಲ್ ಮತ್ತು ನಾಗಿಣಿ ಐದು ದಿನಗಳ ಹಿಂದೆ ಬಿ ಶೆಟ್ಟಿಗೇರಿಯ ಖಾಸಗಿ ಎಸ್ಟೇಟ್‌ನಲ್ಲಿ ಕೆಲಸ ಮಾಡಲು ಬಂದಿದ್ದರು. ದಂಪತಿಗೆ ಎರಡು ವರ್ಷದ ಸುನನ್ಯಾ ಎಂಬ ಮಗಳಿದ್ದಾಳೆ.

ಮೂಲಗಳ ಪ್ರಕಾರ, ದಂಪತಿಗಳು ಕೆಲಸಕ್ಕೆ ಹೋದಾಗ ಮಗುವನ್ನು ಎಸ್ಟೇಟ್ ಲೈನ್ ಮನೆಯ ಬಳಿ ಎಸ್ಟೇಟ್ ಕಾರ್ಮಿಕರ ಇತರ ಮಕ್ಕಳೊಂದಿಗೆ ಬಿಟ್ಟು ಹೋಗಿದ್ದರು. ಶನಿವಾರ ನಾಗಿಣಿ ಮತ್ತು ಸುನಿಲ್ ಎಸ್ಟೇಟ್ ಕೆಲಸಕ್ಕೆ ಹೋದಾಗ ಸುನನ್ಯಾ ಅವರನ್ನು ಇತರ ಮಕ್ಕಳೊಂದಿಗೆ ಆಟವಾಡಲು ಬಿಡಲಾಗಿತ್ತು. ಆದಾಗ್ಯೂ, ದಂಪತಿಗಳು ಕೆಲಸದಿಂದ ಹಿಂತಿರುಗಿದಾಗ, ಸುನನ್ಯಾ ಕಾಣೆಯಾಗಿದ್ದಳು. ಸುನನ್ಯಾ ಜೊತೆಗಿದ್ದ ಇತರ ಮಕ್ಕಳಿಗೂ ಆಕೆ ಎಲ್ಲಿಗೆ ಹೋದಳೆಂದು ತಿಳಿದಿರಲಿಲ್ಲ.

# ಗುಡುಗನಹಳ್ಳಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಕ್ಕೆ ಪದಾಧಿಕಾರಿಗಳ ಆಯ್ಕೆ



**ಕೆ.ಆರ್.ಪೇಟೆ:** ತಾಲ್ಲೂಕಿನ ಅಕ್ಕಿಹೆಬ್ಬಾಳು ಹೋಬಳಿಯ ಗುಡುಗನಹಳ್ಳಿ ಗ್ರಾಮದ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ಚುನಾವಣೆಯಲ್ಲಿ 6 ಮಂದಿ ಕಾಂಗ್ರೆಸ್ ಬೆಂಬಲಿತರು, 3ಮಂದಿ ಜೆಡಿಎಸ್ ಬೆಂಬಲಿತರು, ಓರ್ವರು ಪಕ್ಷೇತರರಾಗಿ ಆಯ್ಕೆಯಾಗಿದ್ದಾರೆ.

ಪುಷ್ಪಲತ ಮಂಜು, ಕಲಾವತಿ ಜಿ.ಕೆ.ಮಹೇಶ್, ಗೌರಮ್ಮ ಜಿ.ಪಿ.ಮಹೇಶ್, ಸುಜಾತ ಮಹೇಂದ್ರ, ಲಲಿತ ಶಂಕರಶೆಟ್ಟಿ, ಕಾಂತಾಮಣಿ ಜಿ.ಜೆ ದೇವರಾಜು, ಅಶ್ವಿನಿ ಮೋಹನ್ ಕುಮಾರ್, ಪಲ್ಲವಿ ವಸಂತಕುಮಾರ್, ಜ್ಯೋತಿ.ಜಿ.ಕೆ ಸುರೇಶ್, ಸವಿತ ರಾಜೇಶ್ ಅವರುಗಳು 2025–2030ನೇ ಸಾಲಿಗೆ ಸಂಘದ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಹೆಚ್.ಸಿ.ಅಂಬಿಕಾ ತಿಳಿಸಿದ್ದಾರೆ. ಸಹ ಚುನಾವಣಾಧಿಕಾರಿ ಸಂಘದ ಕಾರ್ಯದರ್ಶಿ ಸೌಮ್ಯ ಚಂದ್ರೇಶ್ ಕಾರ್ಯನಿರ್ವಹಣೆ ಮಾಡಿದರು. ನೂತನ ಆಡಳಿತ ಮಂಡಳಿಯ ಎಲ್ಲಾ ನಿರ್ದೇಶಕರನ್ನು ಗ್ರಾಮದ ಮುಖಂಡರಾದ ರಾಯಪ್ಪ, ಶ್ರೀನಿವಾಸ್, ಕರೀಗೌಡ, ನಾಗರಾಜು, ಎಲ್.ಐ.ಸಿ. ಪಾಪಣ್ಣ, ಶ್ರೀನಿವಾಸ್, ತಿಮ್ಮಶೆಟ್ಟಿ, ರಘು, ಸತೀಶ್, ಗಜೇಂದ್ರ, ಸಾಗರ್, ಗಾರೆ ಕುಮಾರ್, ದಿಲೀಪ್, ಸಿದ್ದರಾಜು, ಚಂದನ್, ನಾಗೇಗೌಡ, ವೆಂಕಟೇಶ್, ಸ್ವಾಮೀಗೌಡ, ಪುನೀತ್ ಕುಮಾರ್, ಜಿ.ಹೆಚ್.ಬಸವರಾಜು, ಮಹಾದೇವ್, ಮಂಜೇಗೌಡ, ನಟರಾಜು, ಮಧು, ಎ.ರಾಜು ಸೇರಿದಂತೆ ಹಲವು ಮುಖಂಡರು ಅಭಿನಂದಿಸಿದ್ದಾರೆ.

ಹಿರಿಯ ಮುಖಂಡರಾದ ಜಿ.ಎ.ರಾಯಪ್ಪ ನೂತನ ನಿರ್ದೇಶಕರನ್ನು ಅಭಿನಂದಿಸಿ ಮಾತನಾಡಿ ನಮ್ಮ ಗುಡುಗನಹಳ್ಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಚುನಾವಣೆಯಲ್ಲಿ ನಮ್ಮ ಕಾಂಗ್ರೆಸ್ ಪಕ್ಷದ 6ಮಂದಿ ಜಯ ಸಾಧಿಸಿದ್ದಾರೆ. ಇದಕ್ಕೆ ಸಹಕಾರ ನೀಡಿದ ಸಚಿವ ಎನ್.ಚೆಲುವರಾಯಸ್ವಾಮಿ, ಮನ್ ಮುಲ್ ನಿರ್ದೇಶಕರಾದ ಡಾಲು ರವಿ, ಎಂ.ಬಿ.ಹರೀಶ್, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯರಾದ ಕೋಡಿಮಾರನಹಳ್ಳಿ ದೇವರಾಜು ಸೇರಿದಂತೆ ಹಲವು ಗಣ್ಯರಿಗೆ ಗ್ರಾಮದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುವುದಾಗಿ ತಿಳಿಸಿದರು. ನಮ್ಮ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘವು ಲಾಭದಾಯಕವಾಗಿ ನಡೆಯುತ್ತಿದೆ. ಕಳೆದ ಎರಡು ಸಾಲಿನಿಂದ ಆಡಳಿತ ಮಂಡಳಿ ನಿರ್ದೇಶಕರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿತ್ತು. ಆದರೆ ಈ ಭಾರಿ ಕೆಲವರ ಪ್ರತಿಷ್ಠೆಯಿಂದಾಗಿ ಚುನಾವಣೆ ನಡೆಯಿತು. ಚುನಾವಣೆಯಲ್ಲಿಯೂ ನಮ್ಮ ಕಾಂಗ್ರೆಸ್ ಪಕ್ಷವು 10ಸ್ಥಾನಗಳ ಪೈಕಿ 6ಸ್ಥಾನಗಳಲ್ಲಿ ಭರ್ಜರಿ ಜಯ ಸಾಧಿಸಿದ್ದೇವೆ. ಇದಕ್ಕೆ ಕಾರಣಕರ್ತರಾದ ಮತದಾರರಿಗೆ ಹಾಗೂ ಮುಖಂಡರಿಗೆ ಕೃತಜ್ಞತೆಗಳನ್ನು ಸಲ್ಲಿಸುವುದಾಗಿ ಜಿ.ಎ.ರಾಯಪ್ಪ ತಿಳಿಸಿದರು.

# ನಿವೃತ್ತ ಸೈನಿಕನಿಗೆ ಸಾರ್ವಜನಿಕವಾಗಿ ಥಳಿಸಿ ಒದ್ದ ಪೊಲೀಸ್!

**ಬೆಳಗಾವಿ:** ನಂದಗಡ ಪೊಲೀಸ್ ಠಾಣೆಯ ಸಿಬ್ಬಂದಿ 68 ವರ್ಷದ ನಿವೃತ್ತ ಸೈನಿಕನ ಮೇಲೆ ಹಲ್ಲೆ ನಡೆಸಿದ್ದು ಖಾನಾಪುರ ತಾಲೂಕಿನಾದ್ಯಂತ ವ್ಯಾಪಕ ಖಂಡನೆಗೆ ಗುರಿಯಾಗಿದೆ. ಚಿಕ್ಕಮುನವಳ್ಳಿ ಗ್ರಾಮದ ಚನ್ನಮಲ್ಲಪ್ಪ ಕುಂಬಾರ್ ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದಾಗ ಹೆಲ್ಮೆಟ್ ಧರಿಸದ ಕಾರಣ ಪೊಲೀಸರು ತಡೆದ ನಂತರ ಸಾರ್ವಜನಿಕವಾಗಿ ಥಳಿಸಿ ಒದ್ದಿದ್ದಾರೆ ಎಂದು ಆರೋಪಿಸಲಾಗಿದೆ. ಚನ್ನಮಲ್ಲಪ್ಪ ಕುಂಬಾರ್ ಚಿಕ್ಕಮುನವಳ್ಳಿಯಿಂದ ಭೂರಾನಕಿಗೆ ಹೋಗುತ್ತಿದ್ದಾಗ, ಬೀಡಿ ಗ್ರಾಮದ ಬಳಿ ಬೆಳಗಾವಿ–ತಾಳಗುಪ್ಪ ರಾಜ್ಯ ಹೆದ್ದಾರಿಯಲ್ಲಿ ವಾಹನ ತಪಾಸಣೆ ನಡೆಸುತ್ತಿದ್ದ ಪೊಲೀಸರು ನಿಲ್ಲಿಸುವಂತೆ ಸೂಚಿಸಿದರು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಅವರು ಸವಾರಿ ಮುಂದುವರೆಸಲು ಪ್ರಯತ್ನಿಸಿದಾಗ, ಒಬ್ಬ ಪೊಲೀಸ್ ಅಧಿಕಾರಿ ಅವರ ಶರ್ಟ್ ಹಿಡಿದು ಮಾತಿನ ಚಕಮಕಿ ನಡೆಸಿದರು. ಪರಿಸ್ಥಿತಿ ವೇಗವಾಗಿ ವಿಕೋಪಕ್ಕೆ ತಿರುಗಿ, ಪೊಲೀಸರು ಅವರನ್ನು ರಸ್ತೆಯ ಮಧ್ಯಭಾಗಕ್ಕೆ ಎಳೆದುಕೊಂಡು ಹೋಗಿ ತಮ್ಮ ಬೂಟುಗಳಿಂದ ಒದ್ದಿದ್ದಾರೆ ಎಂದು ವರದಿಯಾಗಿದೆ. ಸ್ಥಳೀಯರು ಅವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದ್ದಾರೆ. ಹಲ್ಲೆಯ ವಿಡಿಯೋ ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗಿತ್ತು. ಘಟನೆಯ ಸುದ್ದಿ ಹರಡುತ್ತಿದ್ದಂತೆ, ಬೀಡಿ ಗ್ರಾಮದ ನಿವೃತ್ತ ಸೈನಿಕ ಸಂಘದ ಸದಸ್ಯರು ದೂರು ದಾಖಲಿಸಲು ಚನ್ನಮಲ್ಲಪ್ಪ ಅವರೊಂದಿಗೆ ನಂದಗಡ ಪೊಲೀಸ್ ಠಾಣೆಗೆ ತೆರಳಿದರು.

# ‘ಕನ್ನಡ ದೀಪವು ನಿತ್ಯವು ಬೆಳಗಲಿ’



**ಕುಣಿಗಲ್:** ನಮ್ಮ ನಾಡಿನ ಪವಿತ್ರ ಹಮ್ಮೆಯ ಕನ್ನಡ ದೀಪವು ನಿತ್ಯವು ಬೆಳಗಲಿ, ರಾಜ್ಯವು ನಿತ್ಯೋತ್ಸವವಾಗಲಿ ಎಂದು ಶಾಸಕ ಡಾ.ಹೆಚ್.ಡಿ.ರಂಗನಾಥ್ ತಿಳಿಸಿದರು.

ಪಟ್ಟಣದ ಮಹಾತ್ಮಗಾಂಧಿಜೀ ಪದವಿ ಪೂರ್ವ ಕಾಲೇಜು ಮುಂಭಾಗ ಅಖಿಲ ಕರ್ನಾಟಕ ಡಾ.ಜಿ.ಪರಮೇಶ್ವರ್ ಯುವ ಸೈನ್ಯದಿಂದ ಹಮ್ಮಿಕೊಂಡಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ನಮ್ಮ ಭಾಷೆ, ಸಂಸ್ಕೃತಿಗೆ ಸಾವಿರಾರು ವರ್ಷಗಳ ಇತಿಹಾಸ ಪರಂಪರೆ ಇದೆ, ಕನ್ನಡದ ಸಾರ್ವತೋಮುಖ ಅಭಿವೃದ್ಧಿಗೆ ಮತ್ತು ಏಕೀಕರಣಕ್ಕೆ ಸಾಕಷ್ಟು ಮಂದಿ ಹೋರಾಡಿದ್ದಾರೆ ಇಂದು ಕನ್ನಡದ ಮೇಲಿನ ಪ್ರೀತಿ ಕಡಿಮೆಯಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದ ಶಾಸಕರು ಇಂಗ್ಲೀಷ್‌ಗೆ ಗೌರವ ಕೊಡುವುದು ತಪ್ಪಲ್ಲ, ಆದರೆ ಆ ನೆಪದಲ್ಲಿ ಕನ್ನಡ ಮರೆಯುವುದು ತಪ್ಪು, ಭಾಷೆಯಾಗಿ ಇಂಗ್ಲೀಷ್ ಇರಲಿ ಆದರೆ ಮಾಧ್ಯಮವಾಗಿ ಕನ್ನಡವೇ ಇರಬೇಕು, ಮಾತೃ ಭಾಷೆಯನ್ನು ದ್ವೇಶ ಮಾಡಬೇಡಿ ಎಂದರು, ಕನ್ನಡಕ್ಕೆ ಮಹನೀಯರು ಕೊಟ್ಟಿರುವ ಕೊಡುಗೆ ನೆನೆಯುತ್ತಾ ಕನ್ನಡದ ಬಗ್ಗೆ ಪ್ರೀತಿ ಬೆಳೆಸಿಕೊಳ್ಳಬೇಕಾಗಿರುವುದು ಪ್ರತಿಯೊಬ್ಬ ಕನ್ನಡಿಗರ ಕರ್ತವ್ಯ ಎಂದು ಹೇಳಿದರು.

ಧ್ವಜಾ ರೋಹಣ ನೆರವೇರಿಸಿ ಮಾತನಾಡಿದ ತಹಶೀಲ್ದಾರ್ ರಶ್ಮಿ.ಯು ವರ್ಷ ಪೂರ್ತಿ ಕನ್ನಡವನ್ನು ಬಳಸಿ, ಬೆಳೆಸಿದರೆ ರಾಜ್ಯೋತ್ಸವ ಎಂಬುದು ನಿತ್ಯೋತ್ಸವವಾಗುತ್ತದೆ ಕವಿ ಡಾ.ನಿಸಾರ್ ಅಹಮದ್ ಅವರು ಕನ್ನಡದ ಕುರಿತು ನಿತ್ಯೋತ್ಸವ ತಾಯಿ ನಿತ್ಯೋತ್ಸವ ಎಂದು ಬರೆದಿದ್ದಾರೆ, ಅದೇ ರೀತಿ ಕನ್ನಡವನ್ನು ವರ್ಷ ಪೂರ್ತಿ ಬಳಸಿದಾಗಷ್ಟೇ ನಿತ್ಯೋತ್ಸವವಾಗುತ್ತದೆ ಎಂದರು, ಕನ್ನಡ ರಾಜ್ಯೋತ್ಸವ ಎಂಬ ಭಾವುಕ ಉತ್ಸವದಲ್ಲಿ ಭಾಗಿ ಆಗುವುದರ ಜತೆಗೆ ಕನ್ನಡ ಮತ್ತು ಕರ್ನಾಟಕದ ವ್ಯಕ್ತಿಗಳು ಸೇರಿದಂತೆ ಜನರ ಸರ್ವಾಗೀಣ ಅಭಿವೃದ್ಧಿಯ ಬಗ್ಗೆ ವಿವಿಧ ಕ್ಷೇತ್ರಗಳಲ್ಲಿ ಆಗುತ್ತಿರುವ ಪ್ರಗತಿಯ ಬಗ್ಗೆ ಯೋಚಿಸಬೇಕು ಎಂದು ಹೇಳಿದರು.

ವೃತ್ತ ನಿರೀಕ್ಷಕ ಮಾದ್ಯ ನಾಯಕ್ ಮಾತನಾಡಿ ಭಾಷೆಗಳ ನಡುವಿನ ತಿಕ್ಕಾಟದ ನಡುವೆಯು ಎಲ್ಲರೂ ಒಂದಾಗಿ ವಿಭಿನ್ನತೆಯಲ್ಲಿ ಏಕತೆಯನ್ನು ಕಾಣುತ್ತಿರುವುದೇ ಈ ದೇಶದ ಹೆಮ್ಮೆ ಭಾಷೆ ಎಂಬುದು ಭಾವನಾತ್ಮಕ ಅಂಶ ಹೀಗಾಗಿ ವಿವಿಧ ಭಾಷಿಕರ ಮಧ್ಯೆ ತಿಕ್ಕಾಟಗಳು ನಡೆಯುತ್ತವೆ ಅದರ ಮಧ್ಯೆಯೂ ಏಕತೆಯನ್ನು ಕಾಣುತ್ತಿರುವುದು ಭಾರತದ ವಿಶೇಷತೆ ಎಂದರು,

ಅಖಿಲ ಕರ್ನಾಡಕ ಡಾ.ಜಿ.ಪರಮೇಶ್ವರ್ ಯುವ ಸೈನ್ಯ ರಾಜ್ಯಾಧ್ಯಕ್ಷ ನಗುತಾರಂಗನಾಥ್ ಮಾತನಾಡಿ ಎರಡು ಸಾವಿರ ವರ್ಷಕ್ಕೂ ಅಧಿಕವಾಗಿರುವ ನಮ್ಮ ಭಾಷೆ, ಸಂಸ್ಕೃತಿ, ನಾಡು, ನೆಲ, ಜಲ ಸಂರಕ್ಷಣೆಗಾಗಿ ಸಾಹಿತಿಗಳು, ಕವಿಗಳು, ಚಲನಚಿತ್ರ ನಟರು, ಕನ್ನಡ ಪರ ಹೋರಾಟಗಾರರು ಅವಿರತವಾಗಿ ಶ್ರಮಿಸಿದ ಪ್ರತಿಫಲವಾಗಿ ಇಂದು ನಮ್ಮ ಭಾಷೆ ಶ್ರೀಮಂತಿಯಾಗಿ ಬೆಳೆಯಲು ಕಾರಣವಾಗಿದೆ ಈ ನಿಟ್ಟಿನಲ್ಲಿ ಡಾ.ಜಿ.ಪರಮೇಶ್ವರ್ ಯುವ ಸೈನ್ಯಯಿಂದ ಪ್ರತಿ ವರ್ಷ ರಾಜ್ಯೋತ್ಸವ ಆಚರಿಸುವ ಮೂಲಕ ಜನ ಜಾಗೃತಿ ಮೂಡಿಸಲಾಗುತ್ತಿದೆ ಇದಕ್ಕೆ ಸಹಕರಿಸಿದ ಎಲ್ಲರಿಗೂ ಧನ್ಯವಾದಗಳು ಎಂದರು.

ಇದೇ ವೇಳೆ ಶಾಲಾ ವಿದ್ಯಾರ್ಥಿಗಳಿಗೆ ಉಚಿತವಾಗಿ ಶಾಲಾ ಬ್ಯಾಗ್, ನೋಟ್ ಬುಕ್ ವಿತರಣೆ ಮಾಡಲಾಯಿತು. ರಕ್ತದಾನ ಶಿಬಿರ ಮತ್ತು ಅನ್ನ ಸಂತರ್ಪಣೆಯನ್ನು ಏರ್ಪಡಿಸಲಾಯಿತು.

# ನಿಜವಾದ ನಾಯಿಗಳು ಸಂಸತ್ತಿನಲ್ಲಿ ಕುಳಿತಿವೆ: ರೇಣುಕಾ ಚೌಧರಿ ವಿವಾದಾತ್ಮಕ ಹೇಳಿಕೆ



**ನವದೆಹಲಿ:** ಕಾಂಗ್ರೆಸ್ ಸಂಸದೆ ರೇಣುಕಾ ಚೌಧರಿ ಅವರು ಸೋಮವಾರ ಸಂಸತ್ತಿನ ಆವರಣಕ್ಕೆ ನಾಯಿಯೊಂದನ್ನು ಕರೆತಂದಿದ್ದು, ಅದು ಬೀದಿ ನಾಯಿ ಎಂದು ಹೇಳಿಕೊಂಡರು ಮತ್ತು ಅದಕ್ಕೆ ಇತರ ಸಂಸದರ ಆಕ್ಷೇಪಣೆಗಳನ್ನು ಸ್ಪಷ್ಟ ತಳ್ಳಿಹಾಕಿದರು. "ನಿಜವಾದ ನಾಯಿಗಳು ಸಂಸತ್ತಿನಲ್ಲಿ ಕುಳಿತಿವೆ" ಮತ್ತು ಪ್ರತಿದಿನ ಜನರನ್ನು ಕಚ್ಚುತ್ತಿವೆ ಎಂದು ವಿವಾದಾತ್ಮಕ ಹೇಳಿಕೆ ನೀಡಿದರು.

ಸಂಸತ್ತಿಗೆ ಹೋಗುವಾಗ ನಾಯಿಮರಿಯನ್ನು ರಕ್ಷಿಸಿದೆ ಎಂದು ಚೌಧರಿ ವಿವರಿಸಿದರು. ರಸ್ತೆಯಲ್ಲಿ ಸ್ಕೂಟರ್–ಕಾರು ಡಿಕ್ಕಿ ಹೊಡೆದಿದ್ದರಿಂದ ಗಾಯಗೊಂಡಿದ್ದ ನಾಯಿಮರಿಯನ್ನು ಗಮನಿಸಿದ ಕಾಂಗ್ರೆಸ್ ನಾಯಕಿ, ಅದನ್ನು ತಮ್ಮ ಕಾರಿನಲ್ಲಿ ಸಂಸತ್ತಿಗೆ ಕರೆತಂದರು. ಸ್ವಲ್ಪ ಸಮಯದ ಆ ನಾಯಿಮರಿ ಕಾಂಗ್ರೆಸ್ ಸಂಸದರ ಕಾರಿನಲ್ಲಿ ಹೊರಟುಹೋಯಿತು.

"ಏನಾದರೂ ಕಾನೂನು ಇದೆಯೇ? ನಾನು ದಾರಿಯಲ್ಲಿ ಹೋಗುತ್ತಿದ್ದೆ. ಕಾರು ಡಿಕ್ಕಿಯಿಂದ ಗಾಯಗೊಂಡಿದ್ದ ಈ ಪುಟ್ಟ ನಾಯಿಮರಿ ರಸ್ತೆಯಲ್ಲಿ ಅಲೆದಾಡುತ್ತಿತ್ತು. ಅದು ಮತ್ತೊಂದು ವಾಹನದ ಚಕ್ರಕ್ಕೆ ಸಿಲುಕಬಹುದು ಎಂದು ನಾನು ಅದನ್ನು ಎತ್ತಿಕೊಂಡು, ಕಾರಿನಲ್ಲಿ ಇರಿಸಿ, ಸಂಸತ್ತಿಗೆ ಕರೆತಂದೆ. ಕಾರು ಹೊರಟುಹೋಯಿತು ಆದರೆ ನಾಯಿಯೂ ಹೋಯಿತು" ಎಂದು ಚೌಧರಿ ಂಓಖ ಗೆ ತಿಳಿಸಿದರು. ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟದ(ಎನ್‌ಡಿಎ) ಯಾವುದೇ ಸಂಸದರನ್ನು ಹೆಸರಿಸದೆ, ಆಡಳಿತ ಪಕ್ಷವನ್ನು ಟೀಕಿಸಿದ ಚೌಧರಿ, "ನಿಜವಾದ ನಾಯಿಗಳು ಸಂಸತ್ತಿನಲ್ಲಿ ಕುಳಿತಿವೆ" ಮತ್ತು ಅದರ ಬಗ್ಗೆ ಯಾವುದೇ ಚರ್ಚೆ ನಡೆಯುವುದಿಲ್ಲ ಎಂದರು. "ಕಚ್ಚುವ ನಿಜವಾದ ನಾಯಿಗಳು ಸಂಸತ್ತಿನಲ್ಲಿ ಕುಳಿತಿವೆ. ಅವು ಸರ್ಕಾರ ನಡೆಸುತ್ತಿವೆ. ನಾವು ಮೂಕ ಪ್ರಾಣಿಯನ್ನು ನೋಡಿಕೊಳ್ಳುತ್ತೇವೆ ಮತ್ತು ಇದು ದೊಡ್ಡ ವಿಷಯ ಮತ್ತು ಚರ್ಚೆಯ ವಿಷಯವಾಗಿದೆ. ಸರ್ಕಾರಕ್ಕೆ ಬೇರೆ ಕೆಲಸವಿಲ್ಲವೇ? ನಾನು ನಾಯಿಯನ್ನು ಮನೆಗೆ ಕಳುಹಿಸಿ ಮನೆಯಲ್ಲಿಯೇ ಇಟ್ಟುಕೊಳ್ಳಲು ಹೇಳಿದೆ... ಸಂಸತ್ತಿನಲ್ಲಿ ಕುಳಿತು ಪ್ರತಿದಿನ ನಮ್ಮನ್ನು ಕಚ್ಚುವವರ ಬಗ್ಗೆ ನಾವು ಮಾತನಾಡುವುದಿಲ್ಲ" ಎಂದು ವಾಗ್ದಾಳಿ ನಡೆಸಿದರು.

# ಪುಟ್ಟಣ ಕಣಗಾಲ್ ನಿವಾಸ ಸ್ಮಾರಕವಾಗಿಸಿ: ಆರ್ ರಘು ಕೌಟಿಲ್ಯ



**ಮೈಸೂರು:** ಕನ್ನಡ ಚಿತ್ರರಂಗದ ಚಿತ್ರಬ್ರಹ್ಮ ಎಸ್. ಆರ್.ಪುಟ್ಟಣ್ಣ ಕಣಗಾಲ್ ಜನ್ಮದಿನೋತ್ಸವ ಅಂಗವಾಗಿ ಕರುಣಾಮಯಿ ವಿಷ್ಣು ಅಭಿಮಾನಿ ಬಳಗದವತಿಯಿಂದ ಚಾಮುಂಡಿಪುರಂ ವೃತ್ತದಲ್ಲಿರುವ ತಗಡೂರು ರಾಮಚಂದ್ರರಾವ್ ವೃತ್ತದಲ್ಲಿ ಪುಟ್ಟಣ್ಣ ನೆನಪಿನಂಗಳ ಕಾರ್ಯಕ್ರಮ ನಡೆಸಲಾಯಿತು.

ಪುಟ್ಟಣ್ಣ ಕಣಗಾಲ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಬಿಜೆಪಿ ಒಬಿಸಿ ಮೋರ್ಚಾ ಅಧ್ಯಕ್ಷ ಆರ್.ರಘು ಕೌಟಿಲ್ಯ ಪೌರಾಣಿಕ ನಾಟಕಗಳು ಸಂಗೀತ ಕಾರ್ಯಕ್ರಮಗಳಿಗೆ ಅತಿ ಹೆಚ್ಚು ಪ್ರೋತ್ಸಾಹ ಜನಮನ್ನಣೆಯಿದ್ದ ಕಾಲಘಟ್ಟದಲ್ಲಿ ಕೌಟುಂಬಿಕ ಚಿತ್ರಗಳು ಮತ್ತು ಸಮಾಜಕ್ಕೆ ಸಂದೇಶ ಸಾರುವ ಚಿತ್ರಗಳನ್ನ ಸರಿಸಾಟಿಯಾಗಿ ನಿರ್ದೇಶಿಸಿ 3ದಿನಗಳ ಮುಂಗಡವಾಗಿ ಸರತಿ ಸಾಲಿನಲ್ಲಿ ಟಿಕೆಟ್ ಪಡೆಯಲು ಚಿತ್ರಮಂದಿರಕ್ಕೆ ಕಲಾಪ್ರೇಕ್ಷಕರನ್ನ ಆಕರ್ಷಿಸಿದ್ದು ಚಿತ್ರಬ್ರಹ್ಮ ಪುಟ್ಟಣ್ಣ ಕಣಗಾಲ್ ರವರ ಚಿತ್ರಗಳು, ನಾಗರಹಾವು ಚಿತ್ರದಲ್ಲಿ ಬರುವ ಪಾತ್ರಗಳು ಓನಕೆ ಒಬ್ಬವ್ವ ಇವತ್ತಿಗೂ ಯುವಪೀಳಿಗೆಯಲ್ಲಿ ದೇಶಪ್ರೇಮವನ್ನ ಹೆಚ್ಚಿಸುತ್ತದೆ. ಮೈಸೂರಿನಲ್ಲಿ ಚಿತ್ರನಗರಿ ನಿರ್ಮಾಣವಾಗುವ ಸಂಧರ್ಭದಲ್ಲಿ ಚಿತ್ರಬ್ರಹ್ಮ ಪುಟ್ಟಣ್ಣ ಕಣಗಾಲ್ ಹೆಸರನ್ನ ನಾಮಕರಣ ಮಾಡಿ ಸ್ಮರಿಸಬೇಕು. ಪಿರಿಯಾಪಟ್ಟಣದ ಕಣಗಾಲ್ ನಲ್ಲಿರುವ ಅವರ ಮನೆಯನ್ನ ಸ್ಮಾರಕವಾಗಿ ಉಳಿಸಿಕೊಳ್ಳಬೇಕಿದೆ ಎಂದರು.

ಸಮಾಜಸೇವಕ ಡಾ.ಕೆ ರಘುರಾಂ ವಾಜಪೇಯಿ ಮಾತನಾಡಿ, ಕಲಾವಿದರ ತವರೂರು ಮೈಸೂರು ಚಿತ್ರರಂಗಕ್ಷೇತ್ರದಲ್ಲಿ ಉತ್ತುಂಗಕ್ಕೆ ಏರಲು ಪುಟ್ಟಣ್ಣ ಕಣಗಾಲ್ ಪಾತ್ರ ಪ್ರಮುಖವಾದದ್ದು, ಪುಟ್ಟಣ್ಣನವರ ಚಿತ್ರದಲ್ಲಿ ಪಾತ್ರಗಳ ನಟನೆಯಲ್ಲಿ ಪರಿಪೂರ್ಣತೆ ಸಿಗುವ ವರೆಗೂ ಕಲಾವಿದರು ಭಯದ ವಾತವರಣದಲ್ಲೇ ನಟಿಸುತ್ತಿದ್ದ ಕಾರಣ ಇಂದಿಗೆ ವಿಷ್ಣುವರ್ಧನ್, ಅಂಬರೀಶ್, ಶ್ರೀನಾಥ್ ಸೇರಿ ಅತ್ಯುತ್ತಮ ನಟರಾಗಿ ಹೊಮ್ಮಿದರೆಂದು ಸ್ಮರಿಸಿದರು.

ನಗರಪಾಲಿಕೆ ಮಾಜಿ ಸದಸ್ಯ ಎಂ.ಡಿ.ಪಾರ್ಥಸಾರಥಿ, ಕೆಪಿಸಿಸಿ ಸದಸ್ಯ ನಜರ್ಬಾದ್ ನಟರಾಜ್, ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ. ರಾಮಕೃಷ್ಣ, ಗಿರೀಶ್, ಪ್ರಜ್ಞಾವಂತ ನಾಗರಿಕ ವೇದಿಕೆ ಅಧ್ಯಕ್ಷರಾದ ಕಡಕೋಳ ಜಗದೀಶ್, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಮ ಅಯ್ಯಂಗಾರ್, ವಿನಯ್ ಕಣಗಾಲ್, ಅಪೂರ್ವ ಸ್ನೇಹ ಬಳಗದ ಅಧ್ಯಕ್ಷರಾದ ಅಪೂರ್ವ ಸುರೇಶ್, ಕರುಣಾಮಯಿ ವಿಷ್ಣು ಅಭಿಮಾನಿ ಬಳಗದ ಅಧ್ಯಕ್ಷ ಎಸ್ ಎನ್ ರಾಜೇಶ್, ರಂಗನಾಥ್, ಧರ್ಮೇಂದ್ರ, ಸುಚೇಂದ್ರ, ಕಲಾವಿದರಾದ ನಾಗೇಂದ್ರ ಪ್ರಸಾದ್ ಇನ್ನಿತರರು ಹಾಜರಿದ್ದರು.

# ಖಾಲಿ ಕುರ್ಚಿ ಎಂಬ ತತ್ವವೂ...ನಮ್ಮ ಬದುಕೂ



ಖಾಲಿ ಕುರ್ಚಿ ಎಂಬ ತತ್ವವೂ...ನಮ್ಮ ಬದುಕೂ ಜಾಕ್ ಮಾ ಎಂಬ ವ್ಯಕ್ತಿ ತನಗೆ ಅತ್ಯಂತ ಮುಜುಗರ ತಂದ ಒಂದು ಕ್ಷಣವನ್ನು ತನ್ನ ಚಾಣಾಕ್ಷತೆಯಿಂದ ಆಲಿಬಾಬ ಎಂಬ ಅತಿ ದೊಡ್ಡ ಸಂಸ್ಥೆಯನ್ನು ಕಟ್ಟಲು ಬಳಸಿದ ಎಂಬ ಘಟನೆಯನ್ನು ನೋಡೋಣ.

ಆಲಿಬಾಬ ಎಂಬ ಬಹುದೊಡ್ಡ ಆನ್ಲೈನ್ ಮಾರಾಟ ಸಂಸ್ಥೆಯ ಬಹುಕೋಟಿ ಮೌಲ್ಯದ ಅತಿ ದೊಡ್ಡ ಕಂಪನಿಯನ್ನು ಸ್ಥಾಪಿಸಿದ ಜಾಗತಿಕ ವ್ಯಕ್ತಿಯಾಗಿ ಗುರುತಿಸಲ್ಪಡುವ ಮುನ್ನ ನಡೆದ ಈ ಘಟನೆ ಆತನ ಬದುಕನ್ನೇ ಬದಲಾಯಿಸಿತು ಎಂದರೆ ಅಚ್ಚರಿ ಪಡಬೇಡಿ.

ಹ್ಯಾಂಗ್ ಜಾವೋ ಎಂಬ ಇಂಗ್ಲಿಷ್ ಶಾಲೆಯಲ್ಲಿ ಓದುತ್ತಿದ್ದ ಜಾಕ್ ಸೆಮಿನಾರ್ ಒಂದರಲ್ಲಿ ಭಾಗವಹಿಸಿದ್ದ. ಸ್ಥಳೀಯವಾಗಿ ಸುಮಾರು 20ಕ್ಕೂ ಹೆಚ್ಚು ವ್ಯಾಪಾರಿಗಳು ಭಾಗವಹಿಸಲಿದ್ದ ಆ ಸೆಮಿನಾರಿನಲ್ಲಿ ತನ್ನ ಸಂಶೋಧನಾತ್ಮಕ ವರದಿಯನ್ನು ಮಂಡಿಸಲು ಆತ ಅತ್ಯಂತ ಉತ್ತಮ ತಯಾರಿ ಮಾಡಿಕೊಂಡಿದ್ದ. ತನ್ನ ಪ್ರಬಂಧದ ಪ್ರತಿಯೊಂದು ಸಾಲನ್ನು ಆತ ಪದೇ ಪದೇ ಓದಿ ಬಾಯಿ ಪಾಠ ಮಾಡಿಕೊಂಡಿದ್ದ.

ಸೆಮಿನಾರಿನ ಆರಂಭಕ್ಕೂ ಮುನ್ನ ತಾನೇ ಓಡಾಡಿ ಆ ಇಪ್ಪತ್ತು ಜನರಿಗಾಗಿ ಕುರ್ಚಿಗಳನ್ನು ಆತ ಹೊಂದಿಸಿದ. ಸೆಮಿನಾರ್ ನ ಸಮಯಕ್ಕೆ ಸರಿಯಾಗಿ ವೀಕ್ಷಕರಲ್ಲಿ ಕೇವಲ ಓರ್ವ ವ್ಯಕ್ತಿ ಮಾತ್ರ ಅಲ್ಲಿ ಬಂದು ಕುಳಿತುಕೊಂಡ. ಮುಂದಿನ ಕೆಲ ಕ್ಷಣಗಳು ಕಾತರದಿಂದ  ಕಾದರೂ ಯಾರೊಬ್ಬರೂ

ಆ ಸ್ಥಳಕ್ಕೆ ಬರಲೇ ಇಲ್ಲ. ಸುಮಾರು 20 ಜನ ಭಾಗವಹಿಸಬೇಕಾದ ಕಾರ್ಯಕ್ರಮದಲ್ಲಿ ಕೇವಲ ಐದು ಜನ ಕೂಡ ಬರದೆ ಹೋದದ್ದು ಆತನಿಗೆ ನಿರಾಶೆಯನ್ನುಂಟು ಮಾಡಿದರೂ ಉಳಿದ 19 ಖಾಲಿ ಕುರ್ಚಿಗಳ ನಡುವೆ ಮುಂದಿನ ಸಾಲಿನಲ್ಲಿ ಕುಳಿತ ಓರ್ವ ವ್ಯಕ್ತಿ ಅತ್ಯಂತ ಕುತೂಹಲದಿಂದ ಈತ ಮಂಡಿಸಲಿರುವ ಪ್ರಬಂಧವನ್ನು ಕೇಳಲು ಕುಳಿತುಕೊಂಡಿದ್ದ.

ಜಾಕ್‌ನ ಎದೆಯ ತಾಳ ತಪ್ಪಿದಂತೆ ಭಾಸವಾಯಿತು. ಕಾರ್ಯಕ್ರಮವನ್ನು ರದ್ದುಪಡಿಸಲೇ ಎಂದು ಆತ ಕೆಲ ಕ್ಷಣ ಯೋಚಿಸಿದ. ಕುಳಿತಿದ್ದ ಓರ್ವ ವ್ಯಕ್ತಿಗೆ ಕ್ಷಮೆ ಯಾಚಿಸಿ ಹೊರಟು ಬಿಡಲೇ ಎಂದು ಮನದ ಮತ್ತೊಂದು ಮೂಲೆಯಿಂದ ಕರೆ ಕೇಳಿಸಿತು.ಅಂತಿಮವಾಗಿ ಇನ್ನೇನು ಬಿಟ್ಟುಬಿಡಬೇಕು ಎಂದು ಯೋಚಿಸಿ ಮೇಲೆದ್ದನಾತ.... ಆದರೆ ಮುಂದಿನ ಕೆಲವೇ ಕ್ಷಣಗಳಲ್ಲಿ ಅತ್ಯಂತ ಸಹಜವಾಗಿ ನಡೆದುಕೊಂಡು ಹೋಗಿ ವೇದಿಕೆಯ ಮೇಲೆ ನಿಂತುಕೊಂಡ. ತನ್ನ ಮುಂದಿರುವ ಮೈಕನ್ನು ಸರಿಪಡಿಸಿಕೊಂಡು ತನ್ನ ಮುಂದೆ ಕುಳಿತಿದ್ದ ಆ ಏಕೈಕ ವ್ಯಕ್ತಿಗೆ ತಲೆಬಾಗಿ ನಂತರ ಆತನನ್ನು ಉದ್ದೇಶಿಸಿ ನಿಮಗೆ ಆಸಕ್ತಿ ಇದ್ದರೆ, ಇದನ್ನು ತುಂಬಿದ ಸಭೆ ಎಂದೇ ಭಾವಿಸಿ. ನಾನು ನನ್ನ ವಿಷಯವನ್ನು ಮಂಡಿಸುವೆ ಎಂದು ಸ್ಪಷ್ಟವಾಗಿ ಆದರೆ ಅಷ್ಟೇ ಮೆಲುವಾದ ದನಿಯಲ್ಲಿ ಹೇಳಿದ.

ಮುಂದಿನ ಎರಡು ಗಂಟೆಗಳ ಕಾಲ ಆತ ನಿರಂತರವಾಗಿ ವಿಷಯವನ್ನು ಮಂಡಿಸಿ ತಾನು ಹೇಳಬೇಕೆಂದುಕೊಂಡ

ತನ್ನೆಲ್ಲ ಯೋಜನೆಗಳಲ್ಲಿ ಪ್ರತಿಯೊಂದನ್ನು ಉದಾಹರಣೆ ಸಮೇತವಾಗಿ ಆತ  ತನ್ನ ಮುಂದೆ ಕುಳಿತಿದ್ದ ವ್ಯಕ್ತಿಗೆ ಕಣ್ಣಿಗೆ ಕಟ್ಟುವಂತೆ ವಿವರಿಸಿದ. ತನ್ನೆಲ್ಲ ಯೋಜನೆಗಳನ್ನು ಹಂಚಿಕೊಂಡ ಆತ ಅಂತಿಮವಾಗಿ ಒಂದೊಳ್ಳೆಯ ಉಪನ್ಯಾಸವನ್ನು ನೀಡಿದ ತೃಪ್ತಿಯಿಂದ ವೇದಿಕೆಯಿಂದ ಕೆಳಗಿಳಿದ ಕೆಲ ವರ್ಷಗಳ ನಂತರ ಜಾಕ್ ಮಾ ತನ್ನದೇ ಆದ ಅಲಿಬಾಬಾ ಕಂಪನಿಯನ್ನು ಪ್ರಾರಂಭಿಸಿ ಸಾವಿರಾರು ಜನರಿಗೆ ಉದ್ಯೋಗ ನೀಡಿದ ನಂತರ ಒಂದು ದಿನ ತನ್ನ ಎಲ್ಲ ಉದ್ಯೋಗಿಗಳನ್ನು ಹೊಂದಿದ ಸಮೂಹದ ಸಭೆಯಲ್ಲಿ ಈ ದಿನವನ್ನು ನೆನಪಿಸಿಕೊಂಡ.

ನೀವು ಕೇವಲ ಓರ್ವ ವ್ಯಕ್ತಿ ಎಂದು ಪರಿಗಣಿಸದೆ ನಿಮ್ಮ ಎಲ್ಲಾ ಸೇವೆಯನ್ನು ಆತನಿಗೆ ನೀಡಲು ಸಾಧ್ಯವಾದರೆ ನೀವು ಲಕ್ಷಾಂತರ ಜನರಿಗೆ ಕೂಡ ಅದೇ ಮಟ್ಟದ ಸೇವೆಯನ್ನು ನೀಡುವಿರಿ. ಆ ಒಂದು ಕ್ಷಣದ ಅವಮಾನ ಆತನ ಬಹುದೊಡ್ಡ ಯೋಜನೆಗೆ ಮೂಲ ಬೀಜವಾಗಿ ಕಾರ್ಯನಿರ್ವಹಿಸಿತು.

ಅದೆಷ್ಟೇ ಬೇಡಿಕೆ ಕಡಿಮೆ ಇದ್ದರೂ ಪರವಾಗಿಲ್ಲ ಪ್ರತಿಯೊಬ್ಬ ಗ್ರಾಹಕನು ಅತ್ಯಮೂಲ್ಯವಾದ ಸೇವೆಯನ್ನು ಬಯಸಿದಾಗ ನಾವು ಕೊಡಲು ಸಿದ್ದರಿರಬೇಕು. ಸಣ್ಣ ಮಟ್ಟದ ವೀಕ್ಷಕರು ಮತ್ತು ಗ್ರಾಹಕರು ನಮಗೆ ಹೆಚ್ಚು ಅವಶ್ಯಕ.ಚಂದ್ರನ ಮೇಲೆ ಕಾಲಿಡಲು ಕೂಡ ಮೊದಲು ಒಂದು ಪುಟ್ಟ ಹೆಜ್ಜೆಯನ್ನು ಇಡಬೇಕಲ್ಲವೇ?

ಅತಿ ದೊಡ್ಡ ಸಾಗರವನ್ನು ಸೇರಲು ಓಡುವ ಪುಟ್ಟ ನದಿಯು ಕೂಡ ತನ್ನ ಮೂಲದಲ್ಲಿ ಒಂದು ಸಣ್ಣ ನೀರಿನ ಹರಿವಾಗಿರುತ್ತದೆ ಅಲ್ಲವೇ?

ಪ್ರತಿ ಸಣ್ಣ ಹೆಜ್ಜೆ, ಪ್ರತಿ ಸಣ್ಣ ಕೋಣೆ, ಭೇಟಿಯಾಗುವ ಪ್ರತಿಯೊಬ್ಬ ವ್ಯಕ್ತಿ ನಮ್ಮ ಬದುಕಿನಲ್ಲಿ ಅತ್ಯವಶ್ಯಕ ಬದಲಾವಣೆಯನ್ನು ತರಲು ಸಾಧ್ಯ

ಜಾಕ್ ಹೇಳುವ ಪ್ರಕಾರ ಖಾಲಿ ಕುರ್ಚಿಗಳು ಆತನಿಗೆ ಭಯವನ್ನು ಹುಟ್ಟಿಸಲಿಲ್ಲ, ಬದಲಾಗಿ ಆತನ ಆತ್ಮವಿಶ್ವಾಸವನ್ನು ಹೆಚ್ಚಿಸಿದವು. ಬಹುತೇಕ ಬಹಳಷ್ಟು ಉದ್ದಿಮೆದಾರರು ಮರೆಯುವ ಒಂದು ವಿಷಯವನ್ನು ಜಾಕ್ ಅತ್ಯಂತ ಸ್ಪಷ್ಟವಾಗಿ ತಿಳಿದುಕೊಂಡಿದ್ದ. ತುಂಬಿದ ಸಭಾಂಗಣದಿಂದ ಯಶಸ್ಸನ್ನು ಗುರುತಿಸಬಾರದು... ಸಂಪೂರ್ಣ ಖಾಲಿಯಾಗಿರುವ ಕೋಣೆ ಕೂಡ ನಿನ್ನ ಯಶಸ್ಸಿಗೆ ದಾರಿ ದೀಪವಾಗಬಲ್ಲದು.

ನಿಜ ಅಲ್ಲವೇ ಸ್ನೇಹಿತರೆ?

ಅತ್ಯಂತ ದೊಡ್ಡ ಕೋಣೆಯಲ್ಲಿ ಹಚ್ಚಿಟ್ಟ ಒಂದು ಕಿರು ಹಣತೆ ಕೂಡ ಕತ್ತಲನ್ನು ಓಡಿಸಲು ಸಾಧ್ಯ.

ನಮ್ಮ ಭವಿಷ್ಯದ ಬದುಕನ್ನು ನಮ್ಮ ಇಂದಿನ ಚಿಕ್ಕಪುಟ್ಟ ನಡೆಗಳ ಮೂಲಕ ನಾವು ಗುರುತಿಸಿಕೊಳ್ಳಬಹುದು.

ನೀವು ಕೇವಲ ಮೂರು ನಾಲ್ಕು ಜನ ನೋಡುತ್ತಿರುವ ನೇರ ಪ್ರಸಾರವೇ ಇರಬಹುದು, ಕೆಲವೇ ಕೆಲವು ಜನರು ಲೈಕ್ ಮಾಡುವ ಸುದ್ದಿಯೇ ಇರಬಹುದು.ಇಬ್ಬರು ಮೂವರು ವಿದ್ಯಾರ್ಥಿಗಳಿಂದ ಕೂಡಿದ ತರಗತಿಯೇ ಇರಲಿ ಕೇವಲ ಒಂದು ವಿಷಯದ ಕುರಿತು ಮಾತನಾಡುವುದೇ ಇರಲಿ, ಕೊನೆಯ ಪಕ್ಷ ಯಾರು ಕೂಡ ನಮ್ಮನ್ನು ಪ್ರಶ್ನಿಸಲು ಸಾಧ್ಯವಾಗದ,ಬೇರೆಯವರು ನಮ್ಮನ್ನು ನೋಡುತ್ತಿದ್ದಾರೆಯೋ ಇಲ್ಲವೋ ಎಂಬುದನ್ನು ಕೂಡ ಅರಿಯಲು ಆಗದ ಏಕಮುಖ ಪ್ರಸಾರ ವ್ಯವಸ್ಥೆಯೇ ಇರಲಿ.... ಪ್ರತಿಯೊಬ್ಬ ವ್ಯಕ್ತಿಯು ಕೂಡ ನಮಗೆ ತನ್ನ ಬಹುಮೂಲ್ಯ ಸಮಯವನ್ನು ನೀಡಿರುತ್ತಾನೆ . ಅವರ ಸಮಯಕ್ಕೆ ನಾವು ಬೆಲೆ ಕೊಡಲೇಬೇಕು. ಚಾಂಪಿಯನ್ ಎಂದೆನಿಸಿಕೊಳ್ಳುವ ವ್ಯಕ್ತಿ ಯಾರು ನೋಡಲಿ ಬಿಡಲಿ ಪ್ರತಿದಿನ ತನ್ನ ತರಬೇತಿಯನ್ನು ಪೂರೈಸುತ್ತಾನೆ.

ನಮ್ಮ ರಾಷ್ಟ್ರಕವಿ ಜಿಎಸ್ ಶಿವರುದ್ರಪ್ಪನವರು ಹೇಳಿರುವ ಗೀತೆಯ ಸಾಲುಗಳು ನೆನಪಾಗುತ್ತಿವೆ ಎದೆ ತುಂಬಿ ಹಾಡಿದೆನು ಅಂದು ನಾನು  ಮನವಿಟ್ಟು ಕೇಳಿದಿರಿ ಅಲ್ಲಿ ನೀವು ಎಂಬ ಕವಿತೆಯಲ್ಲಿ ಎಲ್ಲ ಕೇಳಲಿ ಎಂದು ನಾನು ಹಾಡುವುದಿಲ್ಲ ಹಾಡುವುದು ಅನಿವಾರ್ಯ ಕರ್ಮ ನನಗೆ ಎಂಬ ಕವನದ ಸಾಲುಗಳು ಮುಂದುವರೆದು

ಹಾಡುವೆನು ಮೈದುಂಬಿ ಎಂದಿನಂತೆ ಕುಳಿತು

ಯಾರು ಕಿವಿ ಮುಚ್ಚಿದರೂ ಎನಗಿಲ್ಲ ಚಿಂತೆ ಎಂಬ ಸಾಲಿನಲ್ಲಿ ಮುಕ್ತಾಯವಾಗುವ ಕವಿತೆಯಲ್ಲಿ ಕವಿ

ಜಿ ಎಸ್ ಶಿವರುದ್ರಪ್ಪನವರು ಕೇಳುವವರಿಗಾಗಿ ಯಾರೂ ಹಾಡುವುದಿಲ್ಲ, ಬದಲಾಗಿ ತಮ್ಮ ಮನದ ತೃಪ್ತಿಗಾಗಿ, ಸಂತೋಷಕ್ಕಾಗಿ ಹಾಡುತ್ತಾರೆ. ಬದುಕಿನಲ್ಲಿ ಆತ್ಮ ತೃಪ್ತಿಯ ಮುಂದೆ ಉಳಿದೆಲ್ಲ ಸಂತಸಗಳು ಗೌಣ ಎಂಬ ಕವಿವಾಣಿ ಅದೆಷ್ಟೋ ನಿಜ ಅಲ್ಲವೇ.

ಪ್ರತಿ ಪುಟ್ಟ ಸಾಮ್ರಾಜ್ಯವು ಕೂಡ ಅದರ ಒಬ್ಬೊಬ್ಬ ಪ್ರಜೆಯಿಂದಲೂ ಆರಂಭವಾಗುತ್ತದೆ. ಪ್ರತಿಯೊಂದು ಆರಂಭ ಆರ್ಭಟಿಸುತ್ತಾ ಬರುವುದಿಲ್ಲ.

ಅತಿ ದೊಡ್ಡ ಮ್ಯಾರಥಾನ್ ಓಟವು ಕೂಡ ಮೊದಲ ಹೆಜ್ಜೆಯಿಂದಲೇ ಪ್ರಾರಂಭ. ಖಾಲಿ ಕುರ್ಚಿಯ ತತ್ವವು ನಮಗೆ ಕಲಿಸುವ ಪಾಠಗಳು ಬಹಳ. ಬದುಕಿನ ಅತ್ಯುತ್ತಮವಾದ ವಿಷಯಗಳು ತುಂಬಿದ ಸಭಾಂಗಣದಲ್ಲಿಯೇ ಹೊರಹೊಮ್ಮಬೇಕೆಂದಿಲ್ಲ. ಅತ್ಯುತ್ತಮಿಕೆ ಎಂಬುದು ಜನರು ನಿಮ್ಮ ಸಭೆಗೆ ಬಂದು ಕುಳಿತುಕೊಳ್ಳುವ ಮುನ್ನ ನೀವು ಯಶಸ್ಸಿನ ಮೊದಲ ಹೆಜ್ಜೆಯನ್ನು ಇಡುವ ಸಮಯದಲ್ಲಿಯೇ ಆರಂಭವಾಗಿರುತ್ತದೆ   ಕಡಿಮೆ ಸಂಖ್ಯೆಯ ಪ್ರೇಕ್ಷಕರು ನಿಜವಾದ ತೊಂದರೆ ಅಲ್ಲವೇ ಅಲ್ಲ ಬದಲಾಗಿ ಕಡಿಮೆ ಪ್ರಯತ್ನಗಳು ನಿಜವಾದ ತೊಂದರೆಯಾಗಿ ಪರಿಣಮಿಸುತ್ತವೆ. ಬೇರೆಯವರು ನಿಮ್ಮನ್ನು ನೋಡಲಿ ಎಂದು ಉತ್ತಮ ಪ್ರದರ್ಶನ ಕೊಡಬೇಡಿ ಬದಲಾಗಿ ನಿಮ್ಮ ತೃಪ್ತಿಗಾಗಿ ಅತ್ಯುತ್ತಮವಾದುದನ್ನು ನೀವು ನೀಡಲು ಪ್ರಯತ್ನಿಸಿ.

ಚಿಕ್ಕ ಪುಟ್ಟ ಆರಂಭಗಳನ್ನು ಸಂಭ್ರಮಿಸಿ.. ಉತ್ಸಾಹದಿಂದ ಎದುರುಗೊಳ್ಳಿ. ನಿಮ್ಮ ಯಶಸ್ಸಿನ ನಾಗಾಲೋಟಕ್ಕೆ ನೀವೇ ಮುನ್ನುಡಿ ಬರೆಯುವಿರಿ.

ಏನಂತೀರಾ ಸ್ನೇಹಿತರೆ?



ವೀಣಾ ಹೇಮಂತ್ ಗೌಡ
ಪಾಟೀಲ್
ಮುಂಡರಗಿ ಗದಗ್

# ವಿಧಿಯಾಟ ಬಲ್ಲವರಾರು?

ಸಂಜೆಯ ವೇಳೆ ಜಿಟಿಜಿಟಿ ಮಳೆ ಸುರಿಯುತ್ತಿತ್ತು. ರಸ್ತೆಯ ಗುಂಡಿಗಳೆಲ್ಲ ನೀರು ತುಂಬಿ ಕೊಂಡು, ಮೋಟಾರು ವಾಹನಗಳ ಬರುವಿಕೆಗೆ ಕಾಯುತ್ತ ಕೆಸರೆರೆಚಾಟಕ್ಕೆ ಸಿದ್ಧವಾಗಿದ್ದವು. ಗಿಡಮರಗಳೆಲ್ಲವೂ ಮಳೆಯಲ್ಲಿ ತೊಯ್ದು ಹಸುರಿನಿಂದ ಕಂಗೊಳಿಸುತ್ತಿದ್ದವು. ರಸ್ತೆಯಲ್ಲಿ ಜನಸಂಚಾರ ಬಹಳ ವಿರಳವಾಗಿತ್ತು. ಅಲ್ಲೊಂದು ಓಬಿರಾಯನ ಕಾಲದ ಮುರುಕಲು ಬಸ್ ಸ್ಟಾಪ್. ಅದೇ ಬಸ್ ಸ್ಟಾಪಿನ ನೀರು ಸೋರದ ಮೂಲೆಯೊಂದರಲ್ಲಿ ಇಬ್ಬರು ಪ್ರೇಮಿಗಳು ಕುಳಿತಿದ್ದರು. ಅವರ ನಡುವೆ ಮಾತುಕತೆಯಿಲ್ಲದೆ ಬಸ್ ಸ್ಟಾಪಿನ ಹರಿದ ಶೀಟುಗಳಿಂದ ಟಪ್ ಟಪ್ ಹನಿಗಳ ಸದ್ದು, ತಣ್ಣನೆ ಬೀಸುತ್ತಿದ್ದ ಗಾಳಿ, ದೂರದಲ್ಲೆಲ್ಲೋ ಕಪ್ಪೆ ಗೊಟರುವ ಸದ್ದು ಎಲ್ಲವೂ ಭೋರ್ಗರೆಯುವಷ್ಟರ ಮಟ್ಟಿಗೆ ಮೌನ ಅವರಲ್ಲಿ ಆವರಿಸಿತ್ತು. ಆಕಾಶ ಕೆಂಪೇರತೊಡಗಿತ್ತು. ಇನ್ನು ಸ್ವಲ್ಪ ಹೊತ್ತಿನಲ್ಲಿ ಕತ್ತಲಾಗುವ ಸೂಚನೆಯನ್ನರಿತ ಹಕ್ಕಿಗಳು ಹಾರುತ್ತ ತಮ್ಮ ಗೂಡುಗಳಿಗೆ ಮರಳುತಿದ್ದವು. ಇನ್ನೇನು ಸೂರ್ಯ ಮುಳುಗುವ ಹೊತ್ತು ಆ ಜೋಡಿಗಳು ಇನ್ನೂ ಅಲ್ಲೇ ಕುಳಿತ್ತಿದ್ದರು. ಅವರ ಕಣ್ಣುಗಳು ಶೂನ್ಯಾಕಾಶವ ದಿಟ್ಟಿಸುತ್ತಿದ್ದರೆ, ಮನಸು ಸಪ್ತಸಾಗರದಾಚೆ ದಾಟಿ ಹೋಗಿತ್ತು.

?ಸುತ್ತಲೂ ಕತ್ತಲಾವರಿಸುತ್ತಿದ್ದಂತೆ ಇಬ್ಬರೂ ಅಲ್ಲಿಂದ ಎದ್ದು ಹೊರಟರು. ಮಳೆ ಬರುತ್ತಲೆ ಇತ್ತು, ರಸ್ತೆ ನಿರ್ಜನವಾಗಿತ್ತು, ಅದೇ ರಸ್ತೆಯಲ್ಲಿ ಸಣ್ಣದಾಗಿ ನೆನೆಯುತ್ತಾ ಕೈ ಕೈ ಸೋಕಿಸಿಕೊಂಡು ಇಬ್ಬರೂ ನಡೆಯುತ್ತಿದ್ದರು. ಆ ರಸ್ತೆಯಲಿರುವ ರಾಜಪ್ಪನ ಗೂಡಂಗಡಿ ಮುಂದೆ ಒಂದಷ್ಟು ಜನ ನಿಂತಿದ್ದರು. ಅವರಿಬ್ಬರೂ ಮೊದಲಿನಂತೆ ನಾವು ಯಾರಿಗೂ ಹೆದರುವ ಅಗತ್ಯವೇ ಇಲ್ಲವೆಂದು ಆ ಜನರ ಕಣ್ಣು ಕುಕ್ಕುವ ನೋಟಗಳಿಗೆ ಸೆಡ್ಡು ಹೊಡೆದು ಗೂಡಂಗಡಿ ಮುಂದೆ ಯಾರೂ ಇಲ್ಲವೆಂಬಂತೆ ತಮ್ಮ ಪಾಡಿಗೆ ತಾವು ನಡೆದುಕೊಂಡು ಹೋಗುತ್ತಿದ್ದರು, ಅಲ್ಲಿ ನೆರೆದಿದ್ದ ಜನರ ಗುಸುಗುಸು–ಪಿಸುಪಿಸು ಮಾತುಗಳು ಪ್ರಾರಂಭವಾದವು.



ಪುಷ್ಪ ಪ್ರಸಾದ್

ರಸ್ತೆ ಬದಿಯ ಬೀದಿ ದೀಪಗಳು ಉರಿಯುತ್ತಿದ್ದವು. ಸಾಲಾಗಿ ನಿಂತ ಆ ದೀಪಗಳ ಕೆಳಗೆ ತುಂತುರು ಮಳೆಯನ್ನೂ ಲೆಕ್ಕಿಸದೆ ರಾತ್ರಿ ಹುಳ ಹುಪ್ಪಟೆಗಳು ತುಂಬಿಕೊಂಡಿದ್ದವು. ಅವರಿಬ್ಬರೂ ರಸ್ತೆಯುದ್ದಕ್ಕೂ ನಡೆಯುತ್ತಾ ಒಮ್ಮೆ ಕತ್ತಲಲಿ ಮರೆಯಾದಂತೆ, ಒಮ್ಮೆ ಆ ಮಿನುಗುವ ಬೆಳಕಲ್ಲಿ ಮಿಂಚುವಂತೆ ಸಾಗುತ್ತಿದ್ದರು, ಕೊನೆಗೂ ಬಂದೇಬಿಟ್ಟಿತು ಎರಇಡು ಕುಟುಂಬಗಳ ಗದ್ದೆಯ ದಾರಿ. ಇಲ್ಲಿಂದ ಆಕೆಯದು ಒಂದು ದಾರಿಯಾದರೆ ಆತನದು ಮತ್ತೊಂದು. ಇದೇ ಗದ್ದೆಯ ವಿಷಯಕ್ಕೆ ಕುಟುಂಬಗಳೆರಡೂ ಜಗಳ ಮಾಡಿಕೊಂಡು ಕಿತ್ತಾಡಿಕೊಂಡು ಗದ್ದೆಯಲ್ಲಿ ಎರಇಡು ದಾರಿ ಮಾಡಿದ್ದು. ಇಬ್ಬರೂ ಅದೇ ಕೊನೆ ಬಾರಿಯೆಂಬಂತೆ ಗಟ್ಟಿಯಾಗಿ ಅಪ್ಪಿಕೊಂಡರು, ಇಬ್ಬರ ಕಣ್ಣಲಿ ನೀರು ಹನಿಯುತಿತ್ತು. ಎರಡು ಜೀವಗಳು ಅಗಲಿ ತಮ್ಮ ತಮ್ಮ ಮನೆ ಸೇರಿದರು. ಗೋಡೆ ಗಡಿಯಾರ ಹತ್ತು ಸಲ ಢಣ್ ಢಣ್ ಎಂದು ಹೊಡೆದುಕೊಳ್ಳುವಷ್ಟರಲ್ಲಿ ಆ ಘಳಿಗೆಗಾಗಿ ಕಾದು ಕಾದು ಬಸವಳಿದಿದ್ದ ಅವರಿಬ್ಬರಿಗೆ ಒಂದು ಯುಗ ಕಳೆದ ಅನುಭವವಾಗಿತ್ತು. ಅತ್ತ ಕಡೆ ಆತನು ಮನೆಯಲ್ಲಿ ತನ್ನ ಕೋಣೆಯಲ್ಲಿ ಆಕೆಯನ್ನೇ ನೆನೆಯುತ್ತಿದ್ದ, ತಾವು ಮೊದಲೇ ನಿರ್ಧರಿಸಿದಂತೆ ಇಬ್ಬರೂ ತಮ್ಮ ತಮ್ಮ ಮನೆಯ ಕೋಣೆಯೊಳಗಡೆ ಸೇರಿಕೊಂಡು ಅವಳು ಅವನನ್ನು ನೆನೆಸಿಕೊಂಡು, ಅವನು ಅವಳನ್ನು ನೆನೆಸಿಕೊಂಡು ವಿಷವನ್ನು ತೆಗೆದುಕೊಂಡರು. ಎಷ್ಟು ಹೊತ್ತಾದರೂ ಕೋಣೆಯೊಳಗಿಂದ ಉತ್ತರ ಬಾರದ್ದರಿಂದ ಎರಡೂ ಕಡೆ ಮನೆಯವರು ಬಾಗಿಲು ಮುರಿದು ಒಳನುಗ್ಗಿದರು. ಆತ ಆಸ್ಪತ್ರೆ ಸೇರುವಷ್ಟರಲ್ಲೇ ಮೃತಪಟ್ಟನು! ಅದೃಷ್ಟಾವತ್ ಆಕೆ ಬದುಕುಳಿದಳು. ಹುಡುಗನ ಮನೆಯವರು ಅವನ ಕಾರ್ಯಕೆ ಓಡಾಡುತ್ತಿದ್ದರೆ, ಹುಡುಗಿಯ ಮನೆಯವರು ಅವಳಿಗೆ ಗಂಡು ಗೊತ್ತು ಮಾಡಿ ಮದುವೆ ಶಾಸ್ತ್ರಕ್ಕೆ ತಯಾರಿ ನಡೆಸುತ್ತಿದ್ದರು.  ಇತ್ತ ಹುಡುಗನ ಸಮಾಧಿಯ ಮೇಲೆ ಹುಡುಗಿಯ ಮದುವೆಯ  ಸಂಭ್ರಮ ಮನೆ ಮಾಡಿತ್ತು.



# ಸಿಸ್ತಿನ, ಶಿಸ್ತಿನ ಶಿವಪ್ಪ ನಾಯಕ



**ಕನ್ನಡದ ಮಾತು ಚೆನ್ನ**
**ಕನ್ನಡದ ನೆಲ ಚೆನ್ನ**
**ಕನ್ನಡಿಗರ ಮನಸ್ಸು ಚಿನ್ನ**
**ಆಹಾ ಕನ್ನಡದ ಮಾತು ಚೆನ್ನ**
**ಕನ್ನಡದ ನೆಲ ಚೆನ್ನ**
**ಕನ್ನಡಿಗರ ಮನಸ್ಸು ಚಿನ್ನ**
**ಇಂತ ಭುವಿಯಲ್ಲಿ ನನ್ನ**
**ಜನುಮ ದೊರಕಿದ್ದೇ ಪುಣ್ಯ**
**ತುಂಗೆ ಕಾವೇರಿ ನೀರ ಕುಡಿವ ನಾವೆಲ್ಲ ಧನ್ಯಾ**
**ಹೇ ಹೇ**
**ಕನ್ನಡದ ಮಾತು ಚೆನ್ನ**
**ಕನ್ನಡದ ನೆಲ ಚೆನ್ನ**
**ಕನ್ನಡಿಗರ ಮನಸ್ಸು ಚಿನ್ನ**

ಶಿವಪ್ಪ ನಾಯಕ (ಶಿವಪ್ಪ ನಾಯಕ) (1645–1660), ಕೆಳದಿ ಶಿವಪ್ಪ ನಾಯಕ ಎಂದು ಜನಪ್ರಿಯವಾಗಿ ನಾಯಕರು, ಒಬ್ಬ ಭಾರತೀಯ ರಾಜ ಮತ್ತು ಕೆಳದಿ ಸಾಮ್ರಾಜ್ಯದ ಆಡಳಿತಗಾರ. ಇತಿಹಾಸದಲ್ಲಿ ಕೃಷಿ, ಕಂದಾಯ ಮತ್ತು ಸೈನಿಕ ವ್ಯವಸ್ಥೆಯಲ್ಲಿ ಮಹತ್ವದ ಸುಧಾರಣೆಗಳನ್ನು ತಂದ ಕೀರ್ತಿಗೆ ಪಾತ್ರನಾಗಿದ್ದಾನೆ.

ಪ್ರಮುಖ ಸುಧಾರಣೆಗಳು ಮತ್ತು ಸಾಧನೆಗಳು

■ **ಸಿಸ್ತ್ ಕಂದಾಯ ಪದ್ಧತಿ**

ಶಿವಪ್ಪ ನಾಯಕನು ಪರಿಚಯಿಸಿದ ಅತ್ಯಂತ ಪ್ರಸಿದ್ಧ ಮತ್ತು ವೈಜ್ಞಾನಿಕ ಆಡಳಿತ ಸುಧಾರಣೆಯೆಂದರೆ ಸಿಸ್ತ್ ಕಂದಾಯ ಪದ್ಧತಿ.

ವೈಜ್ಞಾನಿಕ ವಿಂಗಡಣೆ: ಮೊಗಲ್ ಚಕ್ರವರ್ತಿ ಅಕ್ಬರ್‌ನ ಕಂದಾಯ ಯೋಜನೆಗಳಿಗೆ ಹೋಲಿಕೆ ಮಾಡುವ ಈ ಯೋಜನೆಯಲ್ಲಿ, ಕೃಷಿ ಭೂಮಿಯನ್ನು ಮಣ್ಣಿನ ಪ್ರಕಾರ (ಉದಾಹರಣೆಗೆ, ಗದ್ದೆ, ತೋಟ, ಬಯಲು) ಮತ್ತು ನೀರಾವರಿ ಸೌಲಭ್ಯಗಳ ಆಧಾರದ ಮೇಲೆ ಐದು ವಿಧಗಳಾಗಿ ವಿಂಗಡಿಸಲಾಯಿತು.

ಅಳತೆಯ ಮಾನದಂಡ: ಖಂಡುಗ ಎಂಬ ಬಿತ್ತನೆ ಸಾಮರ್ಥ್ಯದ ಘಟಕವನ್ನು ಅಭಿವೃದ್ಧಿಪಡಿಸಲಾಯಿತು.

ಕಂದಾಯ ನಿಗದಿ: ಪ್ರತಿ ನೀರಾವರಿ ಭೂಮಿಗೆ 'ಖಂಡುಗ'ದ ಆಧಾರದ ಮೇಲೆ ತೆರಿಗೆಯನ್ನು ನಿಗದಿಪಡಿಸಲಾಯಿತು. ತೆರಿಗೆಯ ದರವು ಒಟ್ಟು ಇಳುವರಿಯ ಮೂರನೇ ಒಂದು ಭಾಗದಷ್ಟಿತ್ತು (1/3). ಈ ದರವು ರೈತರಿಗೆ ಅನುಕೂಲಕರವಾಗಿತ್ತು ಮತ್ತು ಕೃಷಿ ಆರ್ಥಿಕತೆ ವಿಸ್ತಾರಗೊಳ್ಳಲು ಕಾರಣವಾಯಿತು.

■ **ಸೈನಿಕ ಮತ್ತು ಪ್ರಾದೇಶಿಕ ವಿಸ್ತರಣೆ**

ಶಿವಪ್ಪ ನಾಯಕನು ಕೆಳದಿ ಸಾಮ್ರಾಜ್ಯದ ಗಡಿಗಳನ್ನು ಸಮರ್ಥವಾಗಿ ವಿಸ್ತರಿಸಿದನು.

ವಿಜಯನಗರದ ರಕ್ಷಣೆ: ವಿಜಯನಗರ ಸಾಮ್ರಾಜ್ಯದ ಅರಸ ಮೂರನೆಯ ಶ್ರೀರಂಗರಾಯ ಬಿಜಾಪುರ ಸುಲ್ತಾನರಿಂದ ಸೋತಾಗ, ಶಿವಪ್ಪ ನಾಯಕನು ಆತನಿಗೆ ಆಶ್ರಯ ನೀಡಿ, ಹಿಂದೂ ಧರ್ಮರಕ್ಷಣೆಯ ತನ್ನ ಪಾತ್ರವನ್ನು ನಿಭಾಯಿಸಿದನು.

- **ಪೋರ್ಚುಗೀಸರ ವಿರುದ್ಧ ಹೋರಾಟ: ಪಶ್ಚಿಮ ಕರಾವಳಿಯ ಮೇಲೆ ಪೋರ್ಚುಗೀಸರ ಹಿಡಿತವನ್ನು ಮುರಿಯಲು ನಿರ್ಣಾಯಕ ಕ್ರಮಗಳನ್ನು ತೆಗೆದುಕೊಂಡನು. 1653ರ ಹೊತ್ತಿಗೆ ಮಂಗಳೂರು, ಕುಂದಾಪುರ ಮತ್ತು ಹೊನ್ನಾವರ ಬಂದರುಗಳನ್ನು ತನ್ನ ನಿಯಂತ್ರಣಕ್ಕೆ ತಂದನು, ಇದರಿಂದಾಗಿ ಸಾಮ್ರಾಜ್ಯದ ವ್ಯಾಪಾರ ವೃದ್ಧಿಸಿತು.**
- **ದಕ್ಷಿಣದ ವಿಜಯ: ಕನ್ನಡ ಕರಾವಳಿಯನ್ನು ಗೆದ್ದ ನಂತರ, ಅವರು ಆಧುನಿಕ ಕೇರಳದ ಕಾಸರಗೋಡು ಪ್ರದೇಶಕ್ಕೆ ದಂಡೆತ್ತಿ ಹೋಗಿ ನೀಲೇಶ್ವರದಲ್ಲಿ ವಿಜಯಸ್ತಂಭವನ್ನು ಸ್ಥಾಪಿಸಿದರು.**

■ **ಕೋಟೆ ನಿರ್ಮಾಣಗಳು**

ತನ್ನ ಸಾಮ್ರಾಜ್ಯವನ್ನು ರಕ್ಷಿಸಲು ಮತ್ತು ಬಲಪಡಿಸಲು ಶಿವಪ್ಪ ನಾಯಕನು ಅನೇಕ ಕೋಟೆಗಳನ್ನು ನಿರ್ಮಿಸಿದನು ಅಥವಾ ಸುಧಾರಿಸಿದನು:

- **ಬೇಕಲ್ ಕೋಟೆ (ಕೇರಳ)**
- **ಚಂದ್ರಗಿರಿ ಕೋಟೆ**
- **ಅಡ್ಕ ಕೋಟೆ**
- **ಆರಿಕ್ಕಾಡಿ ಮತ್ತು ಮಂಗಳೂರು ಕೋಟೆಗಳನ್ನು ಬಲಪಡಿಸಿದನು.**
- **ಶಿವಮೊಗ್ಗದ ಸಮೀಪವಿರುವ ನಗರ ಕೋಟೆ (ಬಿಡನೂರು ಕೋಟೆ) ಈತನ ಆಳ್ವಿಕೆಯ ಅವಧಿಯಲ್ಲಿ ಹೆಚ್ಚು ಅಭಿವೃದ್ಧಿ ಹೊಂದಿತು ಮತ್ತು ಕೆಳದಿಯ ಅಂತಿಮ ರಾಜಧಾನಿಯಾಯಿತು.**





ಶಿವಪ್ಪ ನಾಯಕನು ತನ್ನ ದಕ್ಷ ಆಡಳಿತ ಮತ್ತು ನ್ಯಾಯಸಮ್ಮತ ಕಂದಾಯ ಪದ್ಧತಿಯ ಮೂಲಕ ಇಂದಿಗೂ ಸ್ಮರಣೀಯನಾಗಿದ್ದಾನೆ.

ಶಿವಪ್ಪ ನಾಯಕನ ಆಳ್ವಿಕೆಯ ಕಾಲದ ಸ್ವಾರಸ್ಯಕರ ಪ್ರಸಂಗ ಹೀಗಿದೆ. ಗಣೇಶ್ ಮಲ್ಯ ಎಂಬ ಬಡ ಬ್ರಾಹ್ಮಣನು ಉದ್ಯೋಗ ಹುಡುಕುವ ಉದ್ದೇಶದಿಂದ ರಾಜಧಾನಿ ಕೆಳದಿಗೆ ಬಂದನು. ಹಣವಿಲ್ಲದ ಕಾರಣ ಮನೆಯಲ್ಲಿ ಬೆಳೆದ ತೆಂಗಿನಕಾಯಿ ತುಂಬಿದ ಚೀಲವನ್ನು ಹೊತ್ತೊಯ್ದರು. ನಗರವನ್ನು ಪ್ರವೇಶಿಸುವ ಮೊದಲು, ಪ್ರತಿಯೊಬ್ಬ ಪ್ರಯಾಣಿಕರು ಎಂಟು ಟೋಲ್ ಗೇಟ್‌ಗಳ ಮೂಲಕ ಹಾದುಹೋಗಬೇಕಾಗಿತ್ತು, ಪ್ರತಿಯೊಂದೂ ಟೋಲಿನಲ್ಲೂ ತೆರಿಗೆಯನ್ನು ನೀಡುವುದಿತ್ತು. ಅವರು ತಮ್ಮ ಬಳಿ ಹಣ ಇಲ್ಲದ ಕಾರಣ, ಗಣೇಶ್ ಮಲ್ಯ ಅವರು ಪ್ರತಿ ಟೋಲ್ ಗೇಟ್‌ನಲ್ಲಿ ಎರಡು ತೆಂಗಿನಕಾಯಿಗಳನ್ನು ಹಂಚಿಕೊಳ್ಳಬೇಕಾಯಿತು, ಒಂದನ್ನು ತೆರಿಗೆ ಮತ್ತು ಇನ್ನೊಂದನ್ನು ಅಧಿಕಾರಿಗೆ ಉಡುಗೊರೆಯಾಗಿ ನೀಡಲಾಯಿತು. ನಗರದ ಪ್ರವೇಶ ದ್ವಾರದಲ್ಲಿ ಎರಡು ತೆಂಗಿನಕಾಯಿ ಸಹ ಪಾವತಿಸಿದರು. ಎಲ್ಲಾ ಟೋಲ್‌ಗಳಿಂದ ನಿರಾಶೆಗೊಂಡ ಮಲ್ಯ ಅವರು ಧೈರ್ಯದಿಂದ ತಮ್ಮದೇ ಆದ ಟೋಲ್ ಗೇಟ್ (ಒಂಬತ್ತನೇ ಟೋಲ್ ಗೇಟ್) ಸ್ಥಾಪಿಸಿದರು ಮತ್ತು ತಮ್ಮ ಸ್ವಂತ ರಿಜಿಸ್ಟರ್‌ನಲ್ಲಿ ನಗರಕ್ಕೆ ಬರುವ ಪ್ರಯಾಣಿಕರ ಸಂಪೂರ್ಣ ವಿವರಗಳನ್ನು ನೋಂದಾಯಿಸಿದ ನಂತರ ಟೋಲ್ ಸಂಗ್ರಹಿಸಿದರು. ಟೋಲ್‌ಗೆ ಪ್ರತಿಯಾಗಿ, ಗಣೇಶ್ ಮಲ್ಯ ಅವರು ಹದಿನೆಂಟು ತೆಂಗಿನಕಾಯಿಗಳಿಗೆ ಹೊಸ ಕಸ್ಟಮ್ ಸ್ಟೇಷನ್, ಕುಮಟಾದ ಗಣೇಶಯ್ಯ ರಾಜರ ಸಹಿಯೊಂದಿಗೆ ಚೀಟಿಯನ್ನು ನೀಡಿದರು . ಇದು ಹದಿನೆಂಟು ತಿಂಗಳುಗಳ ಕಾಲ ರಾಜ ಶಿವಪ್ಪ ನಾಯಕನಿಗೆ ಕೇಳುವ ಮೊದಲು ಯಾರೂ ಗಮನಿಸಲಿಲ್ಲ. ರಾಜನು ಕರೆಸಿದಾಗ, ಜೀವನೋಪಾಯಕ್ಕಾಗಿ ಅಕ್ರಮ ಟೋಲ್ ಸಂಗ್ರಹಿಸಿದ್ದಾಗಿ ಗಣೇಶ್ ಮಲ್ಯ ಒಪ್ಪಿಕೊಂಡಿದ್ದಾನೆ. ಅವರ ಪ್ರಾಮಾಣಿಕತೆ ಮತ್ತು ವ್ಯವಹಾರ ಕುಶಾಗ್ರಮತಿಯಿಂದ ಪ್ರಭಾವಿತರಾದ ಶಿವಪ್ಪ ನಾಯಕ ಗಣೇಶ್ ಮಲ್ಯರನ್ನು ತಮ್ಮ ಸೇವೆಗೆ ತೆಗೆದುಕೊಂಡರು ಎಂಬುದಾಗಿ ಇತಿಹಾಸ ಹೇಳುತ್ತದೆ.

ಕೆಳದಿಯ ಶಿವಪ್ಪ ನಾಯಕನು ಕಟ್ಟಿಸಿದ ಕಾಡಿನ ಅರಮನೆಯನ್ನು ಕುರಿತು ಹೇಳುವುದಾದರೆ, ಶಿವಪ್ಪನಾಯಕನ ಅರಮನೆ ಶಿವಮೊಗ್ಗ ನಗರದ ಏಕಮಾತ್ರ ಪ್ರವಾಸಿ ಕೇಂದ್ರವಾಗಿದೆ. ಕೆಳದಿ ಸೋಮಶೇಖರ ನಾಯಕನ ಕಾಲದ ತಾಮ್ರಪತ್ರದಲ್ಲಿ ಈ ಅರಮನೆಯ ಉಲ್ಲೇಖವಿದೆ. ಈ ಅರಮನೆ ಕೆಳದಿ ಅರಸರ ಬೇಸಿಗೆ ಅರಮನೆಯಾಗಿತ್ತು. ಸಂಪೂರ್ಣ ಮರದಲ್ಲಿ ನಿರ್ಮಾಣವಾಗಿರುವ ಅರಮನೆಯು ಕಲೆಗಾರಿಕೆಗೆ, ವಿಶಾಲತೆಗೆ, ಕುಸುರಿ ಕೆತ್ತನೆಗೆ ಗಾಂಭೀರ್ಯತೆಗೆ ಪ್ರತೀಕವಾಗಿದ್ದು, ಮಲೆನಾಡಿನ ವಿಶಿಷ್ಟ ವಾಸ್ತುಶಿಲ್ಪವನ್ನು ಮೈಗೂಡಿಸಿಕೊಂಡು ಕಂಗೊಳಿಸುತ್ತಿದೆ. ನಾಗರೀಕತೆಯ ಅಮಲಿನಲ್ಲಿ ಯಾಂತ್ರಿಕರಣ ದಾಪುಗಾಲಿಡುತ್ತಿರುವ ಈ ಶಿವಮೊಗ್ಗ ನಗರದಲ್ಲಿ ಅಂದಿನ ರಾಜವೈಭವವನ್ನು ನೆನಪಿಸುವ ಕೆಳದಿ ಅರಸರ ಅರಮನೆ ಇದೆ. ಇದು ಜಿಲ್ಲೆಯ ಪ್ರೇಕ್ಷಣೀಯ ಸ್ಥಳಗಳಲ್ಲಿ ಒಂದಾಗಿದ್ದರೂ ಅತ್ಯಂತ ಕಡೆಗಣಿಸಲ್ಪಟ್ಟಿರುವ ಸ್ಥಳವಾಗಿದೆ ಎಂಬುದೇ ವಿಪರ್ಯಾಸ! ಕನ್ನಡ ನಾಡಿನ ಜನತೆ ಇಂಥ ವೀರಪುರುಷರ ಸಾಹಸವನ್ನು ಗೌರವಿಸಬೇಕು. ವಂದನೆಗಳು.



ರೂಪ ಮಂಜುನಾಥ
ಹೊಳೆನರಸೀಪುರ

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,